


ಗಗನ ಗಂಗೆ

ಸಂಪಾದಕ

ಗೌರಿ ಸುಂದರ್

ಗಗನ ಗಂಗೆ



ವಿವಿಧ ಲೇಖಕರು

ಸಂಪಾದಕ
ಗೌರಿಸುಂದರ್

ಸುಂದರ ಪ್ರಕಾಶನ
ಚಿತ್ರಶ್ರೀ, 43, ಕಲಾಮಂದಿರ 6ನೇ ತಿರುವು
ಅ ನ ಸು ರಸ್ತೆ, ಹನುಮಂತನಗರ
ಬೆಂಗಳೂರು - 560019

GAGANAGANGA - Tribuling articles about Smt Gangubai hangal edited by Sri Gouri Sundar

copy right	:	Author
Published	:	**Sri Gauri Sunder** **Sundara Prakashana** 'Chitrasri'-43,Kalamandir 5thCross, ANS Road, Hanumantha Nagar Bangalore - 560 019 Tel.:80-65623165, 9243125699
Paper Used	:	
1st Impression	:	2009
Copies	:	1000
Pages	:	124
Price	:	**Rs. 90.00**
DTP	:	Manjula - 9901032843
Printed at	:	ಪೂರ್ಣಿಮಾ ಪ್ರಿಂಟರ್ಸ್ POORNIMA PRINTERS ನಂ. 1/2, 7ನೇ ಅಡ್ಡ ರಸ್ತೆ, ಆಜಾದ್‌ನಗರ ಚಾಮರಾಜಪೇಟೆ, ಬೆಂಗಳೂರು-560 018. ಫೋನ್ : 080-3292 4462, ಮೊ : 9341931668

ಸುಂದರ ಪ್ರಕಾಶನದ ಗೌರವಾನ್ವಿತ ಸಲಹೆಗಾರರು

ಪ್ರೊ.ಜಿ.ವೆಂಕಸುಬ್ಬಯ್ಯ
ಪ್ರೊ.ಎಲ್.ಎಸ್.ಶೇಷಗಿರಿ ರಾವ್
ಶ್ರೀ ವಿಶ್ವೇಶ್ವರ ಭಟ್
ಶ್ರೀ ವಿ.ಎನ್. ಸುಬ್ಬರಾವ್
ಡಾ॥ ಚಂದ್ರಶೇಖರ ಕಂಬಾರ
ಶ್ರೀ ಸಿ.ಆರ್.ಸಿಂಹ
ಪ್ರೊ.ಕೆ.ಇ. ರಾಧಾಕೃಷ್ಣ
ಶ್ರೀ ಹೆಚ್.ಜಿ.ಸೋಮಶೇಖರ್ ರಾವ್
ಶ್ರೀ ಕೆ.ಎಸ್.ಎಲ್.ಸ್ವಾಮಿ (ರವೀ)
ಶ್ರೀಮತಿ. ಇಂದಿರಾ ಸುಂದರ್

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಗೌರಿ ಸುಂದರ್

ಸದಸ್ಯರು

ಶ್ರೀ ಎಂ.ಎ.ವೆಂಕಟೇಶ್
ಶ್ರೀ ಎನ್.ಎಸ್.ಶ್ರೀಧರ ಮೂರ್ತಿ
ಶ್ರೀ ಎ.ಎಸ್.ಮೂರ್ತಿ
ಶ್ರೀ ಜಗನ್ನಾಥ ಬಹುಳೆ
ಶ್ರೀಮತಿ ಇಂದಿರಾ ಸುಂದರ್

ಛಾಯಗ್ರಾಹಕರು

ಶ್ರೀ ಡಿ.ಸಿ.ನಾಗೇಶ್
ಶ್ರೀ ಕೆ.ಎಸ್.ನಾಗೇಶಕುಮಾರ್
ಶ್ರೀ ಮನು

ಸಂದೇಶ

ಖ್ಯಾತ ಗಾಯಕಿ ಡಾ: ಗಂಗೂಬಾಯಿ ಹಾನಗಲ್ ಅವರು ಸಂಗೀತ ಕ್ಷೇತ್ರದ ಅನಭಿಷಿಕ್ತ ಸಾಮ್ರಾಜ್ಞಿ ಆಗಿದ್ದರೂ "ಬಾಗಿದ ತಲೆ, ಮುಗಿದ ಕೈ" ಆದ ತಮ್ಮ ವಿನಮ್ರ ಬದುಕಿನಿಂದ ನಾಡಿನ ಜನತೆಯ ಮನವನ್ನು ಗೆದ್ದವರಾಗಿದ್ದಾರೆ.ದಣಿವರಿಯದ ಕೋಗಿಲೆಯಂತೆ ಹಾಡಿದ ಈ ಹಿರಿಯ ಪ್ರತಿಭೆ ದೇಶ ವಿದೇಶಗಳಲ್ಲಿ ಕನ್ನಡ ಡಿಂಡಿಂಮವನ್ನು ನುಡಿಸಿದ್ದಾರೆ, ನಾಡ ದೇವಿಯ ಮುಡಿಗೆ ತಮ್ಮ ದಾಖಲೆಯ ಸಾಧನೆಯ ಕಿರೀಟವನ್ನು ತೊಡಿಸಿದ್ದಾರೆ. ಅವರ ನಿಧನದಿಂದ ಸಂಗೀತ ಕ್ಷೇತ್ರ ಬಡವಾಗಿದೆ. ಕಾಯ ಅಳಿದರೂ ಅವರ ಸಂಗೀತ ಚಿರಂಜೀವಿ ಆಗಿದೆ; ಇಂದಿನ ಸಾಧಕರ ಕೈದೀವಿಗೆಯಾಗಿದೆ.

ದಿವಂಗತರ ಶ್ರದ್ಧಾಂಜಲಿ ಸಮಾರಂಭ ಏರ್ಪಾಡಾಗಿರುವುದು, ಸಾಕ್ಷಾತ್ಕಾರ ಗ್ರಂಥ ಲೋಕಾರ್ಪಣೆ ಆಗುತ್ತಿರುವುದು ಸ್ತುತ್ಯಾರ್ಹವಾಗಿದೆ.ನಿಮ್ಮ ಕಾರ್ಯಕ್ರಮಗಳು ಯಶಸ್ವಿ ಆಗಲಿ ದಿವಂಗತರ ಕುಟುಂಬ ವರ್ಗದವರಿಗೆ ಮತ್ತು ಅಭಿಮಾನಿಗಳಿಗೆ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಮನಸಾರೆ ಹಾರೈಸುತ್ತೇನೆ.

ಇತ್ಯಾಶಿಷಃ
ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು

ದೂರವಾಣಿ 91-080-23300923, 23103729
ಫ್ಯಾಕ್ಸ್ 080-23385905/23382659
Email Adichunchanagiri@...
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ವಿಜಯನಗರ, ಬೆಂಗಳೂರು - 560 040.
SRI ADICHUNCHANAGIRI MAHASAMSTHANA MATH
VIJAYANAGAR, BANGALORE - 560 040.

ಸಂದೇಶ

ಹಿಂದೂಸ್ಥಾನಿ ಸಂಗೀತ ಕ್ಷೇತ್ರದ ಧ್ರುವತಾರೆ ಎಂದು ಖ್ಯಾತವಾಗಿದ್ದ ಗಾನ ವಿದುಷಿ ಪದ್ಮಭೂಷಣ ಡಾ:ಗಂಗೂಬಾಯಿ ಹಾನಗಲ್ ಅವರು ನಿಧನರಾದುದು ಅತ್ಯಂತ ವಿಷಾದನೀಯ. ಆಡಂಬರ ನಾಗರೀಕತೆ ಹಾಗೂ ದೇಶ ವಿದೇಶಗಳ ಆಧುನಿಕ ನಾಗರೀಕತೆಯ ಸಂಸ್ಕೃತಿಗಳ ಸಂಘರ್ಷದ ಸಂದರ್ಭದಲ್ಲಿಯೂ ಭಾರತೀಯ ಪರಂಪರೆ ಹಾಗೂ ವಿದೇಶೀ ಸಂಸ್ಕೃತಿಗೆ ಮೆರುಗನ್ನು ತಂದವರು ಇವರು. ಗಂಗೂಬಾಯಿಯವರ ನಿಧನದಿಂದ ಸಂಗೀತ ಕ್ಷೇತ್ರ ಅಪೂರ್ವ ನಿಧಿಯೊಂದಿಗೆ ಕಳೆದುಕೊಂಡಂತಾಗಿದೆ. ಇವರು ಪಾಂಚಭೌತಿಕ ದೇಹವನ್ನು ತೊರೆದಿದ್ದರೂ ಅವರ ಆತ್ಮದ ಪ್ರಭಾವ ಸಂಗೀತ ಪ್ರೇಮಿಗಳ ಮೇಲಿರುತ್ತದೆಂದು ಭಾವಿಸುತ್ತೇನೆ. ಪ್ರಸ್ತುತ ಅವರ ಶಿವಗಣಾರಾಧನೆಯ ಸಂದರ್ಭದಲ್ಲಿ ಹಾನಗಲ್ ಅವರ ಸಾರ್ಥಕ ಬದುಕನ್ನು ಪ್ರತಿಬಿಂಬಿಸುವ ಕೃತಿಯೊಂದನ್ನು ಬಿಡುಗಡೆ ಮಾಡುತ್ತಿರುವುದು ಸಂದರ್ಭೋಚಿತವಾಗಿದೆ. ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬವರ್ಗ ಹಾಗೂ ಬಂಧುಮಿತ್ರರಿಗೆ ನೀಡಲೆಂದು, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದೂ ಆಶಿಸುತ್ತೇನೆ.

(ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥಸ್ವಾಮಿಗಳು)
ಪೀಠಾಧ್ಯಕ್ಷರು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಮಠ.

ಡಿ. ವೀರೇಂದ್ರ ಹೆಗ್ಗಡೆಯವರು
ಶ್ರೀ ಧರ್ಮಸ್ಥಳ - 574 216
ಕರ್ನಾಟಕ.

ಫೋನ್ 08256 277121
E-Mail : dvheggade@hotmail.com

ಸಂದೇಶ

ಡಾ:ಗಂಗೂಬಾಯಿ ಹಾನಗಲ್ ಬದುಕು ಅವರ ಸಂಗೀತ ಕಲೆಯಿಂದ ಸಾರ್ಥಕವಾಯಿತು.

ಪ್ರಥಮವಾಗಿ ಡಾ: ಗಂಗೂಬಾಉಇ ಹಾನಗಲ್ ಅವರ ಜೀವನ ಸಾಧನೆ ಬಗ್ಗೆ ಕೇಳುವಾಗ ನನಗಿನ್ನೂ ಉತ್ತರ ಕನ್ನಡದ ಹಾಗೂ ಧಾಋವಾಡದ ಹೆಚ್ಚು ಪರಿಚಯ ಆಗಿರಲಿಲ್ಲ. ನಾನು ಅಂದುಕೊಂಡಂತೆ ಇವರು ಉತ್ತರ ಭಾರತದ ಯಾರೋ ಒಬ್ಬ ಖ್ಯಾತ ಕಲಾವಿದೆ ಆಗಿರಬಹುದು ಎಂದು ಭಾವಿಸಿದ್ದೆ.

ಆದರೆ, ನಾವು ಧಾರವಾಡದ ಜನತಾ ಶೀಕ್ಷಣ ಸಮಿತಿಯ ಆಡಳಿತವನ್ನು ವಹಿಸಿಕೊಂಡಾಗ ಅವರು ಆಡಳಿತ ಸಮಿತಿಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ ನನಗೆ ಹೆಚ್ಚು ನಿಕಟ ಪರಿಚಯವಾಯಿತು.

ಅತ್ಯಂತ ಸರಳ ಜೀವನ ನಡೆಸುತಿದ್ದ ಗಂಗೂಬಾಯಿಯವರ ವ್ಯಕಿತ್ವ ಆದರ್ಶಮಯವಾಗಿದೆ. ಕಲಾವಿದರಾಗಬೇಕಾದರೆ, ಅದೂ ಒಬ್ಬ ಶ್ರೇಷ್ಠ ಕಲಾವಿದರಾಗಬೇಕಾದರೆ ಎಂತಹ ಮುಗ್ಧ, ನಿಷ್ಕಲ್ಮಶ ಹೃದಯವಿರಬೇಕು. ಮನೋಧರ್ಮವಿರಬೇಕು ಎಂಬುದು ಅವರನ್ನು ನೋಡಿದಾಗ ತಿಳಿಯಿತು.

ಪ್ರಸಿದ್ಧಿಗಾಗಿ ಆಕಾಕ್ಷೆ ಹಾಗೂ ಅಹಂಕಾರಭಾವ ಇದ್ದರೆ ಜ್ಞಾನದ ಒಳಹರಿವು ಕಮ್ಮಿಯಾಗುತ್ತದೆನೊ, ಅಂತಹ ದೋಷಗಳೀಲ್ಲದ, ಅಮೃತಕಲಶದಲ್ಲಿ ಎಲ್ಲಾ ಸತ್ವಗಳು ಒಳ ಪ್ರವೇಶಿಸಿದಾಗ, ಸಾರ್ಥಕ ಬದುಕು ಸಾಧ್ಯವಾಗುತ್ತದೆ. ಅವರು ಅಮೃತಕಲಶದಂತೆ. ಹಾಗಾಗಿ ಒಳಗೆ ಗಾನಗಂಗೆ ವಿಶಾಲವಾಗಿ ತುಂಬಿಕೊಂಡಿದೆ ಎಂದು ಭಾವಿಸುತ್ತೇನೆ.

ಅವರ ಬದುಕಿನ ಕೊನೆಯ 15 ವರ್ಷಗಳು ಯಾವ ಕಲಾವಿದನಿಗೂ ದೊರಕದ ಅಪೂರ್ವ ಸಮಯವೆಂದು ನಾನು ಯಾವಾಗಲೂ ನಮ್ಮ ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿಯವರಾದ ಮತ್ತು ಡಾ: ಗಂಗೂಬಾಯಿ ಹಾನಗಲ್ ಅವರ ಆತ್ಮೀಯರಾದ ಪ್ರೊ.ನ.ವಜ್ರಕುಮಾರ್ ಅವರಲ್ಲಿ ಹೇಳುತ್ತೇನೆ.

ಕಳೆದ 10 ವರ್ಷಗಳಲ್ಲಿ ಅವರಿಗೆ ದಿನದಹಿ ಅನ್ನುವಂತೆ ಸನ್ಮಾನಗಳು, ಪ್ರಶಸ್ತಿಗಳು, ಗೌರವಗಳು ಸಂದವು. ಬಹುಶಃ ಅಂತಹ ಗೌರವ ನೀಡಿದವರು ಅವರ ಸಂಗೀತವನ್ನು ಆಲಿಸಿದವರು ಹಾಗೂ ಅಭಿಮಾನಿಗಳು.

ಅವರಿಗೆ ದೊರೆತ ಜನಪ್ರಿಯತೆ ಮತ್ತು ಗೌರವದಿಂದ ಅವರಿ ಪುಳಕಿತರಾದ್ದರು. ಬದುಕು ಸಾರ್ಥಕವಾಯಿತು. ಭಗವಂತ ನನ್ನನ್ನು ಬೇಗನೇ ಕರತೆಮುಕೊ ಎನ್ನುವ ಭಾವನೆಯಿಂದ ಅವರು ಇದ್ದರು.

ಅವರ ಹೆಸರು ಶಾಶ್ವತವಾಗಿ ನಮ್ಮ ಸಂಸ್ಥೆಯಲ್ಲಿರಬೇಕೆಂದು ಧಾರವಾಡದಲ್ಲಿರುವ ನಮ್ಮ ಎಸ್. ಡಿ. ಎಂ.ಮೆಡಿಕಲ್ ಕಾಲೇಜಿನ ನೂತನ ಸಭಾ ಭವನದ ಶಲಾನ್ಯಾಸವನ್ನು ಅವರಿಂದಲೇ ಮಾಡಿಸಿದ್ದೇವೆ. ಅವರು ಎಂದೆಂದಿಗೂ ನಮ್ಮೊಂದಿಗಿದ್ದು ಅಲ್ಲಿ ಸ್ಫೂರ್ತಿ ನೀಡುತ್ತಾರೆಂದು ಭಾವಿಸುತ್ತೇನೆ.

ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ನೀವು ಹಮ್ಮಿಕೊಂಡ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲೆಂಮು ಹಾರೈಸುತ್ತೇನೆ.

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

(ಡಿ. ವೀರೇಂದ್ರ ಹೆಗ್ಗಡೆಯವರು)

ಮುನ್ನುಡಿ

ಸಂಭ್ರಮದಲ್ಲಿ ನೋವು

ಮೈಸೂರ ದಸರ ಯಾರಿಗೆ ತಿಳಿದಿಲ್ಲ? ಈ ಸಮಯದಲ್ಲಿ ಮೈಸೂರಿಗೆ ಮೈಸೂರೇ ಜಿನ್ನಾಣಗಿತ್ತಿಯಂತೆ ಕಂಗೊಳಿಸುತ್ತದೆ. ಅರಮನೆ, ಅರಮನೆ ದೀಪಾಲಂಕಾರ, ಆನೆ ಕುದುರೆಗಳ ಮತ್ತು ಕವಾಯಿತುದಾರರ ದಿಬ್ಬಣ ಒಂದು ಕಡೆ ರೋಮಾಂಚನವಾದರೆ ಮತ್ತೊಂದು ಕಡೆ ದರ್ಬಾರ್ ಹಾಲಿನಲ್ಲಿ ನಡೆಯುವ ಸಂಗೀತ ಸಮಾರಂಭದ ಕಾರ್ಯಕ್ರಮಗಳು. ಸ್ವಾಧಿಸುವವರಿಗೆ ರಸದೌತಣ ನೀಡುತ್ತದೆ.

ಸುಮಾರು 1980–81 ರಿಂದ ದಸರೆಯ ಕಾರ್ಯಕ್ರಮಗಳನ್ನು 12 ವರ್ಷಗಳ ಕಾಲ ವಿಡಿಯೋ ಚಿತ್ರಿಕರಣ ಮಾಡಿದ ಸುವರ್ಣ ಅವಕಾಶ ನನ್ನದು. ಕಾರಣ. ಟಿ.ವಿ. ಚಾನಲ್‌ಗಳು ಇರದಿದ್ದರೂ ಆಗತಾನೇ ವಿಡಿಯೋ ಚಿತ್ರಿಕರಣದ ಆವಿಷ್ಕಾರವಾಗಿತ್ತು. ಕರ್ನಾಟಕಕ್ಕೆ. T.V ಕ್ಯಾಮಾರಾ ತಂದವರಲ್ಲಿ ಎರಡನೇಯವನು ನಾನು.

ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯ ಹಾಗೂ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದಿಂದ ನನಗೆ ಅನುಮತಿ ಸಿಕ್ಕಿತ್ತು. ಖುದ್ದಾಗಿ ನಾನೇ ಈ ಕಾರ್ಯಕ್ರಮಗಳಲ್ಲಿ ಭಾಗ ವಹಿಸುತ್ತಿದ್ದುದ್ದು ನನ್ನ ನೆನಪಿನಂಗಳದಲ್ಲಿ ಇಂದಿಗೂ ಪುಳಕಗೊಳ್ಳುವ ದೃಷ್ಟಿಗಳಾಗಿವೆ. ಸಂಗೀತ ಲೋಕದ ದಿಗ್ಗಜರುಗಳಿಂದ ಪಂಡಿತ್ ಭೀಮ್‌ಸೇನ ಜೋಶಿ ಪಂ॥ ಬಿಸ್‌ಮಿಲ್ಲಾ ಖಾನ್, ಪಂ॥ ಜಸರಾಜ್, ಪಂ॥ ಹರಿಪ್ರಸಾದ್ ಚೌರಾಸಿಯ. ಅಲ್ಲದೆ ಮೈಸೂರಿನಲ್ಲೇ ಅಲ್ಲದೆ ಇತರೆಡೆಗಳಲ್ಲಿ ನಡೆದ ಗಾಯನ ಕಾರ್ಯಕ್ರಮಗಳಲ್ಲಿ. ಸಂಗೀತ ಸಾಮ್ರಾಜ್ಞ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮೀ ಡಾ॥ ಎಂ. ಬಾಲಮುರುಳಿಕೃಷ್ಣ ಹೀಗೆ ಲೆಕ್ಕ ಹಾಕುತ್ತಾ ಹೋದರೆ ಸುಮಾರು 50–60 ಸಂಗೀತ ತಜ್ಞರ ಚಿತ್ರಿಕರಣದ ದಾಖಲೆ ಇಂದಿಗೂ ನನ್ನ ಬಳಿ ಇದೆ.

ದಸರೆಯ ಸಂದರ್ಭದಲ್ಲಿ ಪ್ರಚ್ಯವಸ್ತು, ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಚಿರಂಜೀವಿಸಿಂಗ್ ಮುಖಾಂತರ ಆ ವರ್ಷದ ದರ್ಬಾರ್ ಹಾಲಿನ ಕಾರ್ಯಕ್ರಮಗಳ ಚಿತ್ರಿಕರಣದ ಆದೇಶವಿತ್ತು.

ಆಗ ನಡೆದ ಕಾರ್ಯಕ್ರಮಗಳ ಪೈಕಿ. ಡಾ.॥ ಗಂಗೂಬಾಯಿ ಹಾನಗಲ್ಲು

ಹಾಡಿನ ವಿಶೇಷತೆ ಎದ್ದು ಕಾಣುತ್ತಿತ್ತು. ಚಿತ್ರಿಕರಿಸಲು Tri Poiyd (ಟ್ರೈ ಪಾಡ್) Stand ಅನ್ನು ಹಾಕಿ ಕೊಂಡು Camara fix ಮಾಡಿದ್ದೆ ಡಾ॥ಗಂಗೂಬಾಯಿಯವರ ಗಾನ ಸುಧೆ. ಆರಂಭವಾಯಿತು. ಆಲಾಪ ಮಾಡುತ್ತಿದ್ದರು. ದರ್ಬಾರ್ ಹಾಲ್ ತುಂಬಿ ತುಳುಕುತ್ತಿತ್ತು. ಒಂದು ಹತ್ತು ನಿಮಿಷದ ನಂತರ ಬಿಳಿ ಟೋಪಿ ಧಾರಿಯೋಬ್ಬರು. Camaraಗೆ ಅಡ್ಡಲಾಗಿ ನಿಂತು ಚಿತ್ರ ತೆಗೆಯ ಬ್ಯಾಡಿ ಅಕ್ಕ ಸಿಟ್ಟಾಗುತ್ತಾರೆ" ಅಂದ್ರು ಅಲ್ಲಿಯವರೆಗೆ, ನಡೆದ ಕಾರ್ಯಕ್ರಮಗಳಲ್ಲಿ ಚಿತ್ರಿಕರಣ ಮಾಡುಬಾರದೆಂದು ಯಾರೂ ಹೇಳಿರಲಿಲ್ಲ ನನಗೆ ಒಂದು ರೀತಿ. ದಿಗ್ಭ್ರಮೆ ಅಲ್ಲೆ ಪಕ್ಕದಲ್ಲಿ ಆಸೀನರಾಗಿದ್ದ ಡಾ॥ಚಿರಂಜೀವಿಸಿಂಗ್‌ರವರಲ್ಲಿ ಹೇಳಿದೆ" ಸರಿ ಅವರು ಬೇಡಾ ಎಂದರೆ ನಿಲ್ಲಿಸಿ ಬಿಡಿ" ಅಂದರು. ನನಗೊಂದು ರೀತಿಯ ಮುಖಭಂಗವಾಯಿತು.

Camara ಬಿಚ್ಚಿ ಪ್ಯಾಕ್ ಮಾಡಿಕೊಂಡೆ, ಅಲ್ಲೆ ಬಿಟ್ಟಿದ್ದ, ಅಲ್ಲೆ ಅರಮನೆಯಲ್ಲೇ ದರ್ಬಾರ್ ಹಾಲಿನಲ್ಲಿ ಇನ್ನೊಂದು ಇಟ್ಟಿದ್ದೆ ಅಲ್ಲಿ ಹೋಗಿ ಕ್ಯಾಮರ ಮಾಡಿ ಬಂದು, ಸಿಂಗ್‌ರವರ ಪಕ್ಕದಲ್ಲಿ ಕುಳಿತೆ. ಸುಮಾರು ಎರಡುವರೆಯಿಂದ ಮೂರು ಗಂಟೆಗಳ ಕಾಲ ಸಂಗೀತದಲ್ಲಿ ತನ್ಮಯರಾಗಿ ಹಾಡುತ್ತಲೇ ಇದ್ದರು. ಮಹಡಿಯಲ್ಲಿ ವಿಡಿಯೋ ತನ್ನ ಕೆಲಸ ಮಾಡುತ್ತಿತ್ತು. ಕಾರ್ಯಕ್ರಮ ಮುಗಿದು ಇಲಾಖೆಯ ಮೂಲಕ ಗಂಗೂಬಾಯಿ ಅವರಿಗೆ ಸನ್ಮಾನಾದಿಗಳು ಆದ ಬಳಿಕ ತೆಗೆಯುವಾಗ, ಗಂಗೂಬಾಯಿರವರು "ಯಾಕೆ ತೆಗೆದು ಬಿಟ್ರೆ" ಅಂತ ಕೇಳಿದರು. ಸ್ವಲ್ಪ ತೆಗೆದಿದ್ದಿರಲ್ಲ ಸಾಕಾಯಿತಾ?" ಅಂತ ಕೇಳಿದರು. ಒಂದು ನಿಮಿಷ ದಂಗಾಗಿ ಹೋದೆ ನಾನು. "ನಿಮ್ಮವರು ಬೇಡಾ ಎಂದಿರಲ್ಲ" ಎಂದೆ ನಾನು "ಯಾರು"? ಎಂದು ಕೇಳಿದರು. ಅಲ್ಲೆಲ್ಲಾ ಕಣ್ಣಾಡಿಸಿದೆ. ಟೋಪಿಧಾರಿ ನಾಪತ್ತೆ "ನಿಮಗೆ ತೊಂದರೆಯಾದಿಗೆಂದು ನಾನು ಮೇಲಿನಿಂದ ಚಿತ್ರಿಕರಿಸಿದ್ದೇನೆ ತುಂಬಾ ದೂರವಾಗಿರುವುದರಿಂದ, ನೀವು ಸರಿಯಾಗಿ ಮಾಡಿರುತ್ತೀರೋ. ಇಲ್ಲವೋ? ನಿಮ್ಮ ಧ್ವನಿ ರಿಕಾರ್ಡ್ ಆಗಿರುತ್ತದೆ ಎಂದೆ, ಅವರು ನಗುತ್ತಾ "ಈ ಮುಖ ನೋಡಿಕೊಂಡು ಏನಾಗಬೇಕು, ಅದು ಚೆನ್ನಾಗಿ ಬಂದಿದ್ದೆ ನನಗೊಂದು ಕೊಡಿ" ಎಂದ್ರು, ಆಗ ಅವರಿಗೆ ಅಂದ್ರೆ ಏನೂ ಅಂತೆ ಗೊತ್ತಿರಲಿಲ್ಲ ಅಂತ ಕಾಣುತ್ತದೆ. ಕಾಸೆಟ್ ಸ್ವಲ್ಪ ದಿನದ ನಂತರ ಕಳುಹಿಸಿ ಋಣ ತೀರಿಸಿಕೊಂಡೆ.

ಮತ್ತೊಂದು ಸಂದರ್ಭ. ಇತ್ತೀಚಿನ ವರ್ಷಗಳಲ್ಲಿ ನಡೆದಿದ್ದು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ, ನಿರ್ದೇಶಕ ಹಾಗೂ ಮಿತ್ರ ಡಾ॥ ಸಿ. ಸೋಮಶೇಖರ್ ನನಗೆ ಫೋನ್ ಮಾಡಿ ಕರೆಸಿಕೊಂಡ್ರು. "ಶಿಕ್ಷಣ ಮಂತ್ರಿಗಳಾದ ಶ್ರೀ ಬಸವರಾಜ ಹೊರಟ್ಟಿರುವರು ಹುಬ್ಬಳ್ಳಿಯಲ್ಲಿ ಕನ್ನಡಕ್ಕಾಗಿ ಕನ್ನಡದ ಕಾರ್ಯಕ್ರಮಗಳಿಗಾಗಿ ಸಂಸ್ಥೆಯೊಂದನ್ನು ಪ್ರಾರಂಭಿಸುತ್ತಿದ್ದಾರೆ.

ಉದ್ಘಾಟನೆ ಮಾಡಿ. ಚೆನ್ನಾಗಿ ಮಾತನಾಡುವ ಕಲಾವಿದರು ಯಾರಾದರು ಇದ್ರೆ ಒಪ್ಪಿಸಿ, ಕರೆದುಕೊಂಡು ಬನ್ನಿ" ಎಂದರು. ಆಗ ನನಗೆ ಹೊಳೆದಿದ್ದು" ಶ್ರೀ ಇ.ಯು ಅಯ್ಯರ್ ಆಗಬಹುದೇ" ಎಂದೆ "ಯಾಕಾಗಬಾರದು ಖಂಡಿತಾ ಒಪ್ಪಿಸಿ" ಎಂದರು ಸೋಮಶೇಖರ್ ನನಗೆ ಆಗ ಮೈಯಲ್ಲಿ ಸ್ವಲ್ಪ ಆರಾಮವಿರಲಿಲ್ಲ ಅಲ್ಲಿಂದಲೇ ಅಯ್ಯರ್‌ಗೆ ಫೋನ್ ಮಾಡಿ ವಿಷಯ ತಿಳಿಸಿದೆ. "ಮನೆ ಹತ್ರ ಕಳುಹಿಸುತ್ತೀನಿ ನಿಮ್ಮ ಜೊತೆಗೆ ಯಾರನ್ನಾದರೂ ಕರೆದುಕೊಂಡು ಬನ್ನಿ" ಎಂದೆ, ನನ್ನ ಅನಾರೋಗ್ಯದ ಬಗ್ಗೆ ತಿಳಿಸಿದೆ. ಅವರು ಅಂದದ್ದು "ಅಲ್ಲಯ್ಯ ವಯಸ್ಸಾದವನು ನಾನು ಬರೋಕೆ ಇದ್ದೇನೆ ನನ್ನ ಮುಂದಿನ ಹುಡುಗ ಆರೋಗ್ಯ ಸರಿಯಿಲ್ಲ ಎಂದರೆ ಹೇಗೆ? ನೀನು ಬರುವುದಾದರೆ ಹೋಗೋಣ ಇಲ್ಲದಿದ್ದರೆ ಬ್ಯಾಡ್" ಅಂದ್ರು ನಮಗೆ ಸಿಕ್ಕಿದ್ದದು. ಯಾವುದೋ ಲಡಕಾಸಿ ಕಾರ್, ಅದರ ಚಾಲಕ ಆಕಾಶರಾಯ! ನೇರವಾಗಿ ನೋಡುತ್ತಿರಲಿಲ್ಲ, ಅಯ್ಯರ್ ಕೇಳಿದರು. "ಇದೇನಯ್ಯ ಹೀಗೆ ಓಡಿಸುತ್ತಾನೆ" ಎಂದು ಚಾಲಕನ ಹತ್ತಿರ ಇದೇನಯ್ಯ ಹೀಗೆ ಓಡಿಸುತ್ತಿ", ನಮ್ಮನ್ನು ಹುಬ್ಬಳ್ಳಿ ಸೇರಿಸುತ್ತಿಯಾ? ಇಲ್ಲ ಮೇಲಕ್ಕೆ ಸೇರಿಸುತ್ತಿಯಾ?" ಎಂದು ಅಂತು ಇಂತು ಹುಬ್ಬಳ್ಳಿ ಸೇರಿದ್ದಾಯಿತು.

ಶ್ರೀ ಬಸವರಾಜ ಹೊರಟ್ಟಿಯವರು ಉತ್ತಮ ಕಾರ್ಯಕ್ರಮ ಏರ್ಪಡಿಸಿದ್ದರು. ಸಭಾಂಗಣದ ತುಂಬಾ ಜನವೋ ಜನ ಹುಬ್ಬಳ್ಳಿ ಮತ್ತು ಅಲ್ಲಿನ ಜನರ ಬಗ್ಗೆ ಮಾತನಾಡುತ್ತ ಶ್ರೀ ಜಿ.ವಿ. ಅಯ್ಯರ್, ಡಾ॥ ಗಂಗೂಬಾಯಿ ಹಾನಗಲ್ ಬಗ್ಗೆ ಕೂಡ ಮಾತನಾಡಿದರು.

ಅಲ್ಲೆ ವೇದಿಕೆಯಲ್ಲಿ, ಗಂಗಜ್ಜಿಯವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂಬ ವಿಷಯ ತಿಳಿದು ಕಾರ್ಯಕ್ರಮದ ನಂತರ ಆಸ್ಪತ್ರೆಗೆ ಹೋದೆವು. ಮಂಚದ ಮೇಲೆ ಗುಬ್ಬಚ್ಚಿಯಂತೆ ಮಲಗಿದ್ದರು ಗಂಗಜ್ಜಿ. ಅಯ್ಯರ್ ತಮ್ಮ ದೊಡ್ಡ ಗಂಟಲಿನಿಂದ "ಏನೇ ಇದು ಗಂಗೂ, ಏನು ಹಿಂಗಾಗಿ ಬಿಟ್ಟಿದ್ದೀಯ" ಎಂದು ಕೂಗುತ್ತಾ ಮಂಚದ ಬಳಿ ಕುಳಿತರು. ಅಯ್ಯರ್ ಅವರ ಶಬ್ದ ಕಹಳೆಗೆ ಬೆಚ್ಚಿ ಬಿದ್ದು ಕಣ್ಣು ಬಿಟ್ಟರು. ಗಂಗೂಬಾಯಿಯವರು ದಿಟ್ಟಿಸಿ ನೋಡುತ್ತಾ ಕನ್ನಡಕವನ್ನು ಹಾಕಿಸಿಕೊಂಡು "ಇದೇನು ಅಯ್ಯರ್ ನೀನು ಇಲ್ಲಿ" ಎಂದರು, ಸಾವರಿಸಿಕೊಂಡು ಏಳುವ ಪ್ರಯತ್ನ ಮಾಡಿದರು. ಅಯ್ಯರ್ ಅವರೇ ಸ್ವಲ್ಪ ಸಹಾಯ ಮಾಡಿ ಗಂಗೂಬಾಯಿಯವರನ್ನು ಮಂಚಕ್ಕೆ ಒರಗಿಸಿದರು. ನಮ್ಮ ಜೊತೆ ಬಂದಿದ್ದ ಪತ್ರಿಕಾ ಪ್ರತಿನಿಧಿಗಳಿಗೆ ಹಬ್ಬ, ಕ್ಲಿಕ್ಕಿಸಿದ್ದೇ ಕ್ಲಿಕ್ಕಿಸಿದ್ದು ಬಹಳಷ್ಟು ಹೊತ್ತು ಅಯ್ಯರ್ ಹಳೆಯ ನೆನಪುಗಳನ್ನು ಮತ್ತು ಇತರ ವಿಶಯಗಳನ್ನು ಮಾತನಾಡಿದರು. ಹೊರಡುವಾಗ "ಆರೋಗ್ಯ ನೋಡಿಕೊಳ್ಳೇ ಬೇಗ ಗುಣಮುಖ ಆಗು" ಎಂದರು. ತಕ್ಷಣ ಗಂಗೂಬಾಯಿ ಅವರು "ನೀನು ಅಷ್ಟೇ ನಿನ್ನ ಆರೋಗ್ಯ

ನೋಡಿಕೋ" ಎಂದರು. ಅಯ್ಯರ್ "ನನಗೇನಾಗಿದೆ ಗುಂಡು ಕಲ್ಲು ಇದ್ದಾಗೆ ಇದೇನೆ" ಅಂದರು. ಗುಂಡು ಕಲ್ಲಿನಂತಿದ್ದ ಅಯ್ಯರ್ ಕೆಲವೇ ತಿಂಗಳುಗಳಲ್ಲಿ ತೀರಿಕೊಂಡರು. ಪದ್ಮಭೂಷಣ, ಡಾ॥ ಗಂಗೂಬಾಯಿ ಕಳೆದವಾರ ತೀರಿಕೊಂಡರು. ಛಾಯಾಗ್ರಾಹಕರು ಚಿತ್ರಿಸಿದ್ದ ಚಿತ್ರಗಳು ನಿರ್ಜೀವವಾದವು. ಇವರ ಆತ್ಮಕ್ಕೆ ಶಾಂತಿ ಸಿಗಲೀ.

* * * * *

ಇಲ್ಲಿನ ಲೇಖನಗಳನ್ನು ನೀಡಿ ಸಹಕರಿಸಿದ ಲೇಖಕರಿಗೂ ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ ಪತ್ರಿಕೆ ಸಂಪಾದಕರುಗಳಿಗೂ ಅಂತರ್ಜಾಲ ಸುದ್ದಿ ಮಾಧ್ಯಮದ ಮಿತ್ರರಿಗೂ, ಶೀಘ್ರವಾಗಿ ಈ ಪುಸ್ತಕ ಪ್ರಕಟವಾಗಲು ಕಾರಣಕರ್ತರಾದ ಎಲ್ಲಾ ಮಿತ್ರರಿಗೂ ನಾನು ಈ ಮೂಲಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

–ಗೌರಿ ಸುಂದರ್

ಸಂಗೀತದ ತೊಟ್ಟಿಲ ತೂಗಿದ ಕೈ

– ಡಾ. ಶಿವಮೊಗ್ಗ ಸುಬ್ಬಣ್ಣ

"ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ನಿನಗೆ ರಸಿಕ ಕಲ್ಲು ಸಕ್ಕರೆಯಂಥ ನಿನ್ನೆದೆಯ ಕರಗಿದರೆ ಆ ಸವಿಯ ಹಣಿಸು ನನಗೆ". ಕವಿ ಅಂಬಿಕಾತನಯದತ್ತರ ಕವನದ ಈ ಸಾಲುಗಳು ಪದ್ಮವಿಭೂಷಣ ಡಾ.॥ ಗಂಗೂಬಾಯಿ ಹಾನಗಲ್‌ರವರ ಜೀವನರೀತಿಗೆ ಹೊಂದುತ್ತದೆ. ಎಂದು ನನ್ನ ಅನಿಸಿಕೆ. ವೈಯಕ್ತಿಕ ಜೀವನದ ನೋವುಗಳನ್ನು ತಮ್ಮಲ್ಲೇ ಇಟ್ಟುಕೊಂಡು ಸಂಗೀತದ ಅನುಭೂತಿಯನ್ನು, ಆನಂದವನ್ನು ಸತತವಾಗಿ ಏಳು ದಶಕಗಳ ಕಾಲ ಜನಸಾಮಾನ್ಯರಿಗೆ ಹಂಚಿದ ಪುಣ್ಯಜೀವಿ ನಮ್ಮ ಗಂಗಜ್ಜಿಯವರು.

ತಾಯಿ ಅಂಬಾಬಾಯಿ ಕರ್ನಾಟಕ ಸಂಗೀತದ ಗಾಯಕಿಯಾಗಿದ್ದರು, ಮಗಳ ಮನೋಧರ್ಮವನ್ನು ಅರಿತು, ಹಿಂದೂಸ್ತಾನಿ ಸಂಗೀತವನ್ನು ಕಲಿಯಲು ಗುರು ಸವಾಯಿ ಗಂಧರ್ವರ ಶಿಷ್ಯತ್ವವನ್ನು ಪಡೆಯಲು ಕಾರಣರಾದರು. ಗಂಗೂಬಾಯಿಯವರೇ ಹೇಳುವಂತೆ "ಸಂಗೀತದ ತೊಟ್ಟಿಲು ಸದಾ ತೂಗುತ್ತಿರಬೇಕಂತೆ ಅವರೇ ಹೇಳುವಂತೆ, ಅವರ ನಂತರ ಅವರ ಮೊಮ್ಮಗಳು "ಮಾಧವಿ" ಛಲೋ ಹಾಡ್ತಾಳಂತೆ, ಸಂಗೀತದ ತೊಟ್ಟಿಲು ತೂಗಲು ಸಿದ್ಧಳಾಗಿದಾಳಂತೆ.

ಸುಮಾರು ಮೂವತ್ತು ವರ್ಷಗಳ ಹಿಂದೆ ನಾನು ಹುಬ್ಬಳ್ಳಿಗೆ ಹೋದಾಗ ಹಿರಿಯ ಪತ್ರಕರ್ತಶ್ರೀ ಪಾಟೀಲಪುಟ್ಟಪ್ಪನವರು ನನ್ನನ್ನು ಡಾ॥ಗಂಗೂಬಾಯಿಯವರ ಮನೆಗೆ ಕರೆದುಕೊಂಡು ಹೋಗಿದ್ದರು. "ಇವರು ಭಾವಗೀತೆಗಳನ್ನು ಅಗದಿ ಛಲೋ ಹಾಡ್ತಾರ್ರೀ" ಎಂದು ಹೇಳಿದರು. "ಒಂದು ಗೀತೆ ಹಾಡೋ ತಮ್ಮಾ" ಎಂದರು ಗಂಗೂಬಾಯಿಯವರು. ನಾನೇ ರಾಗ ಸಂಯೋಜಿಸಿದ ಕುವೆಂಪುರವರ ಗೀತೆ.

"ದೇಹವಿದು ನೀಸಿರುವ ಗುಡಿ ಎಂದು ತಿಳಿದು" ಎಂಬ ಗೀತೆಯನ್ನು ಹಾಡಿದೆ. ಆಗೀತೆಗೆ "ಜಯ್‌ಜಯ್‌ವಂತಿ, ದೇಸ್ ಮತ್ತು ಭೈರವಿರಾಗಗಳನ್ನು ಬಳಸಿದ್ದೇನೆ. ಕೇಳಿ ಆನಂದಪಟ್ಟರು. ಆಶೀರ್ವದಿಸಿದರು. ನಿನ್ನ ಆವಾಸ್‌ನಲ್ಲಿ ಬಹಳ ಖರಜ್ ಐತಿ, (Base Baice) ಚೆನ್ನಾಗಿ ರಿಯಾಜ್ ಮಾಡೋ ತಮ್ಮಾ ಎಂದು ಹೇಳಿ ಹರಸಿದರು. ನಾನು ಭಾವುಕನಾಗಿ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಧನ್ಯತಾ ಭಾವವನ್ನು ಪಡೆದೆ.

ಆ ಪುಣ್ಯ ಜೀವಿಯ ಆತ್ಮಕ್ಕೆ ಶಾಂತಿಯನ್ನು ಕರುಣಿಸುವಂತೆ ದೇವರನ್ನು ಪ್ರಾರ್ಥಿಸುತ್ತೇನೆ.

ಗಂಗಾ ತಟದಲ್ಲಿ

ಪತ್ರಿಕಾ ನಮನಗಳು

* * * * * *

ಗಂಗಾಂತರಂಗ

ನನ್ನ ಮೊದಲೇನೇ ಸಂಗೀತ ಕಛೇರಿಯಲ್ಲಿ ಗುರು ಸಮ್ಮುಖದಲ್ಲಿ ತಂಬೂರಿ ಹಿಡಿದು 'ಸಾ' ಹಚ್ಚುತ್ತಲೆ ಸೋತು ಹೋದ ಪ್ರಸಂಗವನ್ನು ನೆನೆದಾಗ ನನ್ನ ಆತ್ಮವಿಶ್ವಾಸವೇ ಹೊರಟು ಹೋಗಿತ್ತು. ಗುರುಗಳೇ ನನ್ನಲ್ಲಿ ಆತ್ಮವಿಶ್ವಾಸ ತುಂಬಿದರು. ಇವತ್ತು ನಾನೇಗಿದ್ದೇನೆಯೋ ಅದು ನನ್ನ ಗುರುವಿನ ಕೃಪೆ, ನನ್ನ ತಾಯಿಯ ಹಾರೈಕೆ, ಸೋದರ ಮಾವ ರಾಮಣ್ಣನ ಸದಿಚ್ಛೆ, ಸತತ ಸಹಾಯ, ಸಹಕಾರ ಕಾರಣ.

ಸಂಗೀತದಲ್ಲಿ ರಸ, ರಾಗ, ಭಾವಗಳನ್ನು ಅನುಭವಿಸಿ ಹಾಡಬೇಕು ಅಂತ ಹೇಳುತ್ತಾರೆ. ನಿಜವಾಗಿಯೂ ನನಗೆ ಜೋಗಿಯ, ದರಬಾರಿ, ತೋಡಿ ಇಂತಹ ಶೋಕರಾಗದ ಚೀಜುಗಳನ್ನು ಹುಡುವಾಗಲೆಲ್ಲಾ ನನ್ನ ತಾಯಿಯದೇ ನೆನಪು ಬಂದು ನನ್ನ ಅಂತಃಕರಣದಿಂದ ದುಃಖ ಉಕ್ಕಿಬರುವ ಹಾಗೆ ಹಾಡಿದ್ದೇನೆ. ನಾನು ಶೋಕ ಅನುಭವಿಸಿ, ಕಣ್ಣೀರು ತಂದು ಹಾಡಿದ ರಾಗಗಳು ಶ್ರೋತೃಗಳ ಕಿವಿಯ ಮೇಲೆ ಬಿದ್ದಾಗ ಅವರು ಅದಕ್ಕಾಗಿ ಸಂತೋಷಪಟ್ಟುಕೊಂಡು ಚಪ್ಪಾಳೆ ತಟ್ಟೋದು ಒಂದು ಚಮತ್ಕಾರದ ಅನುಭವ ಅಲ್ಲವೇ? ಅವರು ನನ್ನ 'ರಾಮ ಹರಿಕಾ ಭೇದ ನ ಪಾಂಯೋ' ಎಂಬ ಜೋಗಿಂಯಾ ಕೇಳಿ ಆನಂದಪಟ್ಟುಕೊಂಡಾಗ ನಾನೂ ಕೂಡ ಆನಂದಪಟ್ಟಿದ್ದೇನೆ. ಒಂದು ರಾಗ ಮೊದಲು ಕಣ್ಣೀರು ತರಿಸಿದರೂ ಆ ಕಣ್ಣೀರಿನಲ್ಲೇ ಕಲ್ಲು ಸಕ್ಕರೆಯಂತಹ ಸವಿ ಇರೋದು ಒಂದು ಚಮತ್ಕಾರ.

ನಾನು ರೇಡಿಯೋದಲ್ಲಿ ಹಾಡಲು ಆರಂಭಿಸಿದ್ದು 1936ರಲ್ಲಿ. ನಾನು ಧ್ವನಿ ಪರೀಕ್ಷೆಯ (ಆಡಿಶನ್) ವಿಧಿ-ವಿಧಾನಗಳಿಲ್ಲದೆ ಅಪ್ರೂವ್ ಆಗಿದ್ದೆ. ಅಂದಿನಿಂದ ನಾನು 50 ರೂಪಾಯಿ ಸಂಭಾವನೆಯ ಕ್ಯಾಜ್ಯುವಲ್ ರೇಡಿಯೋ ಕಲಾವಿದೆ. ಮುಂದೆ ಬೇಗನೆ ನನ್ನ ಫೀ 75 ರೂಪಾಯಿಗೆ ಏರಿತು. ಆಗಿನ ಕಾಲದ 75 ರೂಪಾಯಿಯಲ್ಲಿ ನಾನೂ, ಸೋದರ ಮಾವ ರಾಮಣ್ಣ ಇಬ್ಬರೂ ಮುಂಬಯಿಗೆ ಬಂದು ಒಂದು ದಿನ ಉಳಿದುಕೊಂಡು ಪ್ರಸಾರ ಕಾರ್ಯಕ್ರಮ ಮುಗಿಸಿ ಹಿಂತಿರುಗುತ್ತಿದ್ದೆವು. ಎಷ್ಟೇ ಅಂದರೂ ಅದು ಸೋವಿ ಕಾಲ. ಇದಲ್ಲದೆ ಬೇರೆ

ಸಂಗೀತ ಕಾರ್ಯಕ್ರಮವಿದ್ದೂ ಏರ್ಪಾಡಾಗುತ್ತಿದ್ದವು. ಒಂದು 'ಮೆಹಫಿಲ್'ಗೆ ಆಗ 125 ರೂಪಾಯಿ ಸಂಭಾವನೆ ಸಿಗುತ್ತಿತ್ತು.

ನಾವು ಒಮ್ಮೆ ಇಳಿದುಕೊಂಡ ಹೋಟೆಲ್‌ನಲ್ಲಿ ನಮ್ಮ ಅತಿಥೇಯರು ವ್ಯವಸ್ಥೆ ಮಾಡಿದ ಮೇಲೆ ಬರೀ ಕುಚಲಕ್ಕಿ ಅನ್ನವನ್ನೇ ತಾಟಿನ ಮೇಲೆ ಬಡಿಸಿಟ್ಟಾಗ ನನಗೆ ಬೇಡವೆನಿಸಿ ಒಲ್ಲೆಂದುಬಿಟ್ಟೆ. ಆದರೆ ನನ್ನ ಸಂಗೀತ ಸಂಗಡಿಗರಾಗಿ ಬಂದಿದ್ದ ಶೇಷಣ್ಣ(ಶೇಷಾದ್ರಿ ಗವಾಯಿಗಳು) ಸಂಗೀತದ ಗುರುಗಳೂ ಆಗಿದ್ದ ನಾರಾಯಣರಾವ್ ಇಂದೂರಕರ್ ಅವರು 'ಇಲ್ಲಮ್ಮ ಹೊಟ್ಟೆ ತುಂಬಿಸುವ ಅನ್ನಪೂರ್ಣೆಯನ್ನು ನಿರಾಕರಿಸಬಾರದು. ನಾನು ಈ ಅನ್ನಕ್ಕಾಗಿಯೇ ಮುಂಬಯಿಗೆ ಬಂದಿದ್ದೇನೆ. ನೀವು ಸಹ ಹುಬ್ಬಳ್ಳಿಯಿಂದ ಬಂದಿದ್ದೀರಿ. ನಾವು ಸಂಗೀತ ಕಾರ್ಯಕ್ರಮ ಮಾಡುವುದೇ ಈ ಅನ್ನದೇವತೆಗಾಗಿ ಅಲ್ಲವೇ...? ಎಂದು ಭಾವನಾತ್ಮಕವಾಗಿ ಹೇಳಿದಾಗ ನನಗೆ ಪ್ರಸಾದವನ್ನು ನಿರಾಕರಿಸುವುದಾಗಲಿಲ್ಲ. ಅವರ ಮಾತುಗಳು ಊಟಕ್ಕೆ ಕೂತಾಗ ಇಂದಿಗೂ ನೆನಪಾಗುತ್ತದೆ.

ಒಮ್ಮೆ ಕಲ್ಕತ್ತಾ ಮೆಹಫಿಲ್-ಅದು ಸುಮಾರು 30 ವರ್ಷಗಳ ಹಿಂದೆ ಹೋದಾಗ ವ್ಯವಸ್ಥಾಪಕರನ್ನೆ ಒಬ್ಬ ಏಜೆಂಟ್ ವಂಚಿಸಿಬಿಟ್ಟಿದ. ವ್ಯವಸ್ಥಾಪಕರು ದೊಡ್ಡ ಸ್ಕೇಲ್ ಮೇಲೆ ಟಿಕೆಟ್ ಮಾರಾಟಕ್ಕೆ ಏರ್ಪಾಡು ಮಾಡುದಾಗ ಒಬ್ಬ ಏಜೆಂಟ್ ಟಿಕೀಟ್ ಬುಕ್ಕುಗಳನ್ನೆಲ್ಲಾ ತಾನೇ ಮಾರಾಟ ಮಾಡಿಕೊಂಡು ಬಂದ ಹಣವನ್ನೆಲ್ಲಾ ನುಂಗಿಹಾಕಿ, ವ್ಯವಸ್ಥಾಪಕರು ಬಾಯಿ ಬಾಯಿ ಬಿಡುವಂತೆ ಮಾಡಿದ್ದ. ವ್ಯವಸ್ಥಾಪಕರು ಆಮಂತ್ರಿಸಿದ್ದ ನನ್ನಂತಹ ಹಲವಾರು ಕಲಾವಿದರ ಮುಂದೆ ಕೈ ಜೋಡಿಸಿ ತಮ್ಮ ದುರವಸ್ಥೆಯನ್ನು ಹೇಳಿಕೊಂಡಾಗ ಕೊಟ್ಟಷ್ಟು ಹಣದಿಂದ ನಾವೆಲ್ಲಾ ತೃಪ್ತಿಪಡಬೇಕಾಯಿತು.

ನನಗೋ ಸುಮ್ಮನೇ ಹೆಚ್ಚಿಗೆ ಡಿಮಾಂಡ್ ಮಾಡೋದು, ಕರಾರುಗಳನ್ನು ಹಾಕೋದು ಬರೋದಿಲ್ಲ. ಒಮ್ಮೊಮ್ಮೆ ನಾನು ಎಷ್ಟು ಹಣ ಡಿಮಾಂಡ್ ಮಾಡಬೇಕು ಇದೂ ತಿಳಿಯದೆ ಅವರು ಕೊಟ್ಟಷ್ಟಕ್ಕೆ ಒಪ್ಪಿಕೊಂಡಿದ್ದೇನೆ. ಆ ಮೇಲೆ ನನಗಿಂತ ಜ್ಯೂನಿಯರ್ ಕಲಾವಿದರು ಹೆಚ್ಚಿಗೆ ಫೀ ಪಡೆದುದನ್ನು ನೋಡಿ ಆಶ್ಚರ್ಯಪಟ್ಟುಕೊಂಡಿದ್ದೇನೆ.

(ಎನ್ಕೆಯವರು ನಿರೂಪಿಸಿದ ಗಂಗೂಬಾಯಿ ಹಾನಗಲ್ ಅವರ ಜೀವನ ಚರಿತ್ರೆ 'ನನ್ನ ಬದುಕಿನ ಹಾಡು' ಪುಸ್ತಕದಿಂದ)

ಸ್ವರಾಲಾಪದ ಆನಂದ

ಪಂಡಿತ್ ವಿನಾಯಕ ತೊರವಿ

ಹೆಣ್ಣು ಮಕ್ಕಳು ವೇದಿಕೆಯಲ್ಲಿ ಕಾರ್ಯಕ್ರಮ ನಡೆಸಿಕೊಡುವುದು, ಗಂಡಸರ ಬಳಿ ಕಲಿಯುವುದು ಇವೆಲ್ಲ ನಿಷೇಧಕ್ಕೊಳಗಾಗಿದ್ದಾಗ, ಅವುಗಳನ್ನೆಲ್ಲ ಮೀರಿ ಗಂಗೂಬಾಯಿ ಬಂದರು. ಅವರ ತಾಯಿ ಸಂಗೀತಗಾರ್ತಿಯಾಗಿದ್ದರೂ ಬಹಳ ಎತ್ತರಕ್ಕೆ ಏರುವುದಕ್ಕಾಗಿರಲಿಲ್ಲ. ಅವರು ಕರ್ನಾಟಕಿ ಹಾಡ್ತಾ ಇದ್ರು. ಆದರೆ ಮಗಳು ಹಿಂದುಸ್ಥಾನಿ ಹಾಡಿದರೆ ಹೆಚ್ಚು ಬೆಳೆಯಲು ಅವಕಾಶ ಅಂತ ಅವರ ಆಸೆ. ಅದಕ್ಕಾಗಿ ಮಕ್ಕಳಿಗೆ ಹಿಂದುಸ್ಥಾನಿ ಕಲಿಸಲು, ತಾವು ಕರ್ನಾಟಕಿ ಹಾಡುವುದನ್ನೇ ಬಂದ್ ಮಾಡಿದ್ರು!

ಗಂಗೂಬಾಯಿ ಅವರದ್ದು ಸ್ವರ ಪ್ರಧಾನವಾದ ಕಿರಣಾ ಘರಾಣಾ ತಾನಗಳು, ಚೀಝ್‌ಗಳಿಗಿಂತೆಲ್ಲ ಸ್ವರ ಅಲ್ಲಿ ಮುಖ್ಯ. ಆ ಸ್ವರಾಲಾಪವೇ ಆಹ್ಲಾದ-ಆನಂದ ಕೊಡುವಂಥದ್ದು. ಗಂಗೂಬಾಯಿಯವರ ತಾಯಿ ಮನೆ ಮತ್ತು ನಮ್ಮ ಮನೆ ಧಾರವಾಡದಲ್ಲಿ ಒಂದೇ ಓಣಿಯಲ್ಲಿತ್ತು. ನನ್ನ ಗುರುಗಳಾದ ಗುರುರಾವ್ ದೇಶಪಾಂಡೆಯವರನ್ನು ಅವರು ಕೂಡಾ ಗುರು ಸ್ಥಾನದಲ್ಲಿ ಕಾಣುತ್ತಿದ್ದರು. ಅಲ್ಲದೆ ಆಕಾಶವಾಣಿ ರೆಕಾರ್ಡಿಂಗ್ ಅಂತ ಬಂದು ಧಾರವಾಡಕ್ಕೆ ಬಂದು ಹೋಗ್ತಿದ್ರು. ಹೀಗಾಗಿ ಬಾಲ್ಯದಿಂದಲೇ ಅವರನ್ನು ನೋಡ್ತಾ ಬಂದಿದ್ದೇನೆ.

1960ನೇ ದಶಕ. ಬೆಳಗಾವಿಯಲ್ಲಿ ನಡೆದ ಗಾಯನ ಸ್ಪರ್ಧೆಯಲ್ಲಿ ನಾನು ಫೈನಲ್‌ಗೆ ಬಂದಿದ್ದೆ. ಗಂಗೂಬಾಯಿ ಜಡ್ಜ್ ಆಗಿದ್ದರು. ನನಗೆ ಸೆಕೆಂಡ್ ಪ್ರೈಜ್ ಬಂತು. ಇನ್ನೊಬ್ಬಳು ಹುಡುಗಿಗೆ ಫಸ್ಟ್ ಬಂತು. ಆಗ ಗಂಗೂಬಾಯಿ ಅಂದಿದ್ದರು. 'ತೊರವಿ ಚೆನ್ನಾಗೇ ಹಾಡ್ಯಾನ. ಆದ್ರ ಅಕಿ ತಂಬೂರಿ ಇಟ್ಟಕೊಂಡು ಹಾಡ್ಯಾಳ, ಅಂವ ಹಾರ್ಮೋನಿಯಂ ಇಟ್ಕೊಂಡು ಹಾಡ್ಯಾನ. ಹಂಗಾಗಿ ಆಕಿಗೆ ಫಸ್ಟ್ ಪ್ರೈಜ್' ಅಂತ. ಅಗ ನನ್ನಲ್ಲಿ ತಂಬೂರಿ ಕೊಂಡುಕೊಳ್ಳೋಕೆ ದುಡ್ಡೇ ಇರಲಿಲ್ಲ. ಆಮೇಲೆ ನಾನೂ ಹುಬ್ಬಳ್ಳಿಗೆ ಹೋದೆ, ಬೆಂಗಳೂರಿಗೆ ಬಂದೆ. ನಾಪಿಬ್ರೂ ತೀರ್ಪುಗಾರರಾಗಿ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದೂ ಆಯಿತು.

1982ರಲ್ಲಿ 'ಗುರುರಾವ್ ದೇಶಪಾಂಡೆ ಸಂಗೀತ ಸಭಾ' ಅಂತ ನಾನು ಬೆಂಗಳೂರಿನಲ್ಲಿ ಸಂಸ್ಥೆ ಆರಂಭಿಸಿದಾಗ, ಅವರೇ ಉತ್ಸಾಹದಿಂದ ಬಂದು 'ಮಿಯಾ ಕೀ ತೋಡಿ' ಅದ್ಭುತವಾಗಿ ಹಾಡಿದ್ರು. ನಂತರ 'ಗುರುರಾಯರು ಹಾಡಿಸ್ತಾರ ನಾನು ಹಾಡೇನಿ!' ಅಂದರು. ಅವರು ಕರ್ನಾಟಕ ಸಂಗೀತ–ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ನಾನು ಸದಸ್ಯನಾಗಿದ್ದೆ. ಅಕಾಡೆಮಿಯ ಎಲ್ಲ ಕಾರ್ಯಕ್ರಮಗಳಲ್ಲಿ ಬಲಗೈಯಂತಿದ್ದೆ. ಹಾಗಾಗಿ ತಾಯಿ–ಮಗನ ಸಂಬಂಧ ನಮ್ಮ ಮಧ್ಯೆ ಬೆಳೀತು. 'ನೀ ಬೆಂಗಳೂರನ್ನ ಪುಣೆ–ಮುಂಬೈ ಮಾಡಿದಿ. ಹಿಂದುಸ್ಥಾನಿ ಪ್ರಚಾರ ಮಾಡಿದಿ' ಅಂತ ಅವರು ಹೊಗಳುತ್ತಿದ್ದರು. 2007ರಲ್ಲಿ ನಮ್ಮ ಸಂಸ್ಥೆಯ ಬೆಳ್ಳಿ ಹಬ್ಬ ಕಾರ್ಯಕ್ರಮ ನಡೀತು. ಆಗ 'ಗಾಯನಾಚಾರ್ಯ ಗುರುರಾವ್ ದೇಶಪಾಂಡೆ ರಾಷ್ಟ್ರೀಯ ಪುರಸ್ಕಾರ–ಗುರು ಗಂಧರ್ವ' ಎಂಬುದನ್ನು ಸ್ಥಾಪಿಸಿದೆವು. ಆ ಮೊದಲನೇ ಪ್ರಶಸ್ತಿಯನ್ನು ಹಾನಗಲ್‌ರಿಗೆ ನೀಡಲಾಯಿತು. ಆರೇಳು ತಿಂಗಳ ಹಿಂದೆ ಕುಂದಗೋಳ ಉತ್ಸವದಲ್ಲಿ ಅವರೇ ಒತ್ತಾಯದಿಂದ ನನಗೊಂದು ಸನ್ಮಾನವನ್ನೂ ಮಾಡಿದ್ದರು.

ಶಾಲೆಗಳಿಗೆ ದಾನ ಕೊಡುವುದು, ಸ್ಕಾಲರ್‌ಶಿಪ್ ಕೊಡಿಸುವುದೂ ಅವರಿಗೆ ಇಷ್ಟ. ಮನೆಗೆ ಹೋದರೆ' ತೊರವೀ ತುಪ್ಪ ತಿನ್ನು' ಅಂತ ಹೋಳಿಗೆಗೆ ದೊಡ್ಡ ಚಮಚದಲ್ಲಿ ತುಪ್ಪ ಬಡಿಸ್ತಿದ್ರು. ಗಂಗೂಬಾಯಿಯವರ ಮನೆ 'ಗಂಗಾ ಲಹರಿ' ನಮಗೆಲ್ಲ ಕಾಶಿ ರಾಮೇಶ್ವರ ಇದ್ದ ಹಾಗೆ.

'ಸರಿಯಾಗಿ ಕೂತು ಪ್ರಾಕ್ಟೀಸ್ ಮಾಡ್ರಿ. ಪ್ರೋಗ್ರಾಮ್ ಕೊಡಾಕ ಗಡಿಬಿಡಿ ಮಾಡಬ್ಯಾಡ್ರಿ' ಅನ್ನೋದು ಅವರ ಯಾವತ್ತಿನ ಮಾತು. ಯುನಿವರ್ಸಿಟಿಗಳಲ್ಲಿ ಸಂಗೀತ ಪಾಠ ಶುರು ಮಾಡೋದಕ್ಕಿಂತ ಪ್ರಾಥಮಿಕ ಶಾಲೆಗಳಲ್ಲಿ ಶುರುವಾಗಬೇಕು. ಮಕ್ಕಳು ಸಂಗೀತಗಾರರ ಚರಿತ್ರೆ ಓದಿ ಪ್ರಯೋಜನ ಇಲ್ಲ. ಹಾಡಲು ಗೊತ್ತಿರುವವರು ಅಲ್ಲಿ ವಿದ್ಯಾರ್ಥಿಗಳಿಗೆ ಸಿಗುವಂತಾಗಬೇಕು ಅನ್ನೋದು ಗಂಗೂಬಾಯಿ ಆಸೆ.

ಅವರು ಚಿಕ್ಕವರಾಗಿದ್ದಾಗ ಅಂದರೆ ಗಾಂಧಾರಿ ಹಾನಗಲ್ ಆಗಿದ್ದಾಗ, ಅವರ ದನಿ ಲತಾ ಮಂಗೇಶ್ಕರ್ ಸ್ವರದ ಥರಾನೇ ಇತ್ತು. ಟಾನ್ಸಿಲ್ ಆಪರೇಷನ್ ಆದ ನಂತರ, ಗಂಡಸು ಧ್ವನಿ ಬಂತು. ಇದಕ್ಕೇನು ಮಾಡ್ಲಿ ಅಂತ ಅವರು ಗುರುಗಳಾದ ಸವಾಯಿ ಗಂಧರ್ವರಲ್ಲಿ ಕೇಳಿದಾಗ ಅವರು ಹೇಳಿದ್ದು– 'ಏನೂ ಆಗಲ್ಲ. ಪ್ರಾಕ್ಟೀಸ್ ಮಾಡು', ಈಗ ಹಿಂದುಸ್ಥಾನಿ ಹಾಡೋದಿಕ್ಕೆ ಹಾನಗಲ್ ತರಹದ ಗಂಡು ಧ್ವನಿಯೇ ಬೇಕೇನೋ ಅನ್ನುವಷ್ಟು ಅದು ಪ್ರಚಾರ ಆಗಿದೆ, ಇಷ್ಟ ಆಗಿದೆ. ಜೈಪುರ ಘರಾನಾದ ಕೇಸರ್‌ಬಾಯಿ ಕೇರ್ಕರ್ ನಂತರ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧರಾದ ಶಾಸ್ತ್ರೀಯ ಗಾಯಕಿ ಗಂಗೂಬಾಯಿ. ನಾವು ಕಲಿಯಬೇಕಾಗಿದ್ದು ಅವರ ಸಂಗೀತವನ್ನು ಮಾತ್ರವಲ್ಲ. ಅವರು ಪರಿಶುದ್ಧವಾಗಿ ಬದುಕು ಕಟ್ಟಿದ ಬಗೆಯನ್ನೂ.

ಸಂಗೀತವೇ ಸರ್ವಸ್ವ

ಪಂ. ಪರಮೇಶ್ವರ ಹೆಗಡೆ

ಸುಮಾರು ಇಪ್ಪತ್ತೈದು ವರ್ಷಗಳಿಂದ ಗಂಗೂಬಾಯಿ ಅವರ ಜತೆ, ಅವರ ಹಾಡಿನ ಜತೆ ನನಗೆ ಒಡನಾಟವಿದೆ. ನಾಲ್ಕೈದು ತಿಂಗಳ ಹಿಂದೆಯೂ ಭೇಟಿ ಮಾಡಿದ್ದೆ. ಬಸವರಾಜ ರಾಜಗುರು, ಭೀಮಸೇನ ಜೋಶಿ, ಕುಮಾರ ಗಂಧರ್ವ, ಮಲ್ಲಿಕಾರ್ಜುನ್ ಮನ್ಸೂರ್ ಮತ್ತು ಗಂಗೂಬಾಯಿ – ಈ ಐವರು ಉತ್ತರ ಕರ್ನಾಟಕದಿಂದ ಹಿಂದುಸ್ಥಾನಿ ಸಂಗಿತಕ್ಕೆ ದೊಡ್ಡ ಕೊಡುಗೆ. ಸುಮಾರು ಒಂದೇ ಕಾಲಘಟ್ಟದಲ್ಲಿ ಇಷ್ಟೊಂದು ಜನ ಮಹಾನ್ ಸಾಧಕರು ಬಂದದ್ದು ಆಶ್ಚರ್ಯದ ಮತ್ತು ವಿಶೇಷ ಸಂಗತಿ. ಅಲ್ಲದೆ ಈ ಐವರೂ, ವಿಶೇಷ ಸೌಕರ್ಯಗಳೇನೂ ಇಲ್ಲದ ಆ ಹಳೇ ಕಾಲದಲ್ಲೂ ಭಾರತದಾದ್ಯಂತ ಸುತ್ತಾಡಿದರು. ಕಛೇರಿಗಳನ್ನು ನಡೆಸಿದರು. ಅವರು ಎದುರಿಸಿದ ಸವಾಲುಗಳು ಮತ್ತು ಅದನ್ನು ಮೀರಿ ಬಂದದ್ದರ ಬಗ್ಗೆ ದೊಡ್ಡ ದೊಡ್ಡ ಪುಸ್ತಕಗಳನ್ನೇ ಬರೆಯಬಹುದು.

ಗಂಗೂಬಾಯಿ ಸಣ್ಣವರಾಗಿದ್ದಾಗಿನ ಕಾಲದಲ್ಲಿ ಸಂಗೀತ–ನೃತ್ಯಗಳನ್ನೆಲ್ಲ ಮೈಲಿಗೆಯಿಂದ ನೋಡುವ ಕ್ರಮ ಇತ್ತು. ಅವರ ತಾಯಿ ಅಂಬಾಬಾಯಿಯೇ ಸಂಗೀತ ಪಾಠ ಮಾಡಿದರೂ, ಅದನ್ನು ಸ್ವೀಕರಿಸುವ ಮನಸ್ಸು ಮಾಡಿ. ಕಷ್ಟಪಟ್ಟು ಅಭ್ಯಾಸ ಮಾಡಿ ಎತ್ತರಕ್ಕೇರಿದ್ದು ಸುಲಭ ಸಂಗತಿಯೇನಲ್ಲ. ನನಗಂತೂ ಅವರ ಜೀವನ ಶೈಲಿಯೂ ಇಷ್ಟ. ತುಂಬಾ ಸಿಂಪಲ್ ಡ್ರೆಸ್, ಊಟ ಎಲ್ಲ. ಸವಾಯಿ ಗಂಧರ್ವರ ಸ್ಫೂರ್ತಿಯನ್ನು ಇವರ ಗಾಯನದಲ್ಲಿ ಕಾಣಬಹುದು. ಆದರೆ ತಮ್ಮ ಘರಾಣಾ ಬಗ್ಗೆ, ತನ್ನದೇ ಶೈಲಿಯ ಬಗ್ಗೆ ಅಚಲವಾದ ನಿಷ್ಠೆ ಅವರಲ್ಲಿತ್ತು. ಡಾ. ನಾರ್ವೇಕರ್ ಎಂಬವರು ಶಿರಸಿಯ ಮಾರಿಕಾಂಬಾ ದೇವಾಲಯದಲ್ಲಿ ಎರಡು ದಿನಗಳ ದೊಡ್ಡ ಮಟ್ಟದ ಸಂಗೀತ ಸಮ್ಮೇಳನ ನಡೆಸ್ತಿದ್ರು. ನಾನು 8–9ರ ವರ್ಷದವನಿದ್ದಾಗ ಮೊತ್ತಮೊದಲು ಅಲ್ಲಿ ಗಂಗೂಬಾಯಿಯವರ ಹಾಡು ಕೇಳಿದ ನೆನಪು. 80ರ ದಶಕದಲ್ಲಿ ನಾನೂ ಅವರನ್ನು ಭೇಟಿ ಮಾಡುವಂತಾಯಿತು. ಕುಂದಗೋಳದ ಉತ್ಸವದಲ್ಲಿ 83–84ರಲ್ಲಿ ನಾನು ಮೊದಲು ಹಾಡಿದಾಗ, ಅವರೂ ಪಾಲ್ಗೊಂಡಿದ್ದರು. ನನ್ನ ಬಗ್ಗೆ ಪ್ರೋತ್ಸಾಹದ ಮಾತುಗಳನ್ನಾಡಿದರು. ಹೊನ್ನಾವರ ತಾಲೂಕಿನ ನಮ್ಮ ಮನೆ ಕಲ್ಲುಬಾಗಕ್ಕೂ ಅವರೊಮ್ಮೆ ಬಂದದ್ದರು.

ತೊಂಬತ್ತು ದಾಟಿದ ನಂತರವೂ ಹಳೆ ನೆನಪುಗಳನ್ನು ಮತ್ತೆ ಮತ್ತೆ ಹೇಳುತ್ತಿದ್ರು. ಚೆನ್ನಾಗಿ ಯೋಚನೆ ಮಾಡಬಲ್ಲವರಾಗಿದ್ದರು. ಕಣ್ಣು ಸರಿಯಾಗಿ ಕಾಣಿಸ್ತಿತ್ತು. ಮನೆಗೆ ಬಂದವರನ್ನು ದೂರದಿಂದಲೇ ಗುರುತು ಹಿಡಿದು 'ಆರಾಮಿದ್ದೀರಿ?' ಅಂತ ಕೇಳುತ್ತಿದ್ದರು. ಗಂಗೂಬಾಯಿ ಹಾಗೂ ಅವರ ಸಹವರ್ತಿಗಳೆಲ್ಲ ಸಂಗೀತಕ್ಕಾಗಿಯೇ ಬದುಕಿದವರು. ಅದು ಬಿಟ್ಟು ಬೇರೇನು ಮಾಡಲೂ ಅವರಿಗೆ ಗೊತ್ತಿರಲಿಲ್ಲ ಕೂಡಾ. ಆದರೆ ಪ್ರಸಿದ್ಧಿ, ಹಣ ಇತ್ಯಾದಿಯ ಬೆನ್ನುಬೀಳದೆ ಸಂಗೀತ ಒಂದೇ ಒಂದರ ಬೆನ್ನುಹತ್ತಿದವರು.

ಮನೆಮಾತಾದ 'ಮೌಶಿ' – ಗಂಗೂಬಾಯಿ ಹಾನಗಲ್

ಡಾ. ಶ್ಯಾಮಲಾ ಭಾವೆ

ಭಾರತೀಯ ಸಂಗೀತದ ಇತಿಹಾಸದಲ್ಲಿ ಕಛೇರಿಗಾಯನದ ಅತ್ಯುನ್ನತ ಶಿಖರವೇರಿ, ಹಿಂದುಸ್ತಾನಿ ಶಾಸ್ತ್ರೀಯ ಪದ್ಧತಿಗೆ ಅಮೂಲ್ಯವಾದ ಕೊಡುಗೆಯನ್ನಿತ್ತ ಮಹಿಳಾಮಣಿಗಳಲ್ಲಿ ಅಗ್ರಗಣ್ಯರಾದವರೆಂದರೆ ಗಂಗೂಬಾಯಿ ಹಾನಗಲ್ಲರು. ಓರ್ವ ಮಹಿಳೆ ಇಂತಹದೊಂದು ಹೆಗ್ಗಳಿಕೆ ಪಾತ್ರರಾಗಿದ್ದರೆಂದರೆ ಅದು ಭಾರತೀಯ ಸಂಸ್ಕೃತಿಯ ವಿಶೇಷವನ್ನು ಪ್ರತಿಪಾದಿಸುವ ಪರಿಯೆಂದು ನಾನು ನಂಬಿದ್ದೇನೆ. ಗಡಸು (ಗಂಡಸು) ಧ್ವನಿಯ ಏಕೈಕ ಮಹಿಳೆ ತನ್ನ ಗಾಯನಕ್ಕೆ ಹೇಗೆ ಈ ಮಟ್ಟಿಗೆ ಹೆಸರಾಗಿದ್ದಾರೆ! ಎಂದು ಅನೇಕ ಶ್ರೋತೃಗಳು ನನ್ನನ್ನು ಕುತೂಹಲದಿಂದ ಕೇಳಿದ್ದುಂಟು. ನನಗೂ ಈ ಬಗ್ಗೆ ಉತ್ತರಿಸಲು ಕಷ್ಟವಾಗುತ್ತಿತ್ತು. ಇದು 1960 ರ ದಶಕದ ಮಾತು. ಆಗಷ್ಟೇ ನನಗೆ ಸರ್.ಎಂ. ವಿಶ್ವೇಶ್ವರಯ್ಯನವರು 'ಉಭಯ ಗಾನವಿದುಷಾ' ಎಂದು ಬಿರುದನ್ನಿತ್ತು ಹರಿಸಿದ್ದರು. ನಾನು ಸಹ ಗಂಗೂಬಾಯಿ ಮೌಶಿಯವರ ಗಾಯನವನ್ನು ಎದುರು ಕೂತು ಕೇಳಿರಲಿಲ್ಲ. ಅಲ್ಲಲ್ಲಿ ಕೆಲವು ಬಾರಿ ರೇಡಿಯೋದಲ್ಲಿ ಕೇಳಿದ್ದೆ. ನನಗೂ ಇದೊಂದು ಯಕ್ಷ ಪ್ರಶ್ನೆಯಾಗಿತ್ತು.

ಒಂದೊಮ್ಮೆ ಮೌಶಿಯವರು ನಮ್ಮ ಮನೆಗೆ ತನ್ನ ಹಳೇ ಸ್ನೇಹಿತಿ 'ಸುಂದ್ರಕ್ಕ (ನಮ್ಮ ತಾಯಿ ಲಕ್ಷ್ಮೀ ಭಾವೆ ಅವರನ್ನು ಆತ್ಮೀಯವಾಗಿ ಗಂಗಾ ಮೌಶಿ ಕರೆಯುವ ಹೆಸರು) ನನ್ನ ನೋಡಲು ಬಂದಿದ್ದರು. ನನಗೆ ಯೌವನದ ಏರು ಹರುಪು. ಸಂಗೀತದ ಬಗ್ಗೆ ಬಣ್ಣ ಬಣ್ಣದ ಕಲ್ಪನೆಗಳು. ನೇರವಾಗಿ ಕೇಳಿದ್ದೆ ಅವರನ್ನೇ? "ನಿಮ್ಮ ಕಂಠದಲ್ಲಿ ಅದೇನಿದೆ. ಜಾದು? ಎಂದು ಎಲ್ಲರೂ ಕೇಳುತ್ತಿದ್ದಾರೆ" ಎಂದೆ. ಒಂದು ಕ್ಷಣ ಮೌನ. ಅಮ್ಮನನ್ನು ಬಾಯಿಮುಚ್ಚು ಎಂದು ಬೈದರು. ಅಪರಾಧವಾಯಿತೆಂದುಕೊಂಡೆ. ಮೌಶಿಯವರಲ್ಲಿ 'ಕ್ಷಮಿಸಿ' ಎಂದೆ. ಅವರಿಗೆ ತುಂಬಾ ಬೇಸರವಾಗಿತ್ತೇನೋ ಎಂದುಕೊಂಡೆ. ಗಂಗೂಮೌಶಿ

ನಕ್ಕರು. ಅವರಿಗೆ ಬೇಸರವಾಗಿರಲಿಲ್ಲ. ತುಂಬಾ ಸಂತೋಷವಾಗಿಯೇ ಇದ್ದರು. 'ಬಾ. ಇಲ್ಲಿ ಕೂಡು, ನಾ ಹಾಡಿದ್ದನ್ನ ಕೇಳು. ನನಗೇನೂ ಮೈಕ್-ವೈಕ್ ಬೇಡ' ಎಂದರು. ನನ್ನಮ್ಮನ ತಂಬೂರಿ ತೆಗೆದುಕೊಂಡು, ಸ್ವರ ಹಚ್ಚಿ 'ಆವಾಜ್' ತೆಗೆದರು. ಗಂಗೋತ್ರಿಯ ಗಂಗೆಯಂತೆ ಧ್ವನಿ ಘೋರ್ಗರೆಯಿತು. ನಾದದ ಅಲೆಗಳು ಸಾಗರದಂತೆ ಅಪ್ಪಳಿಸತೊಡಗಿದವು. ಮೀಯಾಕೀ ತೋಡಿಯ ಸಾಕ್ಷಾತ್ಕಾರವಾಯಿತು. ಆ ಖಯಾಲಿನಲ್ಲಿ ಏನಿರಲಿಲ್ಲ!! ಮಂದ್ರ ಮಾರ್ದವತೆ, ಮಧ್ಯ ಅನುಸಂಧಾನ. ತಾರ ತತ್ಪರತೆ. ಆಲಾಪದಲ್ಲಿ ಗಜನಡಿಗೆ. ತಾನುಗಳಲ್ಲಿ ಜಿಂಕೆಯ ದೌಡು. ಖಡಕ್ ಗಾಯನ. ದಟ್ಟವಾದ ಭಾವನೆಗಳು. ಅಹಾ! ಏಷ್ಟೊಂದು ಈ ಗಡಸು ಧ್ವನಿಯಲ್ಲಿ!! ಕಿರಾಣಾ ಘರಾನಾದ ಅಷ್ಟೆಲ್ಲವೂ ಆ ಧ್ವನಿಯಲ್ಲಿತ್ತು. ಇನ್ನೇನು ಬೇಕು?

ನನ್ನಷ್ಟಕ್ಕೆ ನಾನೇ ಪರಾಮರ್ಶಿಸಿದೆ. ಈ ಹಿಂದೆ ಅವರ ಕೋಮಲ ಧ್ವನಿಯಲ್ಲಿ ಇಂತಹ ಆಳವಿತ್ತೇ? ಗಾನಮಾಧುರ್ಯವಷ್ಟೇ ಶ್ರೋತೃಗಳನ್ನು ಮೋಡಿ ಮಾಡುವ ಧ್ವನಿಯಿತ್ತು ಅವರಿಗೆ. ಇದೇ ವಿಧಿ ವೈಚಿತ್ರ್ಯ. ಶಸ್ತ್ರ ಚಿಕಿತ್ಸೆ ಅವರ ಧ್ವನಿಯ ಕೋಮಲತೆಗೆ ಮಾರಕವಾಗಿತ್ತು. ಬೇರೆ ಯಾರಾದರೂ ಇಂತಹ ಸಂದರ್ಭಗಳಲ್ಲಿ ಗಾಯನವನ್ನೇ ತ್ಯಾಗ ಮಾಡುತ್ತಿದ್ದರೇನೋ. ಆದರೆ ಈ ಮೌಶಿ ವಿಶ್ವಾಮಿತ್ರನ ಛಲದವರು. ಸಾಧನೆಗಷ್ಟೇ ಸಾಧಕಿಯ ಜೀವನ ಮೀಸಲು ಎಂಬ ಅಪರಿಮಿತ ನಂಬಿಕೆ. ಅವರದು. ಸಾಧನೆಯೇ ಅವರ ದೇವರು. ಅದೇ ಪೂಜೆ. ಅದೇ ಸಂತೋಷ. ಅದೇ ಸುಖ. ಅದೇ ಆದಿ. ಅದೇ ಅಂತ್ಯ. ಆಧುನಿಕ ಯುಗದ ಯಾವುದೇ ತಾಂತ್ರಿಕತೆಯ ಅನುಕೂಲವಿಲ್ಲದಿದ್ದ ಆ 'ಸಂಗೀತ ಯುಗ'ದ ಕಲಾವಿದರ ಸಾಧನೆಯೇ ಅಂತಹದು. ಅದನ್ನು ನಾವು ಈ ಯುಗದ ಮಾನದಂಡದಲ್ಲಿ ಅಳೆಯಲಾಗದು. ಮನಸ್ಸು ತುಂಬಿ ಬಂದು ಅವರನ್ನು ನಮಿಸಿದೆ. "ನೀನು ಈ ಯುಗದ ಮನಃ ಪೂರ್ತಿ ಆಶೀರ್ವದಿಸಿದರು.

ಗಂಗೂ ಮೌಶಿಯವರು ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ನಾವು ಅಕಾಡೆಮಿಯ ಸದಸ್ಯೆಯಾಗುವ ಸೌಭಾಗ್ಯ ನನ್ನದಾಯಿತು. ಅಷ್ಟೇ ಅಲ್ಲ ಕೆಲವರ್ಷಗಳ ನಂತರ ನನಗೆ ಇದೇ ಅಕಾಡೆಮಿಯ ಅಧ್ಯಕ್ಷಪಟ್ಟ ಒದಗಿದಾಗ ನಾನು ಮೊದಲು ಮಾಡಿದ ಕೆಲಸವೆಂದರೆ ಈ ಗಂಗೂಮೌಶಿಗೆ ದೂರವಾಣಿ ಮೂಲಕ ನಮಿಸಿ, ಅವರ ಆಶೀರ್ವಾದ ಪಡೆದದ್ದು- "ಗುಣಿಜನಕೀ ಗುಣ ಗಾವೇ ನಿತ. ಸೂರತೇ ಸಾಧಕಿ ನಾದೋಪಾಸಕಿ..... ನಾನು ಇಂದು ನಿನ್ನ ಅಮ್ಮನ ಸ್ಥಾನದಲ್ಲಿದ್ದುಕೊಂಡು ಆಶೀರ್ವಾದ ಮಾಡಿದ್ದೇನೆ." ಎಂದರು. ಅಂತಹ ಪ್ರೀತಿಯ ಅಮ್ಮನಿಗೆ ನನ್ನ ನೂರು ನಮನಗಳು. ಅವರ ಹೆಸರು ಚಿರಾಯುವಾಗಲಿ ಎಂದು ಶ್ರೀದೇವರಲ್ಲಿ ಪ್ರಾರ್ಥಿಸುತ್ತೇನೆ.

ಗಾಯನ ಗಂಗೆಯ ದಡದಲ್ಲಿ

ಡಾ. ನಾಗರಾಜರಾವ್ ಹವಾಲ್ದಾರ್

ಸುಮಾರು 75 ವರ್ಷದ ಹಿಂದೆ, ಒಬ್ಬ ಭಾರತೀಯ ನಾರಿ ತನ್ನ ಜೀವನವನ್ನು ಶಾಸ್ತ್ರಿಯ ಸಂಗೀತಕ್ಕೆ ಮುಡಿಪಾಗಿಡ್ತೀನಿ; ನನ್ನ ಬದುಕೆಲ್ಲಾ ಹಾಡಾಗಬೇಕು. ನನ್ನ ಹಾಡೆಲ್ಲ ಬದುಕಾಗಬೇಕು. ನಮ್ಮ ಶಾಸ್ತ್ರೀಯ ಸಂಗೀತದ ರಚನೆಗಳೇ ನನ್ನ ಮಕ್ಕಳಿಗೆ ಜೋಗುಳ ಆಗಬೇಕು ಅಂತ ಅಂದುಕೊಂಡರೆ....? ಅದೆಂತಹಾ ನಿರ್ಧಾರ...ಅದಕ್ಕೆ ಎಷ್ಟೊಂದು ಇಚ್ಛಾ ಶಕ್ತಿಬೇಕು..... ಮೂಲತಃ ಸಂಗೀತವನ್ನು ವೃತ್ತಿಯಾಗಿಸಿಕೊಳ್ಳೊದು ಗಂಡಸರಿಗಾಗಲಿ-ಹೆಂಗಸರಿಗಾಗಲಿ ಅಂದಿನ ದಿನಗಳಲ್ಲಿ ಸಮಾಜದ ದೃಷ್ಟಿಯಿಂದಲೂ ಅಂತಹಾ ಗೌರವಾನ್ವಿತ ನಿರ್ಧಾರವಾಗಿರಲಿಲ್ಲಾ. ಆದರೆ ಇಂತಹ ಧೈರ್ಯ ಮತ್ತು ಇಚ್ಛಾಶಕ್ತಿಯನ್ನು ಮೆರೆದು, ಸಂಗೀತ ಸಾಮ್ರಾಜ್ಞೆಯಾಗಿ ಮೆರೆದು, ಕೋಟಿಗಟ್ಟಲೆ ಹೃದಯ ಸಿಂಹಾಸನಗಳನ್ನು ಸ್ವರದಿಂದ ಆವರಿಸಿದ ಧೀಮಂತ ಕಲಾವಿದೆ, ನಮ್ಮ ಗಂಗೂಬಾಯಿ ಹಾನಗಲ್ ಆಗಿದ್ದರು.

ಆಗಿನ ಕಾಲ ಬಿಡ್ರಿ; ಕೇವಲ ಹದಿನೇಳು (17) ವರ್ಷಗಳ ಹಿಂದೆ ನಾನು ಆಕಾಶವಾಣಿಯ ಅಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ, ಸಂಪೂರ್ಣ ಸಂಗೀತಕ್ಕೆ ತೊಡಗಿಸಿಕೊಂಡಾಗ ನನ್ನ ಹೆಂಡತಿ-ಮಕ್ಕಳನ್ನು ಬಿಟ್ಟು ಹಲವಾರು ಜನ ಹೆದರಿದ್ದರು. ಕೆಲವರು ನಕ್ಕಿದ್ದರು. ಇನ್ನೂ ಕೆಲವರು ಇವನಿಗೆ ಹುಚ್ಚು ಹಿಡಿದಿದೆ ಅಂದ್ಕೊಂಡಿದ್ದರು. ಈ ಸಂಗೀತವೇ ಹೀಗೆ ಪ್ರತಿದಿನ ಕಲಿಕೆ, ರಿಯಾಜು, ಸಾಧನೆ, ಚಿಂತನೆ, ನಿರಂತರ ಸಾಧನೆ ಬೇಕು. ಹೀಗಿರುವಾಗ ಗಂಗೂಬಾಯಿಯವರು ಅಂದಿನ ಕಾಲದಲ್ಲಿ ಗೃಹಿಣಿಯಗಿ, ತಾಯಿಯಾಗಿ, ಗುರುವಾಗಿ, ಅಜ್ಜಿಯಾಗಿ, ತಮ್ಮ 97ನೇ ವಯಸ್ಸಿನವರೆಗೂ ಸ್ವರವೇ ಉಸಿರಾಗಿರಿಸಿಕೊಂಡಿದ್ದು, ಇತಿಹಾಸದಲ್ಲಿ ಒಂದು ವಿನೂತನ ವಿಕ್ರಮವೆನ್ನಬಹುದು. ವಾರಣಾಸಿಯ ಗಂಗೆಯಲ್ಲಿ ಮೀಯುವುದು ಒಂದು ಕಡೆಯಾದರೆ.... ಈ ಸ್ವರಗಂಗೆಯ ಸಂಪ್ರದಾಯಬದ್ಧವಾದ ಸಂಗೀತದಲ್ಲಿ ಮೀಯದಿದ್ದರೆ, ಸ್ವಲ್ಪ ಪುಣ್ಯ ಕಡಿಮೆ ಆಗಬಹುದೇನೋ ಅನ್ನಿಸುವಂತಿತ್ತು, ಈ ವಿಶ್ವದ ಸಂಗೀತ

ರಸಿಕರಿಗೆ ನಾನು ಡಾ॥ ಗಂಗೂಬಾಯಿ ಹಾನಗಲ್ ಅವರನ್ನು 1985ರಿಂದ ಹತ್ತಿರದಿಂದ ಬಲ್ಲೆ ಹುಬ್ಬಳ್ಳಿಯ ಸವಾಯಿ ಗಂಧರ್ವ ಹಾಲ್‌ನಲ್ಲಿದ್ದ ಕಿರ್ಲೋಸ್ಕರ್ ಮೆಮೋರಿಯಲ್ ಮ್ಯೂಸಿಕ್ ಆರ್ಕೈವ್ಸ್‌ನಲ್ಲಿ ನಾನು 2 ವರ್ಷ ಕೆಲಸ ಮಾಡುತ್ತಿದ್ದಾಗ, ಕನಿಷ್ಠ ವಾರಕ್ಕೊಮ್ಮೆ ಅವರ ಭೇಟಿ. ಗಂಗೂಬಾಯಿಯವರ 75ನೇ ಹುಟ್ಟು ಹಬ್ಬದ ಸಲುವಾಗಿ ಹುಬ್ಬಳ್ಳಿಯ ಆರ್ಟ್ ಸರ್ಕಲ್ ಪರವಾಗಿ, ಆರು ಧ್ವನಿಸುರುಳಿಗಳನ್ನು ಹೊರತರುವ ಯತ್ನದಲ್ಲಿ, ಗಂಗುಬಾಯಿಯವರ ಹಲವಾರು ಸಂಗಿತ ಕಚೇರಿಗಳ ಧ್ವನಿಮುದ್ರಿಕೆಗಳನ್ನು (ಕನಿಷ್ಠ 150 ಗಂಟೆಗಳಷ್ಟು) ಕೇಳಿ ಪರಿಷ್ಕರಿಸಿ, ಆಯ್ಕೆ ಮಾಡುವ ಭಾಗ್ಯ-ಜವಾಬ್ದಾರಿ ನನ್ನ ಪಾಲಿಗಿತ್ತು. "ನನ್ನ ಗಾನಾ ನಿನಗ ರಗಡು ಕೇಳಲಿಕ್ಕೆ ಸಿಕ್ಕ್ಯಾದ... ನಮ್ಮ ಘರಾನೇ ಕೆಲಸ ಎಲ್ಲಾ ನಿನಗ ಲಗೂ ಬರ್ತಾವ ಬಿಡಪ" ಅಂದದ್ದು ಅಕ್ಕಾ ಅವರು. ಇದೇ ಸಮಯದಲ್ಲಿ ಅವರ ಗುರುಗಳಾದ ಸವಾಯಿ ಗಂಧರ್ವರ ಸ್ಮರಣಾರ್ಥ, ಯುವಕರಿಗಾಗಿ ಒಂದು ಸಂಗೀತ ಸ್ಪರ್ಧೆ. ನಾನೂ ಹಾಡಿದ್ದೆ, ಗಂಗೂಬಾಯಿಯವರೂ ತೀರ್ಪುಗಾರರಲ್ಲಿ 'ಒಬ್ಬರಾಗಿದ್ದರು. ನನಗೆ ದ್ವಿತೀಯ ಬಹುಮಾನವೂ ಬಂತು. ಆದರೆ ಅಕ್ಕಾ ಅವರು ನನ್ನನ್ನು ಕರೆದು... ಏಯ್ ನಾಗರಾಜ ನಿನ್ನ ಆವಾಜ ಛಲೋ ಆದ. ಲಯದ್ದು-ಸ್ವರದ್ದು ಕಲ್ಪನಾಗೂ ಛಲೋ ಆದ. ಆದರ ಸ್ಥಾಯಿ ಅಂತರಾಳದ ಸಾಹಿತ್ಯ ಬರೋಬರಿ ಹಾಡಲಿಲ್ಲ. ಇನ್ನು ಮುಂದೆ ಹೆಚ್ಚು ಕಾಳಜಿಯಿಂದ ಹಾಡಪಾ. ಮುಂದೆ ಒಳ್ಳೆ ಗಾಯಕಿ ಆಗ್ತಿಯ... ಅಂತ ಕಿವಿಮಾತು ಹೇಳಿದ್ದು ಇಂದಿಗೂ ಅನುರಣಿಸ್ತಿದೆ. ಕಲಾವಿದರು ಯಾರೇ ಇರಲಿ; ಅವರ ಸಂಗೀತ ಸರಿಯಾಗಿರಬೇಕು, ಸಂಪ್ರದಾಯ ಬದ್ಧವಾಗಿರಬೇಕು. ಅನ್ನೋದು ಆ ಹಿರಿಯ ಪಂಕ್ತಿ ಸಂಗೀತಗಾರರ ಉದಾತ್ತ ಧ್ಯೇಯ್ಯವಾಗಿತ್ತು. ಇಂತಹ ಮಹಾನ್ ಕಲಾವಿದರ ಜೊತೆ ಕಳೆದ ಸಮಯವೆಲ್ಲ ಒಂದು ಕಲಿಕೆಯ ಅನುಭವವೇ.

ಸುಮಾರು 1998 ಇರಬಹುದು. ಬೆಂಗಳೂರಲ್ಲಿ ಗಂಗೂಬಾಯಿಯವರ ಹಾಡುಗಾರಿಕೆ. ಆದರೆ ಅಂದು ತಬಲಾಕ್ಕೆ ಶೇಷಗಿರಿ ಹಾನಗಲ್ ಬಂದಿರಲಿಲ್ಲ. ಸಾಮಾನ್ಯವಾಗಿ ಗಂಗೂಬಾಯಿಯವರ ಹಾಡಿಗೆ-ಶೇಷಗಿರಿ ಹಾನಗಲ್ ಅವರೇ ತಬಲಾ ಸಾಥಿ, ಹಾಗೂ ತಂಬೂರಿ ಶೃತಿ ಮಾಡಿಕೊಂಡು ಇದ್ದರು ಸಹಾ. ಗಂಗೂಬಾಯಿಯವರು ಯಾರದ್ದೋ ಜೋಡಿ ಮಾತಾಡ್ತಿದ್ರು, ನಾನು ಹೋಗಿ ನಮಸ್ಕಾರ ಮಾಡಿದೆ. "ಹೆಂಗಿದ್ದೀಯಪಾ.... ನೌಕರಿ ಬಿಟ್ಟ ಮೇಲೆ ಎಲ್ಲ ರಾಮು ನಡದದೇನು. ಮೊನ್ನೆ ನಿನ್ನಾ ಹಾಡು ರೇಡಿಯೋದಾಗ ಕೇಳಿದೆ.

ಬರೋಬರಿ ಅನ್ನಿಸ್ತು.. ಅಂದ್ವಾಂಗ ಇವತ್ತು ನಮ್ಮ ಶೇಷಣ್ಣ ಬಂದಿಲ್ಲ; ನನಗ ಇವರ ಜೋಡಿ ಮಾತಾಡೋದು ಅದ; ನೀನೆ ತಂಬೂರಿ ಕೂಡಿಸಿ ಬಿಡಪಾ ಅಂದ್ರು..." ಇದು ನನ್ನ ಪುಣ್ಯ ಹಾಗು ನನಗೆ ಸಂದ ದೊಡ್ಡ ಗೌರವ ಅಂದ್ಕೊಂಡೆ. ಇದು ಅವರ ಸರಳತೆ ಸಜ್ಜನಿಕೆಗೆ ಇನ್ನೊಂದು ನಿದರ್ಶನ.

ತಮ್ಮ ಸುಧೀರ್ಘ ಸಂಗೀತ ಪಯಣದಲ್ಲಿ, ಎಂದಿಗೂ ಯಾವ ವಿಷಯಕ್ಕೂ ರಾಜೀ ಮಾಡಿಕೊಂಡವರಲ್ಲ. ಶ್ರೋತೃಗಳನ್ನು ತಮ್ಮ ಸಂಪ್ರದಾಯ ಸಂಗೀತದ ಮಟ್ಟಕ್ಕೆ ಕರೆದೊಯ್ಯುತ್ತಿದ್ದರು. ಜನಗಳು ಕೇಳಿದ್ದನ್ನ ಹಾಡಿ-ರಂಜಿಸುವ ಜಾಯಮಾನ ಅವರದಾಗಿರಲಿಲ್ಲ. ಕೆಲವರಂತೂ "ಗಂಗೂಬಾಯಿಯವರೇ, ನೀವು ಭಕ್ತಿ ಸಂಗೀತ ಯಾಕೆ ಹಾಡೋದಿಲ್ಲ.?" ಅಂತ ಕೇಳಿದಾಗ "ನಾನು ಹಾಡೋದನ್ನೆಲ್ಲ ಭಕ್ತಿಯಿಂದ, ಶ್ರದ್ಧೆಯಿಂದ ಸಮರ್ಪಣಾ ಮನೋಭಾವದಿಂದ ಹಾಡುತೇನ. ಇನ್ನೂ ವಿಶೇಷವಾಗಿ ಭಕ್ತಿ ಸಂಗೀತದ ಅವಶ್ಯಕತೆಯೇನು?" ಅಂತ ಉತ್ತರಿಸಿದ್ದರು. ದೇಶದ ಹಲವಾರು ಮಾನ-ಸಮ್ಮಾನಗಳು ಅವರ ಮುಡಿಗೇರಿದ್ದರೂ, ಅಕ್ಕಾ ಅವರು ಎಂದಿಗೂ ಸರಳತೆ-ಸಜ್ಜನಿಕೆಯ ಸಾಕಾರ ಮೂರ್ತಿಯಾಗಿದ್ದರು. ಯುವ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಕಳೆದ ಏಪ್ರಿಲ್ ಹನ್ನೊಂದರಂದು ಹುಬ್ಬಳ್ಳಿಯಲ್ಲಿ, ಅವರ 97ನೇ ಜನ್ಮದಿನವಾದ ಪ್ರಯುಕ್ತ ನಾನು, ನನ್ನ ಮಗ ಓಂಗಾರನಾಥನ ಯುಗಳ ಗಾಯನ, ಸಹವಾದ್ಯ, ತಬಲಾ ನುಡಿಸಲು ನನ್ನ ಕಿರಿಯ ಮಗ ಕೇದಾರನಾಥ್ ಇರಬೇಕೆಂದು ಗಂಗೂಬಾಯಿಯವರ ಬಯಕೆ-ಆಸೆ ಎರಡೂ ಆಗಿತ್ತು. ಸ್ವಲ್ಪ ಅನಾರೋಗ್ಯವಿದ್ದರೂ ವೀಲ್ ಛೇರ್ ಮೇಲೆ ಕುಳಿತು, ನಮ್ಮ ಹಾಡು ಕೇಳಿ... "ನಿಮ್ಮ ಮನೆಯಿಂದ ನಮ್ಮ ಸಂಗೀತ ಮುಂದುವರೀಲಿ ಅಂತ ಆಶೀರ್ವದಿಸಿದರು."

ಅವರ ಸಂಗೀತ-ಹಿತನುಡಿ-ಆಶೀರ್ವಾದ, ಸ್ವರದ ಝರಿ ಎಂದಿಗೂ ಹರೀತಾನೆ ಇರುತ್ತೆ. ಅಕ್ಕಾ ಅವರ ಕನ್ನಡ ಮೇಷ್ಟ್ರಾಗಿದ್ದ ದ.ರಾ.ಬೇಂದ್ರೆ..ಈಗ ಇದ್ದಿದ್ದರೆ..." ಇನ್ನು ಯಾಕ ಬರ್ತೀರಿ ನೀವು ಹುಬ್ಬಳ್ಳಿಗೆಲ್ಲಾ... ಗಾಯನ ಗಂಗೆ ಇಲ್ಲದ ಮ್ಯಾಲೆ.... ಅಂತ ಉದ್ಗರಸ್ತಾ ಇದ್ದರೇನೊ....!!!

ಅಕ್ಕನ ತಪಸ್ಸು ಸಂಗೀತಕ್ಕೆ ಅತಿ ಸಂಗತ

ಡಾ॥ ರಾಜೀವ ತಾರಾನಾಥ

ಸಂಗೀತದ ಬಗ್ಗೆ ಬರೆಯುವಾಗ ಒಂದು ವಿಶೇಷವನ್ನು ಗಮನಿಸಬಹುದು. ಸಂಗೀತವನ್ನು ಕಲಾಪ್ರಕಾರಗಳಲ್ಲಿ ಒಂದು ಪ್ರಮುಖ ವಸ್ತುವನ್ನಾಗಿ ರೂಪಿಸಿಕೊಂಡು ಅದರ ಬಗ್ಗೆ ಪ್ರೌಢಲೇಖನಗಳನ್ನು ಹಮ್ಮಬಹುದು. ಅಥವಾ ಅದರ ಅನುಭವಕ್ಕೆ ಒಳಗೊಂಡು ಆ ಅನುಭವದ ಸೊಗಸು ಪ್ರವಾಹ ಪವಾಡಗಳನ್ನು ಬಣ್ಣಿಸುವ ಪ್ರಯತ್ನ ಮಾಡಬಹುದು. ಅಕ್ಕ ಗಂಗೂಬಾಯಿಯವರ ಸಂಗೀತ ಮತ್ತು ನನಗೂ ಇರತಕ್ಕ ಸಂಬಂಧ ಎರಡನೆಯ ಪ್ರಕಾರದ್ದು ಅವರ ಕಲೆ ನನ್ನ ಬಾಳಿನುದ್ದಕ್ಕೂ ಇದ್ದು, ಇರುವ ಇಂಪಾದ, ಸೊಂಪಾದ ಅನುಭವ, ಉತ್ತೇಜನ.

ಸಣ್ಣವನಿದ್ದಾಗ ನನ್ನ ತಂದೆ ಪಂಡಿತ್ ತಾರಾನಾಥರು ನನಗೆ ಹಾಡುಗಾರಿಕೆಯಲ್ಲಿ ಕ್ರಮಬದ್ಧ ಶಿಕ್ಷಣ ಕೊಡಿಸಿದರು. ಆ ಶಿಕ್ಷಣದಲ್ಲಿ ಉತ್ತಮ ಗಾಯಕರ ಸಂಗೀತ ಶ್ರವಣ ಒಂದು ಮುಖ್ಯವಾದ ಅಂಶವಾಗಿತ್ತು. ಇದಕ್ಕಾಗಿಯೇ, ಮನೆಗೆ ಒಂದು ರೇಡಿಯೋ ಬಂತು. ಅದರ ಕಾರ್ಯಕ್ರಮಗಳನ್ನು ಗುರುತಿಸಿ ಹಚ್ಚುವ ಪಾಠವು ಆಯಿತು. ಆಗ ಕೇಳಿದ ಮಹನೀಯರಲ್ಲಿ ಒಬ್ಬರು ಅಕ್ಕ. ಮುಂದೆ ನಾನೇ ಕೆಲಕಾಲ ಹಾಡುಗಾರನಾಗಿ ಅಲ್ಲಿ ಇಲ್ಲಿ ಚಿಕ್ಕ ಪುಟ್ಟ ಕಾರ್ಯಕ್ರಮಗಳನ್ನು ಕೊಟ್ಟಿದ್ದುಂಟು. ಅಲ್ಲಿಂದ ಮುಂದಕ್ಕೆ ಸರೋದ್ ಕಲಿಯುವುದು ಆಯಿತು. ನುಡಿಸುವ ಪ್ರಯತ್ನ ನಡೆದೇ ಇರುತ್ತದೆ. ಈ ಪ್ರಕ್ರಿಯೆ ನನ್ನ ಇಡೀ ಜೀವನವನ್ನೇ ಒಳಗೊಂಡಿದೆ. ಇದರಲ್ಲಿ ಅಕ್ಕನ ಸಂಗೀತ ನನ್ನ ಬೆಳವಣಿಗೆಯಲ್ಲಿ ಒಂದು ಸತತವಾದ ಹತ್ತಿರವಾಗಿ ಮೊಟ್ಟಮೊದಲಿಗೆ ಆಕಾಶವಾಣಿಯಾಗಿ, ಮುಂದೆ ಕಲ್ಕತ್ತೆಯಲ್ಲಿ ಶಾರೀರವಾಣಿಯಾಗಿ ಈಗ ಪ್ರೀತಿಯ ಅಕ್ಕನ ಧ್ವನಿಯಾಗಿ ನನ್ನ ಜೊತೆಗೇ ಇದೆ.

ಈಗ ಅಕ್ಕನ ಗಾಯಕಿಯಿಂದ ನನ್ನ ಸರೋದ್ ಸಂಗೀತ ಸಾಕಷ್ಟು ದೂರದಲ್ಲಿದೆ ಎಂದು ಅನ್ನಿಸಬಹುದು. ದಿವಂಗತ ಪರಮಪೂಜ್ಯ ಶ್ರೀ ಸವಾಯ್ ಗಂಧರ್ವರ ಹಿರಿಯ ಶಿಷ್ಯರಾದ ದಿವಗಂತ ಶ್ರೀ ವೆಂಕಟರಾವ್ ರಾಮದುರ್ಗರಲ್ಲಿ

ನಾನು ಬಾಲಶಿಷ್ಯನಾಗಿದ್ದಾಗ ಅಕ್ಕನ ಸಂಗೀತ ಹತ್ತಿರವಾಗಿದ್ದುದು ಸಹಜ. ಆದರೆ ಈಗ? ಅದರ ಸಾಮೀಪ್ಯವೇನೂ ಹೋಗಿಲ್ಲ. ನನ್ನ ಶೈಲಿ, ನನ್ನ ಮಾಧ್ಯಮ ಮಾರ್ಪಟ್ಟಿರಬಹುದು. ನಾನೇ ಇದರ ಬಗ್ಗೆ ಯೋಚನೆ ಮಾಡಿದಾಗ ನನಗೆ ಒಂದೇ ಉತ್ತರ ಸಿಗುತ್ತದೆ. ಇತ್ತೀಚೆಗೆ, ಅಂದರೆ ಹೆಚ್ಚು ಕಡಿಮೆ ಈ ಎರಡು ದಶಕಗಳಲ್ಲಿ ನಮ್ಮ ಇಡೀ ಶಾಸ್ತ್ರೀಯ ಗಾಯನ ಪ್ರಪಂಚದಲ್ಲಿಯೇ ರಾಗಸಂಯೋಜನೆಯ ಕ್ಷೇತ್ರದಲ್ಲಿ ಒಂದು ಬದಲಾವಣೆ ಬಂದಿದೆ. ಎಲ್ಲಿಯೋ ಆ ಬದಲಾವಣೆಯಲ್ಲಿ ರಾಗದ ಆರ್ಷಶುದ್ಧಿ ಕಳೆದುಹೋಗುತ್ತಿದೆಯೋ ಏನೋ, ಹೊಸ ಹೊಸ ಕ್ಲಿಷ್ಟ ಒಕ್ಕಣೆಗಳಲ್ಲಿ ರಾಗದ ಸರಳ ಸಹಜತನವೇ ಮಾಸಿಹೋಗುತ್ತಿದೆಯೇನೋ, ಹೀಗೆಲ್ಲಾ ಒಮ್ಮೊಮ್ಮೆ ಎನಿಸುತ್ತದೆ. ಈ ಸಂದರ್ಭದಲ್ಲಿ ಅಕ್ಕ ಗಂಗೂಬಾಯಿಯವರ ಸಂಗೀತ, ಅವರ ರಾಗ ಕಲ್ಪನೆ ಮತ್ತು ಸಂಯೋಜನೆ ಆ ಬೆಲೆಬಾಳುವ ತನ್ನತನವನ್ನು ಉಳಿಸಿಕೊಂಡೇ ಬಂದಿದೆ. ಇದು ನನಗಿರಲಿ, ಸಂಗೀತ ಪ್ರಪಂಚಕ್ಕೇ ಅತೀವ ಮುಖ್ಯವಾದ ಸಂಗತಿ. ವರ್ತಮಾನ ಸಂಗೀತ ಜಗತ್ತಿನಲ್ಲಿ ಅವರ ಗಾಯನ ಒಂದು ಪವಿತ್ರ ಸ್ಥಾನ. ಕ್ಲಿಷ್ಟತೆಯಲ್ಲಿ ದಿಗ್ಭ್ರಮೆಗೊಂಡಿರುವ ನಮಗೆ ಅವರ ಸಂಗೀತ ಮತ್ತೆ ಮತ್ತೆ ಹದವಾದ ದೃಷ್ಟಾಂತಗಳನ್ನು ಎದುರಿಟ್ಟು ಸರಿಯಾದ ದಾರಿಗೆ ತರುತ್ತದೆ. ಇನ್ನೂ ಮುಂದೆ ಹೇಳಬೇಕಾದರೆ ಈವತ್ತಿನ ದಿವಸ ಹಿಂದೂಸ್ತಾನಿ ಸಂಗೀತದ ದೊಡ್ಡ ಮೈದಾನದಲ್ಲಿ ಉತ್ತರ ಕರ್ನಾಟಕ ಒಂದು ಶುದ್ಧಿಕೇಂದ್ರವಾಗಿ ನಿಂತಿದೆ. ರಾಗದ ನಿಜ ಸ್ವರೂಪವನ್ನು ಆಗಾಗ್ಗೆ ಕಂಡುಕೊಳ್ಳಲು ಇಡೀ ದೇಶದ ಸಂಗೀತಗಾರರು ಉತ್ತರ ಕರ್ನಾಟಕದ ಹಿಂದೂಸ್ತಾನೀ ಸಂಗೀತದ ದಿಕ್ಕಿನಲ್ಲಿ ನೋಡುತ್ತಾರೆ. ಈ ರಾಗ ಶುದ್ಧಿಯ ಅಭ್ಯಾಸ ಬೇರೂರಿ ಹರಡುವುದಕ್ಕೆ ಕಾರಣಕರ್ತರಲ್ಲಿ ಮುಖ್ಯವಾಗಿ ಒಬ್ಬರು ಅಕ್ಕ ಗಂಗೂಬಾಯಿಯವರು. ಅವರ ಜೀವಮಾನದ ತಪಸ್ಸಿನಿಂದ ಕರ್ನಾಟಕಕ್ಕೇ ಈ ವಿಶಿಷ್ಟ ಸ್ಥಾನ ದೊರಕಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಸಂಗೀತಕ್ಕೆ ಗಾಂಭೀರ್ಯ, ಘನತೆ ಹಾಗೂ ಆಯಾ ರಾಗಕ್ಕೆ ಅದರ ಸರಳ ನೈಜತೆ ತಂದುಕೊಟ್ಟಿರುವ ತಪಸ್ಸು ಅಕ್ಕನದು. ಆ ತಪಸ್ಸು ನನ್ನಂತಹ ಅನೇಕ ಸಂಗೀತಗಾರರನ್ನು ಎಚ್ಚರಿಸಿ ಸಂಗೀತದಲ್ಲಿ ಅರ್ಥವಂತಿಕೆಯ ಕಡೆಗೆ ಪದೇ ಪದೇ ಕೊಂಡೊಯ್ದಿದೆ. ಕರ್ನಾಟಕಕ್ಕೆ, ಇಡೀ ದೇಶಕ್ಕೆ ಇದೇ ಅಕ್ಕನವರ ಕೊಡುಗೆ, ಆಶೀರ್ವಾದ. ಇಂದು ಅಕ್ಕನ ತಪಸ್ಸು ನಮ್ಮ ಸಂಗೀತಕ್ಕೆ ಅತಿ ಸಂಗತ. ಅಕ್ಕ ಒಂದು ಪವಾಡ. ಅದರ ಪ್ರಭಾವ ನಮ್ಮೆಲ್ಲರ ಮೇಲಿರಲಿ.

ಮರೆಯಲಿ ಹೆಂಗ ಆ ನೆನಪು.....

ಡಾ. ಪಂ. ಪುಟ್ಟರಾಜ ಗವಾಯಿಗಳು (ವೀರೇಶ್ವರ ಪುಣ್ಯಾಶ್ರಮ ಗದಗ)

ಗದಗ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಚಾಕ್ಷರಿ ಗವಾಯಿಗಳ ಗದ್ದುಗೆ ದರ್ಶನ ಪಡೆದ ನಂತರ ಡಾ. ಗಂಗೂಬಾಯಿ ಹಾನಗಲ್ಲ ಅವರು ಪುಟ್ಟರಾಜ ಕವಿ ಗವಾಯಿಗಳು, ಪಣಗಿ ಬಾಳಪ್ಪ, ನರಸಿಂಹಲು ವಡವಾಟಿ ಅವರೊಂದಿಗಿನ ಸಂದರ್ಭ.

ಗಂಗೂಬಾಯಿ ಹಾನಗಲ್ ನನಕಿಂತ ಒಂದು ವರ್ಷ ದೊಡ್ಡಾಕಿ, ಈಗ ಬರೀ ನೆನಪ ಬಿಟ್ ಹೋಗ್ಯಾಳ, ಸಂಗೀತಗಾರರಿಗೆ, ಕೇಳಾವ್ರಿಗೆ ನಮಗ ಗಂಗವ್ವನ ಅಗಲಿಕೆ ಭಾಳ ದುಃಖ ತಂದದ.

ಗದಗಿನಿಂದ ಯಾರೇ ಹುಬ್ಬಳ್ಳಿ ಗಂಗೂಬಾಯಿ ಮನಿಗೆ ಹೋದ್ರ ಪುಟ್ಟರಾಜ ಗವಾಯಿಗೋಳ ಹೆಂಗ ಇದ್ದಾರ... ನಾ ಅರಾಮ ಇದ್ದಾರ, ಅಂತ ಕೇಳ್ತಿದ್ಲಂತ ಆಮ್ಯಾಲೆ ಮುಂದಿನ ಮಾತು ಸುರು ಮಾಡ್ತಿದ್ಲಂತ. ಹೋದಾವ್ರು ಹೇಳ್ತದಿದ್ರು. ಗಂಗೂಬಾಯಿಗೆ ಗದಗನ್ಯಾಗ ಕಲಾವಿಕಾಸ ಪರಿಷತ್ತು 1993 ರೊಳಗ 'ಗಾನಗಂಗಾಮಾಯಿ' ಪ್ರಶಸ್ತಿ ನೀಡಿ ಗೌರವಿಸಿದ್ದಾರ. ಭಕ್ತರು ನನ್ನ ಜನ್ಮದಿನದ ಕಾರ್ಯಕ್ರಮ ಹಮ್ಮಿಕೊಂಡಿದ್ರು, ಆಗ ಗಂಗೂಬಾಯಿ ಅತಿಥಿಯಾಗಿ ಬಂದಿದ್ಲು ಗಂಗೂಬಾಯಿ 'ನನಗ ಭಾರತರತ್ನ ಕೊಡಬೇಕು' ಅಂತ ಹೇಳ್ತಿದ್ಲು, ಆದ್ರ ನಾವು ಆಕಿಗೆ "ಭಾರತರತ್ನ ಪ್ರಶಸ್ತಿ ಸಿಗಬೇಕು ಅಂತ ಹೇಳಿದೆ ಹಿಂದೂಸ್ಥಾನಿ ಸಂಗೀತ ಲೋಕದೊಳಗ ದೇಶದ ಶ್ರೇಷ್ಠ ಕಿರಾಣಾ ಘರಾಣಾ ಗಾಯಕಿ, ಹಾಡಿಕೆನೂ ಅದ್ಭುತ ಇತ್ತು. ಗಂಗೂಬಾಯಿ ಇಲ್ಲದ ಸಂಗೀತ ಲೋಕಾನ ಬಡವಾದ್ಹಾಂಗ ಆಗ್ಯೆತಿ. ಪಾಪ ಆವರ ಕುಟುಂಬಕ್ಕ ದುಃಖ ತಡಕೊಳ್ಳುವ ಶಕ್ತಿ ನೀಡಲಿ"

ನನಗಾಗಿಯೇ ಹಾಡಿದರೇ?

ಎಸ್.ಎಲ್. ಭೈರಪ್ಪ

1954ನೇ ಇಸವಿ ಇರಬಹುದು. ಅಥವಾ ಐವತ್ತೈದೋ. ನನಗೆ ಇಪ್ಪತ್ತೋ ಇಪ್ಪತ್ತೊಂದೋ, ನೆನಪು ಸರಿಯಾಗಿಲ್ಲ. ಗೆಳೆಯನೊಬ್ಬ ರಾತ್ರಿ ರೈಲಿಗೆ ಬೆಂಗಳೂರಿಗೆ ಹೋಗುವವನಿದ್ದ. ಅವನನ್ನು ಕಳಿಸಿ ರಾತ್ರಿ ಹತ್ತೂವರೆಯಲ್ಲಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಹಾಸ್ಟೆಲಿಗೆ ನಡೆದು ಬರುತ್ತಿದ್ದೆ. ಒಂದು ಜಾಗದಲ್ಲಿ ಲೌಡ್‌ಸ್ಪೀಕರ್‌ನಲ್ಲಿ ಸಂಗೀತ ಕೇಳಿಬರುತ್ತಿತ್ತು.

ಸಂಗೀತವೆಂದರೆ ಶೃತಿ ಇಲ್ಲ. ಪದವಿಲ್ಲ. ಅರ್ಥಮಾಡಿಕೊಳ್ಳುವಂಥ ಭಾಷೆ ಇಲ್ಲ. ಲಹರಿ ತುಂಬಿ ಬಂದಾಗ ಹುಡುಗರು ಮಾವಿನಮರ ಹತ್ತಿ ಕೊಂಬೆಯ ಮೇಲೆ ಕೂತು ಆಕಾಶವನ್ನು ಕರೆಯುವಂತೆ ಕಿರಿಚಿಕೊಳ್ಳುತ್ತಿದ್ದ ರೀತಿಯದು. ದಟ್ಟ ಕಾರಿರುಳಿನಲ್ಲಿ ದನಕಾಯುವವನು ತನ್ನ ದೊಡ್ಡಿಯ ದನಗಳಿಗೆ ಅರ್ಥವಾಗುವ ರೀತಿಯಲ್ಲಿ ಹಾಯ್, ಹೊಯ್ ಎಂದು ದೀರ್ಘವಾಗಿ ಹಾಡುವ ಭಾಷೆ ಇಲ್ಲದ ಸ್ವರದ ರೀತಿಯದು. ಅದಕ್ಕೆ ಉತ್ತರವಾಗಿ ಎಲ್ಲೋ ದೂರದಲ್ಲಿದ್ದ ಹಸುಗಳು ಗಟ್ಟಿಯಾಗಿ ಮಾರುತ್ತರ ಕೊಡುವ ತುಂಬುಭಾವದ ರೀತಿಯದು. ಯಾವ ಅರ್ಥವೂ ಇಲ್ಲದ, ಆದರೆ ನನ್ನ ಕಲ್ಪನೆಯು ಭಾವತುಂಬಿ ಅರ್ಥದ ಮಳೆಯನ್ನೇ ಕರೆಯುತ್ತಾ ಬಾನಿನೆತ್ತರದಲ್ಲಿ ಸ್ಫುಟಗೊಳ್ಳುವಂತೆ ಪ್ರಚೋದಿಸುವ ಜಾತಿಯದು. ರಸ್ತೆಯಲ್ಲೇ ಮೂಕವಾಗಿ ನಿಂತುಬಿಟ್ಟೆ. ಬದಿಯ ಪೆಂಡಾಲಿನೊಳಗೆ ಸಂಗೀತ ನಡೆಯುತ್ತಿದೆ ಎಂಬ ಅರಿವು ಬರಲು ತುಸು ಹೊತ್ತು ಹಿಡಿಯಿತು. ಅನಂತರ ದೃಷ್ಟಿ ಹತ್ತಿರದಲ್ಲಿ ನಿಲ್ಲಿಸಿದ್ದ ತಡಿಕೆ ಬೋರ್ಡಿನ ಕಡೆಗೆ ಹರಿಯಿತು.

ಒಳಗೆ ನಡೆಯುತ್ತಿದ್ದದ್ದು ದೇವೇಂದ್ರಪ್ಪನವರು ಏರ್ಪಡಿಸಿದ್ದ ಹನುಮಜಯಂತಿಯ ಸಂಗೀತೋತ್ಸವ. ಈಗ ಹಾಡುತ್ತಿರುವವರು ಶ್ರೀಮತಿ ಗಂಗೂಬಾಯಿ ಹಾನಗಲ್. ಸರ್ವರಿಗೂ ಸ್ವಾಗತ. ಉಚಿತ ಪ್ರವೇಶ. ಸರಕ್ಕನೆ ಒಳಗೆ ನುಗ್ಗಿದೆ. ಜಾಗಬಿಡಿಸಿಕೊಂಡು ವೇದಿಕೆಯ ಹತ್ತಿರವೇ ಹೋಗಿ ಜಮಖಾನೆಯ ಮೇಲೆ ಕುಳಿತೆ. ಗಾಯಕಿ ಕರುಳಿನಿಂದ ಹುಟ್ಟಿ ಹೊಮ್ಮುವಷ್ಟು ನಿಗೂಢ ಭಾವವನ್ನು ಸುರಿಯುತ್ತಿದ್ದರು. ಅಳುತ್ತಾ ರಚ್ಚೆ ಹಿಡಿದ ನನ್ನನ್ನು ಸಮಾಧಾನಪಡಿಸುವಂತೆ ಸತ್ತುಹೋದ ನನ್ನ ಅಮ್ಮ ಹಾಡುತ್ತಿದ್ದಾಳೆ ಎಂಬ

ಭಾವ ನನ್ನನ್ನು ತುಂಬಿಕೊಂಡಿತು. ಉದ್ದಕ್ಕೂ ಗಾಯಕಿ ನನ್ನನ್ನೇ ನೋಡುತ್ತಾ ಹಾಡುತ್ತಿದ್ದಾರೆ. ಅಲ್ಲಿ ಸೇರಿದ್ದ ನೂರಾರು ಜನರಲ್ಲಿ ಎಲ್ಲರನ್ನೂ ಬಿಟ್ಟು ನನ್ನೊಬ್ಬನಿಗೇ ನನ್ನನ್ನು ಲಾಲಿಸಿ ತಣಿಸುವುದಕ್ಕೆ ಮಾತ್ರವೇ ಹಾಡುತ್ತಿದ್ದಾರೆ ಎನ್ನಿಸಿತು. ಅದೊಂದು ಬಗೆಯ ಅರ್ಥವಿಲ್ಲದ ಸ್ವಾರ್ಥವಿಲ್ಲದ ಬರಿಯ ಭಾವ ತುಂಬಿದ ಗಾಯನ. ಆ ಒಂದೇ ರಾಗವನ್ನು ಎಷ್ಟು ಹೊತ್ತು ಹಾಡಿದರೋ ನನಗೆ ಹೇಗೆ ಗೊತ್ತಾಗಬೇಕು? ಕಾಲದ ನನ್ನ ಅರಿವು ಸತ್ತುಹೋಗಿತ್ತು.

ಅವರು ಯಾವಾಗಲೋ ಹಾಡುವುದನ್ನು ನಿಲ್ಲಿಸಿದರು. ದೇವೇಂದ್ರಪ್ಪನವರು ವೇದಿಕೆಯ ಹತ್ತಿರಕ್ಕೆ ಬಂದು, 'ಈಗ ಕಾಲು ಗಂಟೆ ವಿರಾಮ. ಅನಂತರ ಗಂಗೂಬಾಯಿಯವರು ಮತ್ತೆ ಹಾಡುತ್ತಾರೆ' ಎಂದರು. ಜನಗಳು ಕಾಫಿ ಟೀ ಕುಡಿಯಲು ಎದ್ದುನಿಂತರು. ಇವರು ಯಾಕೆ ವಿರಾಮವನ್ನು ಕೊಡಬೇಕು, ಹಾಡನ್ನು ಮುಂದುವರೆಸುವುದಕ್ಕೆ ಏನು ಕಷ್ಟವಾಗಿತ್ತು? ಎಂದು ನನಗೆ ಸಿಟ್ಟು ಬಂತು. ಗಂಗೂಬಾಯಿ ಸಾಥಿದಾರರ ಜೊತೆಯಲ್ಲೇ ಚಹಾಕ್ಕೆ ಹೋದರು. ನನಗೆ ಹಸಿವು ಕಾಣಿಸಿಕೊಂಡಿತು. ರಾತ್ರಿಯ ಊಟವಾಗಿರಲಿಲ್ಲ. ನಡುರಾತ್ರಿ ಹನ್ನೆರಡು ಸಮೀಪಿಸುತ್ತಿತ್ತು. ಹಾಸ್ಟೆಲಿನಲ್ಲಿ ನನ್ನ ಸ್ನೇಹಿತನೊಬ್ಬನಿಗೆ ತಟ್ಟೆಯಲ್ಲಿ ಊಟ ಹಾಕಿಸಿ ತಂದಿಡಲು ಹೇಳಿದ್ದೆ. ಬೇಗ ಹೋಗಿ ಊಟಮಾಡಿಕೊಂಡು ಬಂದುಬಿಡಲೇ? ಹಾಗೆಯೇ ಕೊರೆಯುವ ಚಳಿಗೆ ಏನಾದರೂ ಒಂದು ಹೊದಿಕೆ ತರಲೆ? ಎಂಬ ವಿಚಾರ ಬಂತು. ಆದರೆ ನಾನು ಹೋಗಿ ಬರುವುದರಲ್ಲಿ ಇವರು ಹಾಡಲು ಶುರುಮಾಡಿ ನಾನು ಐದು ಹತ್ತು ನಿಮಿಷವನ್ನು ಕಳೆದುಕೊಂಡರೆ! ಎನ್ನುವ ಆತಂಕ ಉಂಟಾಯಿತು. ಹತ್ತಿರದ ಹೋಟೇಲಿನಲ್ಲಿ ಏನಾದರೂ ತಿನ್ನಲು ಜೇಬಿನಲ್ಲಿ ಒಂದು ಆಣೆಯೂ ಇರಲಿಲ್ಲ. ಇಂಥ ಸಂಗೀತದ ಐದು ನಿಮಿಷವನ್ನು ಕಳೆದುಕೊಂಡರೂ ಹೆಡ್ಡತನವಾಗುತ್ತದೆ ಎಂಬ ವಿಚಾರ ಹುಟ್ಟಿ ಹಾಗೆಯೇ ಕುಳಿತೆ. ಕಾಲುಗಂಟೆ ಎಂದ ವಿರಾಮ ಅರ್ಧಗಂಟೆಗೆ ಬೆಳೆಯಿತು. ಅನಂತರ ಗಂಗೂಬಾಯಿ ಮತ್ತೆ ವೇದಿಕೆಗೆ ಬಂದರು. ತಂಬೂರಿಯನ್ನು ಝುಂಯ್ ಗುಡಿಸ ತೊಡಗಿದರು. ಸ್ವರ ಹಚ್ಚಿದರು. ಮತ್ತೆ ಇವರು ನನಗಾಗಿಯೇ ಹಾಡುತ್ತಿದ್ದಾರೆ, ನನ್ನನ್ನು ಸಮಾಧಾನ ಪಡಿಸಲೆಂದೇ ವೇದಿಕೆಯ ಮೇಲೆ ಕುಳಿತಿದ್ದಾರೆ ಎಂಬ ಭಾವ. ನಡುವೆ ಕತ್ತು ತಿರುಗಿಸಿ ನೋಡಿದಾಗ ಸಭೆಯಲ್ಲಿದ್ದ ಪ್ರತಿಯೊಬ್ಬರ ಮುಖದಲ್ಲೂ ಅಂಥದೇ ಭಾವ. ಅದೇ ತಲ್ಲೀನತೆ. ಬೆಳಗ್ಗೆ ನಾಲ್ಕೂವರೆಯವರೆಗೂ ಹಾಡಿದರು.

ಅಂದಿನಿಂದಲೇ ನನಗೆ ಶಾಸ್ತ್ರೀಯ ಸಂಗೀತದಲ್ಲಿ ರುಚಿ ಮಾತ್ರವಲ್ಲ, ಪ್ರೀತಿ ಹುಟ್ಟಿ ಬಿಟ್ಟಿತು. ಒಬ್ಬನೇ ಇದ್ದಾಗ ಗಂಗೂಬಾಯಿಯಂತೆ ನನ್ನಲ್ಲಿ ನಾನೇ

ತಾನ ಆಲಾಪಗಳನ್ನು ಗುನುಗಿಕೊಳ್ಳಲು ಶುರುಮಾಡಿದೆ. ಆಗಿನ್ನೂ ನನಗೆ ಸಂಗೀತದಲ್ಲಿ ಕರ್ನಾಟಕ ಮತ್ತು ಉತ್ತರಾದಿ ಮಾರ್ಗಗಳ ವ್ಯತ್ಯಾಸ ತಿಳಿದಿರಲಿಲ್ಲ. ಈಗ ತುಸು ತಿಳಿದಿದೆ. ಯಾವ ಮಾರ್ಗವೇ ಆಗಲಿ ಭಾವತುಂಬಿ ಆಳವೂ ವಿಸ್ತಾರವೂ ಆಗಿ ಮಾಡುವ ಆಲಾಪ ಮಾತ್ರ ನನ್ನನ್ನು ಒಳಕ್ಕೆ ಎಳೆದುಕೊಳ್ಳುತ್ತದೆ. ಉಳಿದ ಅಂಶಗಳಿಗೆ ಅಯಸ್ಕಾಂತ ಶಕ್ತಿ ಇಲ್ಲ.

ನಿನ್ನ ಗಂಟಲಲ್ಲೇ ಶಾಪಗ್ರಸ್ತ ಗಂಧರ್ವನಿದ್ದಾನೆ

ಡಾ. ಚನ್ನವೀರ ಕಣವಿ

ಎರಡು ವರ್ಷಗಳ ಹಿಂದೆ ಸ್ವರಸಾಮ್ರಾಜ್ಞಿ ಡಾ. ಗಂಗೂಬಾಯಿ ಹಾನಗಲ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಖ್ಯಾತನಟ ನಾನಾ ಪಾಟೇಕರ್ ಅವರು ಹುಬ್ಬಳ್ಳಿಗೆ ಬಂದು, ಸಮಾರಂಭದಲ್ಲಿ ಭಾಗವಹಿಸಿದಾಗ ಒಂದು ಮಾತು ಹೇಳಿದರು. 'ಎರಡು ಮೂರು ರಾಷ್ಟ್ರೀಯ ಪುರಸ್ಕಾರಗಳು ಬಂದು ಬಿಟ್ಟರೆ ನಾವು ನೆಲದ ಮೇಲೆ ಇರುವುದಿಲ್ಲ. ಅಂಥದರಲ್ಲಿ 45 ರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದ ಈ ಅಮ್ಮನಲ್ಲಿ ಒಂದಿಷ್ಟೂ ಗರ್ವವಿಲ್ಲವಲ್ಲ'.

ನಮ್ಮನ್ನು ಮೊದಲು ಆಕರ್ಷಿಸುತ್ತಿದ್ದುದೇ ಗಂಗೂಬಾಯಿಯುವರ ಅಮೌಲ್ಯವಾದ ಈ ವಿನಯವಂತಿಕೆಯ ಗುಣ. ದೊಡ್ಡಸ್ತಿಕೆಯಿಂದ ದೂರವಿರುತ್ತಿದ್ದ ಅವರು ಜನಸಾಮಾನ್ಯರಲ್ಲಿ ಸುಲಭವಾಗಿ, ಸಹಜವಾಗಿ ಬೆರೆಯುತ್ತಿದ್ದರು. ಹಾಗೇ ತಮ್ಮ ಅಂತರಂಗವನ್ನು ತೆರೆದಿಡುತ್ತಿದ್ದರು. ಒಂದು ಸಲ ಮಾತನಾಡುತ್ತ ಅವರು ಹೇಳಿದರು. 'ಸಂಗೀತಕ್ಕ ಇತಿಹಾಸ ಅದ, ಭೂಗೋಲ ಇಲ್ಲ'. ಸಂಗೀತದ ವಿಶ್ವವ್ಯಾಪಕತ್ವವನ್ನು ಇದಕ್ಕಿಂತ ಪರಿಣಾಮಕಾರಿಯಾಗಿ, ಸಂಕ್ಷಿಪ್ತವಾಗಿ ಹೇಳುವುದು ಸಾಧ್ಯವಿಲ್ಲ ಎನಿಸುತ್ತದೆ. ಅವರ ಸಂಗೀತ ಎಷ್ಟು ಅಮೋಘವಾಗಿತ್ತೋ ಅವರು ಆಗಾಗ ಆಡುತ್ತಿದ್ದ ಇಂಥ ಮಾತುಗಳೂ ಮಾಣಿಕ್ಯದ ದೀಪ್ತಿಯಂತಿದ್ದವು.

ಧಾರವಾಡ ದೇಶ-ವಿದೇಶಗಳಲ್ಲಿ ಜಯಭೇರಿ ಬಾರಿಸಿದ ಸಂಗೀತಗಾರರ ಜನ್ಮಭೂಮಿ ಎಂದು ಹೆಮ್ಮೆಯಿಂದ ಹೇಳುತ್ತ ಬಂದಿದ್ದೇವೆ. ಗುರುವಿನ ಮೂಲಕ ಶಿಷ್ಯ, ಶಿಷ್ಯನ ಮೂಲಕ ಗುರು ಪ್ರಜ್ವಲಿಸುತ್ತ ಸಾಗುವ ಪರಂಪರೆಯ ನಿರಂತರತೆ ಸಂಗೀತದಲ್ಲಿದೆ.

ಗಂಗೂಬಾಯಿಯುವರ ಗಂಡು ಧ್ವನಿಗೆ ವರಕವಿ ಬೇಂದ್ರ ತಮಾಷೆ ಮಾಡುತ್ತಿದ್ದರಂತೆ. 'ನಿನ್ನ ಗಂಟಲಲ್ಲಿ ಒಬ್ಬ ಶಾಪಗ್ರಸ್ತ ಗಂಧರ್ವ ಕೂತಿದ್ದಾನೆ' ಎಂದು.

ಸಂಗೀತ ತೀರ ಮುಕ್ತವಾದ, ಅತ್ಯಂತ ಅಮೂರ್ತವಾದ ಇತರ ಕಲೆಗಳಿಗೆ ಯಾವ ರೀತಿಯಲ್ಲೂ ಅಧೀನವಾಗಿರದ ಕಲೆಯಾದ್ದರಿಂದ ಪ್ರತಿಭೆಗೆ ಇಲ್ಲಿ ಅನಂತ ಅವಕಾಶವಿದೆ. ಗಂಗೂಬಾಯಿಯವರು ಅದನ್ನು ನೂರಕ್ಕೆ ನೂರರಷ್ಟು ಸಾರ್ಥಕ ಪಡಿಸಿಕೊಂಡವರಲ್ಲಿ ಅಗ್ರಗಣ್ಯರು. ಕಳೆದ ಇದೇ ಒಂದು ಶತಮಾನ ಕಾಲ ನಾಡಿನ ಹಾಗೂ ದೇಶದ ಎಲ್ಲ ಆಗುಹೋಗುಗಳಿಗೆ ಸಾಕ್ಷಿಪ್ರಜ್ಞೆಯಂತಿದ್ದು, ತಮ್ಮ ವ್ಯಕ್ತಿತ್ವದ ಸಾರಸರ್ವಸ್ವ ತಿಳಿಸಿದ ಸಂಗೀತ ಮಾಧುರ್ಯದಿಂದ ಜನಮನದಲ್ಲಿ ಬೆಳಗಿದ ಹಿರಿಯ ಚೇತನ ಅವರದು.

ಕಿರಾಣಾ ಘರಾಣೆಯ ಆದ್ಯ ಪ್ರವರ್ತಕರೆನಿಸಿದ ಅಬ್ದುಲ್ ಕರೀಮಖಾನ ಅವರು ಗಂಗೂಬಾಯಿ ಒಂಬತ್ತು ವರ್ಷದ ಬಾಲಕಿಯಿದ್ದಾಗ ಹಾಡಿದ ಹಾಡನ್ನು ಕೇಳಿ ಬೆನ್ನು ತಟ್ಟಿ 'ಖೂಬ ಖಾವೋ, ಖೂಬ್ ಗಾವೋ' ಎಂದು ಮೆಚ್ಚುಗೆಯಿಂದ ಆಡಿದ ಮಾತು ಕೊನೆಯವರೆಗೂ ಅಚ್ಚಳಿಯದೆ ಉಳಿದು ಬಂದಿತು.

ಭಾರತದ ಅತ್ಯುನ್ನತ ಸಂಗೀತ ಪ್ರಶಸ್ತಿಯಾಗಿರುವ ತಾನಸೇನ್ ಸಮ್ಮಾನ, ಪದ್ಮವಿಭೂಷಣ ಪ್ರಶಸ್ತಿಗಳನ್ನು ಒಳಗೊಂಡು ಲೆಕ್ಕವಿಲ್ಲದಷ್ಟು ಪ್ರಶಸ್ತಿಗಳು ಅವರ ಮಡಿಲಿಗೆ ಬಿದ್ದಿದ್ದರೂ ವರಕವಿ ಬೇಂದ್ರೆ ನೀಡಿದ 'ಗಾಯನ ಗಂಗಾ' ಎಂಬ ಬಿರುದು ಗಂಗೂಬಾಯಿಗೆ ಹೆಚ್ಚು ಇಷ್ಟವಾಗಿತ್ತು. ಇವತ್ತು ಗಂಗಾನದಿ ತನ್ನ ಪರಿಶುದ್ಧತೆ ಕಳೆದುಕೊಳ್ಳುತ್ತಿರುವಾಗ ನಮ್ಮ ಕನ್ನಡ ನಾಡಿನ 'ಗಾಯನಗಂಗಾ' ತನ್ನ ಪಾವಿತ್ರ್ಯವನ್ನು ಪರಿಶುದ್ಧತೆಯನ್ನು ಕಾಪಾಡಿಕೊಂಡು ಭಾವ ಹಾಗೂ ಸ್ವಭಾವದಿಂದ ಇಂದಿಗೂ ಆದರ್ಶಪ್ರಾಯವಾಗಿ ಕಂಗೊಳಿಸುತ್ತಿದೆ.

ನಮ್ಮಲ್ಲಿ ಉನ್ನತಮಟ್ಟದ ಅನೇಕ ವಾಗ್ಮಿಗಳಿರಬಹುದು. ಆದರೆ, ಗಂಗೂಬಾಯಿಯಂತೆ ಅಪ್ಪಟ ಧಾರವಾಡ ಕನ್ನಡದಲ್ಲಿ ಸಹಜವಾದ ಆತ್ಮೀಯ ಶೈಲಿಯಲ್ಲಿ ಮಾತನಾಡಬಲ್ಲವರು ಬಹಳ ವಿರಳ. ಅವರ ಮಾತು, ಕತೆ, ಉಡುಗೆ-ತೊಡುಗೆ, ಊಟ-ಉಪಚಾರ, ಆಚಾರ-ವಿಚಾರ ಎಲ್ಲವೂ ನೇರ ಹಾಗೂ ಸರಳ. ಕೃತ್ರಿಮತೆಗೆ ಅಲ್ಲಿ ಎಳ್ಳಷ್ಟೂ ಜಾಗವೇ ಇಲ್ಲವಾಗಿತ್ತು.

ದೇಶದಾದ್ಯಂತ ಖ್ಯಾತಿ ಪಡೆದಿದ್ದರೂ ತಾಯ್ನೆಲದ ಬಾಂಧವ್ಯವನ್ನು ಅವರು ಬಿಗಿಯಾಗಿಯೇ ಇಟ್ಟುಕೊಂಡಿದ್ದರು. ಈ ನೆಲದ ಸೊಬಗನ್ನು ಸೊಗಸನ್ನು ಎಲ್ಲೆಡೆ ಪಸರಿಸಿದರು. ದೇಶದ ಯಾವುದೇ ಮೂಲೆಗೆ ಹೋದರೂ ಸಂಗೀತ ಕಛೇರಿ ಮುಗಿದ ಕೂಡಲೇ ಅವರಿಗೆ ಹುಬ್ಬಳ್ಳಿಯ ರೈಲು ಹತ್ತುವ ತವಕ. ಮಾನವತೆಗೆ ಆದ್ಯತೆ ನೀಡಿದ ಗಂಗೂಬಾಯಿ ನಮ್ಮ ದೇಶದ ಒಂಬತ್ತು ಪ್ರಧಾನಿಗಳಿಂದ ಸನ್ಮಾನ ಪಡೆದ ಹೆಗ್ಗಳಿಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಇತ್ತೀಚಿಗೆ ಅಪೂರ್ವ ಸಂಗ್ರಹಾಲಯವೊಂದು ಅವರ ಮನೆ 'ಗಂಗಾಲಹರಿ'ಯಲ್ಲಿ

ರೂಪು ತಳೆದಿದೆ. ಈ ಭಾರತೀಯ ಶಾಸ್ತ್ರೀಯ ಸಂಗೀತ ವಸ್ತುಸಂಗ್ರಹಾಲಯ ದೇಶ ವಿದೇಶಗಳ ಸಂಗೀತ ಕಲಾಸಕ್ತರಿಗೆ ಅಪರೂಪದ ಆಕರ್ಷಣೆಯಾಗಿದೆ. ಶಾಸ್ತ್ರೀಯ ಸಂಗೀತ ಕೇಂದ್ರವೊಂದು ಗಂಗಜ್ಜಿಯ ನೆನಪಿನಲ್ಲಿ ರಾಜ್ಯ ಸರಕಾರದ ಸಂಪೂರ್ಣ ನೆರವಿನಿಂದ ಹುಬ್ಬಳ್ಳಿಯಲ್ಲಿ ರೂಪುಗೊಳ್ಳುತ್ತಿದೆ. ಇಂದು ಅವರು ಭೌತಿಕವಾಗಿ ನಮ್ಮಿಂದ ಕಣ್ಮರೆಯಾಗಿದ್ದಾರೆ ಎಂದು ಹೇಳಲೂ ಬಾಯಿ ಬರುತ್ತಿಲ್ಲ. ಯಾಕೆಂದರೆ ಅವರ ದಿವ್ಯ ಸಂಗೀತ, ಅಂತಃಕರಣದ ದನಿ, ಆತ್ಮೀಯವಾದ ಮುಗ್ಧ ಮುಖ, ಸಲುಗೆಯ ಮಾತು ನಮ್ಮ ಕಣ್ಣ ಮುಂದೆ ಅಚ್ಚಳಿಯದೆ ಕಟ್ಟಿದಂತಿದೆ.

ಜನಮಾನಸದಲ್ಲಿ ಅಮರ

ನಾಡೋಜ ಡಾ. ಪಾಟೀಲ ಪುಟ್ಟಪ್ಪ

ಗಾನಗಂಗೆ ಎಂದೇ ಪ್ರಖ್ಯಾತರಾಗಿದ್ದ ಸಂಗೀತ ವಿದುಷಿ ಪದ್ಮಭೂಷಣ ಡಾ. ಗಂಗೂಬಾಯಿ. ಹಾನಗಲ್ಲರು 96 ವರ್ಷಗಳ ತುಂಬು ಜೀವನವನ್ನು ಬದುಕಿ, ಸಂಗೀತ ಪ್ರಪಂಚದಲ್ಲಿ ತುಂಬಲಾಗದ ಒಂದು ಶೂನ್ಯವನ್ನು ನಿರ್ಮಿಸಿ ಪಂಚಭೂತಗಳಲ್ಲಿ ಲೀನಗೊಂಡು ಕಣ್ಮರೆಯಾಗಿ ಹೋದರು. ಆದರೆ ಅವರು ಮನಸ್ಸಿನಿಂದ ಮರೆಯಾಗಿ ಹೋಗತಕ್ಕವರಲ್ಲ. ತಮ್ಮ ವ್ಯಕ್ತಿತ್ವದ ಬಹುದೊಡ್ಡ ಸಾಂಸ್ಕೃತಿಕ ಪ್ರಭಾವಳಿಯನ್ನು ಅವರು ಬಿಟ್ಟು ಹೋಗಿದ್ದಾರೆ. 1924ರಲ್ಲಿ ಬೆಳಗಾವಿ ಕಾಂಗ್ರೆಸ್ ಸಮಾವೇಶದಲ್ಲಿ ಮಹಾತ್ಮಾ ಗಾಂಧಿಯವರ ಎದುರು ಹಾಡಿದ ಒಬ್ಬ ಪುಟ್ಟ ಬಾಲಕಿ ಮುಂದೆ ಭಾರತದ ಖ್ಯಾತಿಯನ್ನು ಸಂಪಾದಿಸುವ ಸಂಗೀತ ಸ್ವರಧ್ವನಿಯೇ ಆಗಬಹುದೆಂದು ಯಾರೂ ಊಹಿಸಿರಲಿಲ್ಲ.

ಡಾ. ಗಂಗೂಬಾಯಿ ಹಾನಗಲ್ಲ ಎಂಬ ಹೆಸರು ಭಾರತದ ಸಂಗೀತ ಪ್ರಪಂಚದಲ್ಲಿ ಮನೆಯ ಮಾತು ಎಂಬಂತೆ ಬಹು ವ್ಯಾಪಕವಾಗಿ ಹಬ್ಬಿಕೊಂಡಿತು. ಅವರ ಜನಪ್ರಿಯತೆ ಎಷ್ಟಿತ್ತೆನ್ನುವುದನ್ನು ಮಹಾರಾಷ್ಟ್ರೀಯರು ನಮಗೆ ತೋರಿಸಿಕೊಟ್ಟಿದ್ದಾರೆ. ಒಳ್ಳೆಯದೆಲ್ಲವೂ ತಮ್ಮದೆಂದು ಅವರು ಹೇಳಿಕೊಳ್ಳುತ್ತಾರೆ. ಒಳ್ಳೆಯ ಸ್ಥಾನದಲ್ಲಿ ಇರುವವರೆಲ್ಲರೂ ಮರಾಠಿಯವರೆಂದು ಹೇಳಿಕೊಳ್ಳುವ ಬಹು ಉದಾರ ಮನೋಧರ್ಮ ಮಹಾರಾಷ್ಟ್ರದ ಪತ್ರಿಕಾ ಪ್ರಪಂಚದಲ್ಲಿದೆ. ಈ ಕಾರಣದಿಂದಲೇ ಹಿಂದೂಸ್ತಾನೀ ಸಂಗೀತ ಕ್ಷೇತ್ರದ ಈ ಮಹಾನ್ ಕಲಾವಿದೆಯನ್ನು ಮಹಾರಾಷ್ಟ್ರದವರೆಂದು ಕರೆಯುವಷ್ಟು ದೂರ ಹೋಗಿದ್ದರು. ಒಳ್ಳೆಯ ವಸ್ತುವನ್ನು ಕೆಲವರಿಗೆ ತೋರಿಸಬಾರದೆಂದು ಇದಕ್ಕೆ ಹೇಳುತ್ತಿರಬೇಕು. ಮಹಾರಾಷ್ಟ್ರದ ಈ ರೀತಿಯನ್ನು ಯಾರೊಬ್ಬರೂ ಮೆಚ್ಚದಿರಬಹುದು. ಆದರೆ ಒಳ್ಳೆಯದನ್ನು ಮೆಚ್ಚುವ ಮಹಾರಾಷ್ಟ್ರದ ಸ್ವಭಾವವನ್ನು ಎಲ್ಲರೂ ಮೆಚ್ಚಲೇಬೇಕು. ಮಹಾರಾಷ್ಟ್ರದ ಈ ರೀತಿಯಿಂದ ಗಂಗೂಬಾಯಿಯವರ ಎತ್ತರ, ಸಂಗೀತ ಪ್ರಪಂಚದಲ್ಲಿ ಏನಿದ್ದರೆನ್ನುವುದು ಗೊತ್ತಾಗುತ್ತದೆ. ಗಂಗೂಬಾಯಿಯವರು ಭಾರತದ ಮಹಾನ್ ಸಂಗೀತ ಕಲಾವಿದರಲ್ಲಿ ಒಬ್ಬರು. ಅವರು ನಿಸ್ಸಂದೇಹವಾಗಿಯೂ

ದೊಡ್ಡವರು. ಆದರೆ, ಅವರು ತಮ್ಮ ಸಂಗೀತಕ್ಕಿಂತಲೂ ಹೆಚ್ಚು ದೊಡ್ಡವು. ಅವರ ವಿನಯ ಹಾಗೂ ನಮ್ರತೆಯನ್ನು ನಾವು ಯಾವ ಕಲಾವಿದರಲ್ಲಿಯೂ ಕಾಣುತ್ತಿರಲಿಲ್ಲ. ಅವರಿಗೆ ಶ್ರೇಷ್ಠತೆ ಇತ್ತು. ಆದರೆ ಅವರು ಅದನ್ನೆಂದೂ ತಮ್ಮ ತಲೆಗೆ ಏರಿಸಿಕೊಂಡಿರಲಿಲ್ಲ. ಅವರ ತಾಯಿ ಅಂಬಾಬಾಯಿ ಕರ್ನಾಟಕೀ ಸಂಗೀತದಲ್ಲಿಯೇ ಬೆಳೆಸಿಕೊಂಡು ಬಂದಿದ್ದರೆ ಕರ್ನಾಟಕ ಹಾಗೂ ಭಾರತದ ಗಂಗೂಬಾಯಿಯವರಲ್ಲಿ ಇನ್ನೊಬ್ಬ ಸುಬ್ಬುಲಕ್ಷ್ಮೀ, ವಸಂತಕುಮಾರಿ, ಪಟ್ಟಮ್ಮಾಳರನ್ನು ಕಾಣುತ್ತಿದ್ದೆವು.

ತಾಯಿಯ ಪದತಲದಲ್ಲಿ ಕುಳಿತು ಸಂಗೀತ ಸಾಧನೆ ಮಾಡುತ್ತಿದ್ದ ಮಗಳು ಗಂಗೂಬಾಯಿಗೆ ಅಂಬಾಬಾಯಿ ಹಿಂದುಸ್ತಾನೀ ಸಂಗೀತದ ದಾರಿಯನ್ನು ತೋರಿಸಿದರು. ಅವರ ಮನೆಗೆ ಬರುತಿದ್ದ ಹುಲಗೂರು ಕೃಷ್ಣಾಚಾರ್ಯರು ಗಂಗೂಬಾಯಿಯವರ ಸಂಗೀತದ ಆಸಕ್ತಿಗೆ ನೀರೆರೆದು ಪೋಷಿಸಿದರು. ಅಷ್ಟರಲ್ಲಿ ಗಂಗೂಬಾಯಿ, ಸವಾಯಿ ಗಂಧರ್ವರ ಸಂಪರ್ಕದಲ್ಲಿ ಬಂದರು. ಜೀವನದಲ್ಲಿ ಗಂಗೂಬಾಯಿಯವರಿಗೆ ನಿಜವಾದ ಒಬ್ಬ ದೊಡ್ಡ ಗುರುವೇ ಸಿಕ್ಕರು. ಅವರ ಪದತಲದಲ್ಲಿ ಕುಳಿತು ಜ್ಯೋತಿಯ ಸಂಪರ್ಕದಲ್ಲಿ ಬಂದ ಅವರು ಜ್ಯೋತಿಯೇ ಆದರು. ಅವರ ಜೀವನದಲ್ಲಿ ಬಹು ದೊಡ್ಡ ತಿರುವನ್ನು ತಂದ ಒಂದು ಅವಿಸ್ಮರಣೀಯ ಪ್ರಸಂಗ ಇದೆ. ಅದು ಒಮ್ಮೆಲೇ ಅವರನ್ನು ಭಾರತದ ಸಂಗೀತ ಪ್ರಪಂಚದಲ್ಲಿ ಪ್ರಜ್ವಲಿಸುವಂತೆ ಮಾಡಿ ತೋರಿಸಿತು. ಅಖಿಲ ಭಾರತ ಸಂಗೀತ ಸಮ್ಮೇಲನ 1938ರಲ್ಲಿ ಕೊಲ್ಕತ್ತಾನಗರದಲ್ಲಿ ಸಮಾವೇಶಗೊಂಡಿದ್ದಿತು. ಭಾರತ ಸಂಗೀತ ಪ್ರಪಂಚದ ನಾಮಾಂಕಿತರೆಲ್ಲರೂ ಅಲ್ಲಿ ಸೇರಿದ್ದರು. ಸಂಗೀತ ಕಛೇರಿ ಅದ್ಭುತವಾಗಿ ಪಡೆದಿದ್ದಿತು. ಅದು ವತ್ಸಲಾ ಕುಮಠೇಕರರ ಕಾಲ. ಅವರು ತಮ್ಮ ಸುಮಧುರ ಸಂಗೀತದಿಂದ ಭಾರತದ ಜನಮನವನ್ನು ತಮ್ಮೆದುರಿಗೆ ಸೆಳೆದುಕೊಂಡಿದ್ದರು.

ಕಮಠೇಕರರ ಅಮೋಘ ಸಂಗೀತ ನಡೆದ ಮೇಲೆ ಯುವ ಗಂಗೂಬಾಯಿಯವರು ಅಲ್ಲಿ ಹಾಡಬೇಕಾಗಿದ್ದಿತು. ಅವರ ನಾಜೂಕು ಆಕೃತಿಯನ್ನು ನೋಡಿದ ಆ ಸಮ್ಮೇಳನದ ಸಂಘಟಕರಿಗೆ, ಆ ಪುಟ್ಟ ಆಕೃತಿಯ ಕಂಠದಿಂದ ಧ್ವನಿಯಾದರೂ ಬರುತ್ತದೆಯೋ ಹೇಗೆಂದು ಸಂದೇಹ ಉಂಟಾಯಿತು. ನೀವು ಹತ್ತು ನಿಮಿಷ ಸಮಯ ಮಾತ್ರ ತೆಗೆದುಕೊಳ್ಳಬೇಕೆಂದು ಆ ಸಂಘಟಕರು ಹೇಳಿದರು.

ಗಂಗೂಬಾಯಿಯವರು ಅಲ್ಲಿ ನೆರೆದಿದ್ದ ಸಭಿಕರನ್ನೆಲ್ಲ ತಮ್ಮ ಹಾಡಿನ ಮೋಡಿಯಿಂದ ಸಮ್ಮೋಹನಗೊಳಿಸಿದರು. ಭಾರತದ ಸಂಗೀತ ಲೋಕದ

ದಿಗ್ಗಜರೆಲ್ಲ ಅಲ್ಲಿ ಇದ್ದರು. ಅವರ ಸಾಲಿನಲ್ಲಿ ತನ್ನ ಪ್ರಭೆ ಬೀರುವ ಒಂದು ಉಜ್ವಲ ನಕ್ಷತ್ರ ಆ ದಿನ ಅಲ್ಲಿ ಕಾಣಿಸಿಕೊಂಡಿತು. ಅಂದಿನಿಂದ ಅವರು ಎತ್ತರದಿಂದ ಎತ್ತರಕ್ಕೆ ಮೇಲೇರುತ್ತಲೇ ಹೋದರು.

ಕಿರಾನಾ ಘರಾಣಾದಲ್ಲಿ ಅಬ್ದುಲ್ ಕರೀಮ್‌ಖಾನರಿಗೆ ಕೀರ್ತಿ ತರುವಂತೆ ಗಂಗೂಬಾಯಿಯವರು ಪ್ರಕಾಶಮಾನರಾಗಿ ಬೆಳಗಿದರು. ಆ ಘರಾನಾದ ಭೀಮಸೇನ ಜೋಶಿ, ರೋಷನಾರಾ ಬೇಗಮ್, ಫಿರೋಜ ದಸ್ತೂರ, ಕಾಗಲಕರ ಮೊದಲಾದ ಶ್ರೇಷ್ಠರ ಸಾಲಿನಲ್ಲಿ ಒಬ್ಬರೆನಿಸಿದರು.

ಗಂಗೂಬಾಯಿಯವರು ತಮ್ಮ ಸಂಗೀತ ಕಛೇರಿ ಕೊಡದೇ ಇರುವ ನಗರ ಈ ಏಶಿಯಾ ಉಪ ಖಂಡದಲ್ಲಿಯೇ ಇಲ್ಲ. ಮುಂಬಯಿ, ಪುಣೆ, ನಾಗಪುರ, ಅಹಮದಾಬಾದ, ಬರೋಡಾ, ಭೂಪಾಲ, ಗ್ವಾಲಿಯರ್, ಕೋಲ್ಕತ್ತಾ, ಗುವಾಹತಿ, ಲಾಹೋರ, ಪೇಶಾವರ, ಕರಾಚಿ, ಢಾಕಾ.

ಕರ್ನಾಟಕೀ ಸಂಗೀತದ ಭದ್ರಕೋಟೆ ಎನಿಸಿದ ಮದ್ರಾಸ್, ತಿರುವನಂತ ಪುರ, ಬೆಝವಾಡಗಳ ಶ್ರೋತೃಗಳ ಮನಸ್ಸನ್ನು ಗಂಗೂಬಾಯಿಯವರು ಸೂರೆಗೊಂಡು ಬಂದಿದ್ದಾರೆ. ಗಂಗೂಬಾಯಿಯವರನ್ನು ಗೌರವಿಸುವ ವಿಚಾರದಲ್ಲಿ ಅನೇಕ ರಾಜ್ಯಗಳು ಸ್ಪರ್ಧೆಗೆ ಇಳಿದಂತೆ ಮಾಡಿದವು. ಲೆಕ್ಕವಿಲ್ಲದಷ್ಟು ಸನ್ಮಾನಗಳು ಅವರಿಗೆ ಲಭಿಸಿವೆ. ಹುಬ್ಬಳ್ಳಿಯಲ್ಲಿ ಸಂಗೀತಕ್ಕೋಸ್ಕರ ಅವರ ಹೆಸರಿನ ಗುರುಕುಲವನ್ನು ಕರ್ನಾಟಕ ಸರಕಾರ ಸ್ಥಾಪಿಸುತ್ತಿದೆ. ಗಂಗೂಬಾಯಿಯವರು ಎಲ್ಲಿಯೂ ಹೋಗಿಲ್ಲ. ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

ಸಂಗೀತದ ಧ್ರುವತಾರೆ

ಪಂ. ನರಸಿಂಹಲು ವಡವಾಟಿ, ಅಧ್ಯಕ್ಷರು,
ಸಂಗೀತ, ನೃತ್ಯ ಅಕಾಡೆಮಿ

ಅದ್ಭುತ ಕಲಾವಿದೆ, ಮೇರು ಗಾಯಕಿ. ಅಂಥ ಗಾಯಕಿ ಶತಮಾನಕ್ಕೆ ಒಬ್ಬರು. ತಾಯಿ ಹೃದಯವಿತ್ತು. ಕಿರಿಯ ಕಲಾವಿದರನ್ನೂ ಪ್ರೋತ್ಸಾಹಿಸುತ್ತಿದ್ದರು. ಹೆಣ್ಣು ಮಕ್ಕಳು ಹಾಡುವುದು ಅಪರಾಧ ಎಂದೇ ಪರಿಗಣಿಸುತ್ತಿದ್ದ ಕಾಲದಲ್ಲಿ ಅಂದರೆ ಸುಮಾರು 70–80 ವರ್ಷದ ಹಿಂದೆ ಯಾವ ಟೀಕೆಯನ್ನೂ ಲೆಕ್ಕಿಸದೇ ಸಂಗೀತ ಕಡೆ ಒಲವು ತೋರಿದರು. ಮಹಾನ್ ಸಾಧನೆಗೈದವರು. ಪ್ರಶಸ್ತಿಗಳಿಂದ ಎಂದೂ ಉಬ್ಬಿದವರಲ್ಲ. ವಯಸ್ಸಿನಲ್ಲಿ ಬಹಳ ಹಿರಿಯರಾದರೂ ನಾನು ಅವರನ್ನು ಅಕ್ಕ ಎಂದೇ ಕರೆಯುತ್ತಿದ್ದೆ. ಅವರು ನನ್ನನ್ನು ವಡವಟ್ಟೀ... ಎನ್ನುತ್ತಿದ್ದರು. ತಿಂಗಳ ಹಿಂದೆ ಆರೋಗ್ಯ ವಿಚಾರಿಸಿಕೊಂಡು ಬಂದಿದ್ದೆ. ನೂರು ವಸಂತ ಕಾಣಲಿ ಎಂಬುದು ಅನೇಕರ ಹಾರೈಕೆ ಆಗಿತ್ತು. ಆದರೆ ವಿಧಿಯಾಟ ಹೀಗಿದೆ.

ಸಂಗೀತ ವಿದುಷಿ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಜಗತ್ತಿನ ಮೇರು ಕಲಾವಿದೆ. ಆಕೆ ನಿಜಕ್ಕೂ ಮಹಾತಾಯಿ. ಎತ್ತರಕ್ಕೇರಿದ್ದರೂ ಸ್ವಲ್ಪವೂ ಅಹಂಕಾರ ಪಡದೇ ಪುಟ್ಟ ಮಕ್ಕಳು ಹಾಡಿದರೂ ಪ್ರೀತಿಯಿಂದ ಕೇಳಿ ಆಶೀರ್ವದಿಸುತ್ತಿದ್ದ ಅವರಂಥವರು ಶತಮಾನಕ್ಕೆ ಒಬ್ಬರು ಸಿಗುತ್ತಾರೆ'

'ಸುಮಾರು 80 ವರ್ಷಗಳ ಹಿಂದೆ ಸಂಗೀತ, ನೃತ್ಯವನ್ನು ಅಪರಾಧವೆಂದು ಭಾವಿಸುತ್ತಿದ್ದ ಸಮಾಜದಲ್ಲಿ ಅವೆಲ್ಲವನ್ನೂ ಮೆಟ್ಟಿ ನಿಂತ ದಕ್ಷಿಣ ಭಾರತದ ಧೀರ ಮಹಿಳೆ ಡಾ. ಗಂಗೂಬಾಯಿ. ಸಂಗೀತ ಲೋಕದ ಧ್ರುವತಾರೆ. ಸಂಗೀತಗಾರರೆಲ್ಲರ ಪ್ರೀತಿಯ ಅಕ್ಕ. ಭೌತಿಕವಾಗಿ ಇಲ್ಲವಾದರೂ ಅವರ ಸಂಗೀತ, ಚೇತನ ಜೀವಂತವಾಗಿದೆ. ಗಂಗೂಬಾಯಿ ಮತ್ತೆ ಹುಟ್ಟಿಬರಲಿ'

ಮನಸಿನ ಸಂಗೀತ

ಪಂ. ರವೀಂದ್ರ ಯಾವಗಲ್, ತಬಲಾವಾದಕರು

'ಗಂಗೂಬಾಯಿ ಅವರದು ಮನಸಿನ ಸಂಗೀತ. ಅವರಿಗೆ ಜನರಂಜನೆ ಮುಖ್ಯವಾಗಿರಲಿಲ್ಲ. ಸ್ವಸಂತೋಷಕ್ಕಾಗಿ ಹಾಡುತ್ತಿದ್ದರು. ಆದರೆ ಅವರ ಹಾಡು ಕೇಳಿ ಆನಂದ ಬಾಷ್ಪ ಸುರಿಸಿದವರ ಸಂಖ್ಯೆ ಸಾಕಷ್ಟಿದೆ. ಅವರ, ನಿಧನದಿಂದ ನಿಜಕ್ಕೂ ಸಂಗೀತ ಕ್ಷೇತ್ರ ಬಡವಾಗಿದೆ.

'ಗಾಯನದಲ್ಲಿ ಅವರು ಗಂಭೀರವಾಗಿದ್ದರು. ಅವರಿಗೆ ತಮ್ಮ ಸಂಗೀತದ ಕುರಿತು ಅಪಾರ ಆತ್ಮವಿಶ್ವಾಸವಿತ್ತು. ಆದರೆ ಮನೆಯ ಒಳಗಾಗಲೀ ಹೊರಗೇ ಆಗಲೀ `ಎಲ್ಲೂ ಅಹಂಕಾರ, ಆಡಂಬರ ತೋರಿಸಿದವರಲ್ಲ. ಅತ್ಯಂತ ಸರಳ ಜೀವಿ. ಶ್ರೀರಾಮ ಕಲಾವೇದಿಕೆ ಕಾರ್ಯಕ್ರಮದಲ್ಲಿ ಗಂಗೂಬಾಯಿಯವರು ತಮ್ಮ 94ನೇ ವಯಸ್ಸಿನಲ್ಲಿಯೂ ಹರಿಪ್ರಸಾದ್ ಚೌರಾಸಿಯಾ ಜತೆ ಗಂಗೂಬಾಯಿ ಜುಗಲ್‌ಬಂದಿ ನಡೆಸಿದ್ದು ಮನದಲ್ಲಿ ಅಚ್ಚಳಿಯದೇ ಉಳಿದಿದೆ'.

ಅಸಾಧಾರಣ ಸಂಗೀತ ಪ್ರತಿಭೆ

ಕದ್ರಿ ಗೋಪಾಲನಾಥ್, ಸ್ಯಾಕ್ಸೊಫೋನ್‌ವಾದಕ

ಗಂಗೂಬಾಯಿ ಹಾನಗಲ್ ಅವರು ಸಂಗೀತ ಲೋಕದ ದಿಗ್ಗಜರಲ್ಲಿ ಒಬ್ಬರು. ಅವರದು ಅಸಾಧಾರಣ ಸಂಗೀತ ಪ್ರತಿಭೆ. ಅವರ ನಿಧನದಿಂದ ಸಂಗೀತ ಪರಂಪರೆಯ ಹಿರಿಯರೊಬ್ಬರನ್ನು ಕಳೆದುಕೊಂಡಿದ್ದೇವೆ ಮತ್ತು ಸಂಗೀತ ಪ್ರಪಂಚಕ್ಕೆ ದೊಡ್ಡ ನಷ್ಟವಾಗಿದೆ.

'ಅವರು (ಗಂಗೂಬಾಯಿ) ನಮಗೆಲ್ಲ ತಾಯಿ ಸಮಾನರು ಮತ್ತು ಮಾರ್ಗದರ್ಶಕರು. ಅವರು ಸಂಗೀತದ ಅಮೂಲ್ಯ ರತ್ನ. ನಮ್ಮ ಸಂಗೀತ ಪರಂಪರೆಯನ್ನು ಶ್ರೀಮಂತಗೊಳಿಸಿದವರು. ಮಹಾನ್ ಕಲಾವಿದರಾದ ಅವರಿಂದ ಬಹಳಷ್ಟು ಸ್ಫೂರ್ತಿ ಪಡೆದಿದ್ದೇವೆ. ಅವರ ಅಗಲಿಕೆಯಿಂದ ಸಂಗೀತ ಲೋಕದ ಒಂದು ಕಲ್ಲು ಉದುರಿದಂತಾಗಿದೆ'

ನಾವು ಒಮ್ಮೆ ಇಳಿದುಕೊಂಡ ಹೋಟೆಲ್‌ನಲ್ಲಿ ನಮ್ಮ ಅತಿಥೇಯರು ವ್ಯವಸ್ಥೆ ಮಾಡಿದ ಮೇಲೆ ಬರೀ ಕುಚಲಕ್ಕಿ ಅನ್ನವನ್ನೇ ತಾಟಿನ ಮೇಲೆ ಬಡಿಸಿಟ್ಟಾಗ ನನಗೆ ಬೇಡವೆನಿಸಿ ಒಲ್ಲೆಂದುಬಿಟ್ಟೆ. ಆದರೆ ನನ್ನ ಸಂಗೀತ ಸಂಗಡಿಗರಾಗಿ ಬಂದಿದ್ದ ಶೇಷಣ್ಣ(ಶೇಷಾದ್ರಿ ಗವಾಯಿಗಳು) ಸಂಗೀತದ ಗುರುಗಳೂ ಆಗಿದ್ದ ನಾರಾಯಣರಾವ್ ಇಂದೂರಕರ್ ಅವರು 'ಇಲ್ಲಮ್ಮ ಹೊಟ್ಟೆ ತುಂಬಿಸುವ ಅನ್ನಪೂರ್ಣೆಯನ್ನು ನಿರಾಕರಿಸಬಾರದು. ನಾನು ಈ ಅನ್ನಕ್ಕಾಗಿಯೇ ಮುಂಬಯಿಗೆ ಬಂದಿದ್ದೇನೆ. ನೀವು ಸಹ ಹುಬ್ಬಳ್ಳಿಯಿಂದ ಬಂದಿದ್ದೀರಿ. ನಾವು ಸಂಗೀತ ಕಾರ್ಯಕ್ರಮ ಮಾಡುವುದೇ ಈ ಅನ್ನದೇವತೆಗಾಗಿ ಅಲ್ಲವೇ...? ಎಂದು ಭಾವನಾತ್ಮಕವಾಗಿ ಹೇಳಿದಾಗ ನನಗೆ ಪ್ರಸಾದವನ್ನು ನಿರಾಕರಿಸುವುದಾಗಲಿಲ್ಲ. ಅವರ ಮಾತುಗಳು ಊಟಕ್ಕೆ ಕೂತಾಗ ಇಂದಿಗೂ ನೆನಪಾಗುತ್ತದೆ.

ಒಮ್ಮೆ ಕಲ್ಕತ್ತಾ ಮೆಹಫಿಲ್-ಅದು ಸುಮಾರು 30 ವರ್ಷಗಳ ಹಿಂದೆ ಹೋಗಾಗ ವ್ಯವಸ್ಥಾಪಕರನ್ನೆ ಒಬ್ಬ ಏಜೆಂಟ್ ವಂಚಿಸಿಬಿಟ್ಟಿದ. ವ್ಯವಸ್ಥಾಪಕರು ದೊಡ್ಡ ಸ್ಕೇಲ್ ಮೇಲೆ ಟಿಕೆಟ್ ಮಾರಾಟಕ್ಕೆ ಏರ್ಪಾಡು ಮಾಡುದಾಗ ಒಬ್ಬ ಏಜೆಂಟ್ ಟಿಕೀಟ್ ಬುಕ್ಕುಗಳನ್ನೆಲ್ಲಾ ತಾನೇ ಮಾರಾಟ ಮಾಡಿಕೊಂಡು ಬಂದ ಹಣವನ್ನೆಲ್ಲಾ ನುಂಗಿಹಾಕಿ, ವ್ಯವಸ್ಥಾಪಕರು ಬಾಯಿ ಬಾಯಿ ಬಿಡುವಂತೆ ಮಾಡಿದ್ದ. ವ್ಯವಸ್ಥಾಪಕರು ಆಮಂತ್ರಿಸಿದ್ದ ನನ್ನಂತಹ ಹಲವಾರು ಕಲಾವಿದರ ಮುಂದೆ ಕೈ ಜೋಡಿಸಿ ತಮ್ಮ ದುರವಸ್ಥೆಯನ್ನು ಹೇಳಿಕೊಂಡಾಗ ಕೊಟ್ಟಷ್ಟು ಹಣದಿಂದ ನಾವೆಲ್ಲಾ ತೃಪ್ತಿಪಡಬೇಕಾಯಿತು.

ನನಗೋ ಸುಮ್ಮನೇ ಹೆಚ್ಚಿಗೆ ಡಿಮಾಂಡ್ ಮಾಡೋದು, ಕರಾರುಗಳನ್ನು ಹಾಕೋದು ಬರೋದಿಲ್ಲ. ಒಮ್ಮೊಮ್ಮೆ ನಾನು ಎಷ್ಟು ಹಣ ಡಿಮಾಂಡ್ ಮಾಡಬೇಕು ಇದೂ ತಿಳಿಯದೆ ಅವರು ಕೊಟ್ಟಷ್ಟಕ್ಕೆ ಒಪ್ಪಿಕೊಂಡಿದ್ದೇನೆ. ಆ ಮೇಲೆ ನನಗಿಂತ ಜ್ಯೂನಿಯರ್ ಕಲಾವಿದರು ಹೆಚ್ಚಿಗೆ ಫೀ ಪಡೆದುದನ್ನು ನೋಡಿ ಆಶ್ಚರ್ಯಪಟ್ಟುಕೊಂಡಿದ್ದೇನೆ.

(ಎನ್ಕೆಯವರು ನಿರೂಪಿಸಿದ ಗಂಗೂಬಾಯಿ ಹಾನಗಲ್ ಅವರ ಜೀವನ ಚರಿತ್ರೆ 'ನನ್ನ ಬದುಕಿನ ಹಾಡು' ಪುಸ್ತಕದಿಂದ)

ಶೃತಿ ಮಿಡಿದ ತಂಬೂರಿ

ಡಾ॥ ಜಯಶ್ರೀ ಅರವಿಂದ್

ಕರ್ನಾಟಕ ಸಂಗೀತದಲ್ಲಿ ಶ್ರೀಮತಿ ಸುಬ್ಬಲಕ್ಷ್ಮೀಯುವರ ಹೆಸರು ಚಿರಸ್ಥಾಯಿಯಾದಂತೆ ಹಿಂದೂಸ್ಥಾನಿ ಸಂಗೀತದಲ್ಲಿ ಶ್ರೀಮತಿ ಗಂಗೂಬಾಯಿಯುವರ ಹೆಸರು ಚಿರಸ್ಥಾಯಿಯಾಗಿದೆ. ಇಬ್ಬರ ಜೀವನ ಸಾಧನೆಯು ಏಕ ರೀತಿಯದ್ದಾಗಿದೆ. ಮತ್ತು ಸಾಮಾನ್ಯ ಮಹಿಳೆ ಸಂಸಾರದ ಜಂಜಾಟದಲ್ಲೇ ಸಿಲುಕಿ ಅಷ್ಟರಲ್ಲೇ ತನ್ನ ಆಶೋತ್ತರಗಳನ್ನು ಕರಗಿಸಿಕೊಂಡು ಬಿಡುತ್ತಾಳೆ. ಮನೆಯ ಹೊಸಿಲಿನ ಒಳಗೇ ಅವಳ ಜೀವನ ಅರಳಿ ಹಾಗೆಯೇ ಕಮರಿ ಹೋಗುತ್ತದೆ. ಮಹಿಳೆ ಏನನ್ನಾದರೂ ಸಾಧಿಸಲು ಅನೇಕ ತ್ಯಾಗಗಳನ್ನು ಮಾಡಬೇಕಾಗುತ್ತದೆ. ನೋವುಗಳನ್ನು ನುಂಗುತ್ತಾ ಬದುಕನ್ನು ಗೆಲ್ಲಬೇಕಾಗುತ್ತದೆ. ಕಷ್ಟಗಳನ್ನು ಮೆಟ್ಟಿನಿಂತಾಗ, ಕಾರ್ಪಣ್ಯಗಳನ್ನು ಅಲಕ್ಷಿಸಿ ಮುಂದೆ ಮುಂದೆ ಸಾಗಿದಾಗ ಮಾತ್ರ ಹೊಸಜೀವನದ ಹೊಸ ಬೆಳಕು ಮಿನುಗುತ್ತದೆ.

ಸುಬ್ಬಲಕ್ಷ್ಮಿಯವರು ಕರ್ನಾಟಕ ಸಂಗೀತದ ಸಾಮ್ರಾಜ್ಞೆಯಾಗಿ ರಸಿಕರ ಹೃದಯ ಸಿಂಹಾಸನದಲ್ಲಿ ಶಾಶ್ವತವಾಗಿ ನೆಲೆಸಿದಂತೆಯೇ ಗಂಗಾಬಾಯಿಯವರು ಕೇಳುಗರ ಎದೆಯ ಸಿಂಹಾಸನದಲ್ಲಿ ನೆಲೆಸಿದ್ದಾರೆ.

ಹಿಂದುಸ್ಥಾನಿ ಸಂಗೀತದ ಸಪ್ತ ಸಾಮ್ರಾಜ್ಞೆಗಳಲ್ಲಿ ಎರಡನೇಯ ಸ್ಥಾನವನ್ನಲಂಕರಿಸಿದ ಗಂಗೂಬಾಯಿಯವರು ಪಡೆದಿರುವ ರಾಷ್ಟ್ರೀಯ ಪ್ರಶಸ್ತಿಗಳು ಐವತ್ತಕ್ಕು ಹೆಚ್ಚಿನವು. ಅವರಿಗೆ ದೊರೆತ ನೆನಪಿನ ಕಾಣಿಕೆಗಳು ಸಾವಿರಕ್ಕೂ ಮೀರಿದ್ದು, ನೂರಾರಕ್ಕೂ ಅಧಿಕ ಸನ್ಮಾನ ಪತ್ರಗಳು. ಮೂರ್ತಿ ಚಿಕ್ಕದಾದರೂ ಕೀರ್ತಿದೊಡ್ಡದು ಎಂಬ ಗಾದೆ ಮಾತಿಗೆ ಗಂಗೂಬಾಯಿಯವರೇ ಉತ್ತಮ ಉದಾಹರಣೆ ಎನ್ನಬಹುದು.

ನಾನು ಗಂಗೂಬಾಯಿಯವರನ್ನು ಭೇಟಿ ಮಾಡಿದ್ದು 2001ರಲ್ಲಿ. ಯಾವುದೋ ಸಮಾರಂಭದ ನಿಮಿತ್ತ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ. ಸರಳತನದ ಅವರ ವ್ಯಕ್ತಿತ್ವ ನನ್ನನ್ನು ಬಹುವಾಗಿ ಆಕರ್ಷಿಸಿತು. ನಾನು

ಆಗತಾನೆ ಹಂಪಿ ವಿಶ್ವವಿದ್ಯಾನಿಲಯದಲ್ಲಿ ಸುಗಮ ಸಂಗೀತದ ಬಗೆಗೆ ಡಿ.ಲಿಟ್. ಸಂಶೋಧನಾ ಪದವಿ ಪಡೆಯುವ ಸಲುವಾಗಿ ನನ್ನ ಹೆಸರನ್ನು ನೊಂದಾಯಿಸಿಕೊಂಡಿದ್ದೆ. ಸುಗಮ ಸಂಗೀತದ ಬಗೆಗೆ ಒಂದು ಪ್ರಶ್ನಾವಳಿಯನ್ನು ರೂಪಿಸಿಕೊಂಡು ಅನೇಕ ಪ್ರಸಿದ್ಧ ಕಲಾವಿದರಿಂದ ಅವರ ಅಭಿಪ್ರಾಯ ಸಂಗ್ರಹಿಸಲು ತೊಡಗಿದ್ದೆ. ಆ ದಿನ ಗಂಗೂಬಾಯಿಯವರನ್ನು ಕಂಡೊಡನೆಯೇ ಅವರನ್ನು ಪರಿಚಯ ಮಾಡಿಕೊಂಡು ನನ್ನ ಪ್ರಶ್ನಾವಳಿ ಕಾಗದವನ್ನು ಅವರ ಕೈಯಿಗಿತ್ತು ದಯವಿಟ್ಟು ಅವರ ಅಮೂಲ್ಯವಾದ ಅಭಿಪ್ರಾಯವನ್ನು ನೀಡಬೇಕೆಂದು ಕೇಳಿಕೊಂಡೆ, ಅವರು ಒಂದು ಕ್ಷಣ ನನ್ನ ಪತ್ರವನ್ನು ಓದಿದರು ನಂತರ ನನ್ನನ್ನು ಹತ್ತಿರಕ್ಕೆ ಕರೆದು " ತಂಗಿ ಬಾ... ಇಲ್ಲಿ... ಕುಂದರ್ರು.... ನಾ ಖರೇ... ಹೇಳತೀನಿ... ಏನೇ ಅಂದ್ರೆ ಸುಗಮಸಂಗೀತ ನನಗೇನೂ ಗೊತ್ತಿಲ್ಲ...... ನಾ ಎಂದೂ ಹಾಡಿಲ್ಲ.... ನಾ... ಸುಳ್ಳು ಹೇಳೋವಾಕೀ ಅಲ್ಲ.... ಮತ್ತ.... ಗೊತ್ತಿಲ್ಲದ ಮ್ಯಾಲ.... ತಿಳೀದರ ಬಗ್ಗೆ ಹೇಳಬಾರದು. ಎಂದರು. ನಾ.... ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತ ಬಿಟ್ಟು ಬೇರೇ ಏನೂ ಇದುವರೆಗೆ ಹಾಡಿ ಗೊತ್ತೆ ಇಲ್ಲ... ಎಂದರು." ನನ್ನ ಮುಖ ಸಪ್ಪಗಾಯ್ತು. ಅವರ ಕಾಲಿಗೆರಗಿದೆ. ಆಶೀರ್ವಾದ ಮಾಡಿ ನನ್ನ ಪ್ರಯತ್ನ ಫಲಪ್ರದವಾಗಲಿ ಎಂದು ಹರಸಿ ಎಂದು ಬೇಡಿಕೊಂಡೆ, ನನಗಂತೂ ನಿರಾಸೆಯಾಗಿತು. ಅವರಿಗೆ ನನ್ನ ಮುಖಭಾವ ಅರ್ಥವಾಯಿತೇನೋ... ನನ್ನ ಬೆನ್ನು ಸವರಿ..... "ಎಲ್ಲಾ ಒಳ್ಳೇದಾಗ್ತೈತೀತಿ.... ಸಾವಕಾಶ ಮಾಡಿಕೊಂಡು ಬರೀ..... ಚಿಂತೀಮಾಡಬ್ಯಾಡ.... ನನಗಿಂತ ತಿಳಿದವ್ರ ಕೂಡ ಕೇಳಿ ತಿಳ್ಕೊ ತಹೋಗು ನೀ ಓದಿದ ಹುಡ್ಗಿ ಅದೀಯ.... ಶಾಣ್ಯಾಳಿದ್ದೀಯಾ.... ಎಂದರು." ಅಷ್ಟೇ.... ಆಮೇಲೆ ನಾನು ಅವರನ್ನು ಮತ್ತೇ ಭೇಟಿ ಮಾಡಲಿಲ್ಲ...... ಆದರೆ ಅವರು ಅಂದು ಮಾತನಾಡಿದ ಸರಳ ಶೈಲಿ, ಪ್ರಾಮಾಣಿಕವಾದ ನಿರ್ಮಲ ಮನಸ್ಸಿನ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಆಗ್ಗಾಗ್ಗೆ ಕೇಳಿಸುತ್ತಿರುತ್ತವೆ. ಕೀರ್ತಿಯ ತುತ್ತತುದಿಗೇರಿದ್ದರೂ, ಸಾಮಾನ್ಯ ಹೆಂಗಸಿನ ಹಾಗೆ ಮುಗ್ದತೆಯೇ ಮೆವೆತ್ತಿದಂತೆ ಇದ್ದವರು ನಮ್ಮ ಗಂಗೂಬಾಯಿ. ಸಂಪೂರ್ಣ ಆಯುಷ್ಯದಲ್ಲಿ ಸಂಪೂರ್ಣವಾದ ಸಂಗೀತವನ್ನು ತುಂಬಿಕೊಂಡು ಶೃತಿ ಹಿಡಿದ ತಂಬೂರಿಯಾಗಿ ಸಾರ್ಥಕ ಜೀವನವನ್ನು ನಡೆಸಿದರು. ನೋವು ನಲಿವುಗಳ ಜೋಕಾಲೆಯ ಬದುಕಿನಲ್ಲಿ ನೂಕುತ್ತಾ, ಏರುತ್ತಾ, ಇಳಿಯುತ್ತಾ ಸ್ವರಗಳೊಂದಿಗೆ ರಾಗತಾನಗಳೊಂದಿಗೆ ಒಂದಾಗಿ ಸೇರಿಹೋಗಿದ್ದರು. ಆರು ವಿಶ್ವವಿದ್ಯಾಲಯಗಳಲ್ಲಿ ಗೌರವ ಡಾಕ್ಟರೇಟ್ ಪಡೆದು ಸಾವಿರಾರು ಪ್ರಶಸ್ತಿ ಪುರಸ್ಕಾರಗಳಿಗೆ ಗೌರವ ತಂದುಕೊಟ್ಟ

ಗಂಗೂಬಾಯಿಯವರು ಓದಿದ್ದು ನಾಲ್ಕನೇ ತರಗತಿಯವರೆಗಾದರೂ ಕಲಿತದ್ದು, ಗಳಿಸಿದ್ದು ಅಪಾರ. ಹತ್ತಾರು ಭಾಷೆಗಳಲ್ಲಿ ಪರಿಣತಿ ಪಡೆದಿದ್ದ ಅವರು ಗೆದ್ದಿದ್ದು ಲಕ್ಷ ಲಕ್ಷ ರಸಿಕರ ಹೃದಯ ಸಾಮ್ರಾಜ್ಯವನ್ನು. ಶೃತಿ ಮಿಡಿದ ತಂಬೂರಿಯಂತೆ ತಮ್ಮ ಸಂಗೀತದ ಮೂಲಕ ಗಂಡುದನಿಯಾಗಿ ಹಾಡಿ, ಹೆಸರು ಮಾಡಿದವರು. ರಸಿಕರ ಕಿವಿಯಲ್ಲಿ ಶೃತಿ ಮಿಡಿದ ತಂಬೂರಿಯಂತೆ ಅಮರರಾಗಿ, ಮಧುರವಾಗಿ ನಿರಂತರವಾಗಿ ಈಗಲೂ ಮಿಡಿಯುತ್ತಿದ್ದಾರೆ.

ಗಾಯನ ಗಂಗೆಯ ಯಶೋಗಾಥೆ

ಪ್ರಹ್ಲಾದ ಅಗಸನಕಟ್ಟೆ

ಹಿಂದೂಸ್ತಾನಿ ಸಂಗೀತಕ್ಕೆ ಮತ್ತೊಂದು ಪರ್ಯಾಯ ಹೆಸರೋ ಎಂಬಂತೆ ಸಂಗೀತ ಲೋಕದ ಇತಿಹಾಸವನ್ನು ಕಟ್ಟಿಕೊಡುವ ಒಂದು ಅಪರೂಪದ ಪುಸ್ತಕ ನನ್ನ ಬದುಕಿನ ಹಾಡು. ಒಂದು ಅನಾಮಿಕ ಮೂಲೆಯೊಂದರಿಂದ, ಉಪೇಕ್ಷಿತ, ತಾಪತ್ರಯಗಳ ಸಾಗರದಿಂದ ಮೇಲೆದ್ದು ಮುಗಿಲ ಮುಟ್ಟಿದ ಸಾಧಕಿಯೊಬ್ಬಳ ಯಶೋಗಾಥೆಯನ್ನು, ಅದನ್ನು ಕ್ರಮಿಸಲು ಅವರು ಸಾಧಿಸಿದ ಹಾದಿಯನ್ನು, ಗಳಿಸಿದ ಕೀರ್ತಿಯನ್ನು ಒಟ್ಟೊಟ್ಟಿಗೆ ಈ ಪುಸ್ತಕ ನಮಗೆ ಪರಿಚಯ ಮಾಡಿಕೊಡುತ್ತದೆ.

ಈ ಪುಸ್ತಕದ ನಿರೂಪಕರು ಸ್ವತಃ ಅತ್ಯುತ್ತಮ ಗದ್ಯ ಲೇಖಕರು, ಸಂಗೀತದ ಬಗ್ಗೆ ಅಪಾರ ಪಾಂಡಿತ್ಯವನ್ನು ಗಳಿಸಿದವರೂ, ಗಂಗೂಬಾಯಿ ಹಾನಗಲ್ ಅವರ ಬಹುಕಾಲದ ಒಡನಾಡಿಗಳೂ, ಹಿತೈಷಿಗಳೂ ಆದ ಎನ್ಕೆ ಆಗಿರುವುದರಿಂದ ಈ ಪುಸ್ತಕವೂ ತನ್ನ ಅಧಿಕೃತತೆಯಲ್ಲಿ ವಾಸ್ತವತೆಯನ್ನು, ನಿರೂಪಣೆಯಲ್ಲಿ ಕಲಾತ್ಮಕತೆಯನ್ನು ಒಳಗೊಂಡಿದೆ. ಹಾಡಿನ ಹಿಂದೆ ಈ ತನಕ ಹೂತು ಹೋಗಿದ್ದ ವಿಷಾದವನ್ನೂ, ಹೋರಾಟಗಳನ್ನು, ಸಾಧನೆ ಹಿಂದಿನ ತಪಸ್ಸನ್ನು, ಕೀರ್ತಿಯ ಹಿಂದಣ ಪರಿಶ್ರಮವನ್ನು ಹಾಗೂ ಹಾನಗಲ್ ಅವರ ಅಪರೂಪದ ಸಜ್ಜನಿಕೆಯನ್ನು ಎನ್ಕೆಯವರು ಗಂಗೂಬಾಯಿಯವರ ಬಾಯಿಯಿಂದ ನಾನಾ ಪ್ರಸಂಗಗಳ ಮೂಲಕ, ನೆನಪುಗಳ ಮೂಲಕ, ಘಟನೆಗಳ ಮೂಲಕ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ.

ಹಾಗೆ ನೋಡಿದರೆ ಈ ಪುಸ್ತಕ ಕೇವಲ ಗಂಗೂಬಾಯಿ ಅವರ ವೈಯಕ್ತಿಕ ಚರಿತ್ರೆ ಮಾತ್ರವಾಗಿರದೆ ಸರಿ ಸುಮಾರು ಒಂದು ಶತಮಾನದ ಸಂಗೀತ ಲೋಕದ ಪರಿಳಿತದ ಚಾರಿತ್ರಿಕ ದಾಖಲೆಯೂ ಆಗಿದೆ. ಸಂಗೀತದ ಉಚ್ಛ್ರಾಯ ಔನ್ನತ್ಯ, ಹಿರಿಮೆ–ಗರಿಮೆ, ಗುರುಶಿಷ್ಯರ ಸಂಬಂಧ, ಘರಾಣೆಗಳ ಪ್ರಪಂಚ ಮತ್ತೆಲ್ಲವುಗಳ ಚಿತ್ರವೂ ಇಲ್ಲಿ ಸಮೃದ್ಧವಾಗಿ ಮೂಡಿದೆ. ಡಾ. ಗಂಗೂಬಾಯಿ ಹಾನಗಲ್ ಅವರ ಬದುಕು ಧಾರವಾಡದ ಶುಕ್ರವಾರ ಪೇಟೆಯಿಂದ ಶುರುವಾಗಿ

ಫ್ರಾನ್ಸ್ ಅಮೇರಿಕೆಗಳನ್ನು ಸುತ್ತಿ ಬರುವಂತೆ ಅವರ ಸಾಧನೆ ಕುಂದಗೋಳದಿಂದ ಉಚ್ಛ್ರಾಯಗೊಂಡು ಭಾರತದ ಬೇರೆ ಬೇರೆ ಭಾಗಗಳಿಗೂ, ಬೈಠಕ್‌ಗಳಿಗೂ ವಿಸ್ತೃತಗೊಳ್ಳುತ್ತಾ ಹೋಗುತ್ತದೆ. ಹೀಗೆ ಹೋದರೂ ಅವರೇ ಈ ಪುಸ್ತಕದಲ್ಲಿ ಒಂದು ಕಡೆ ಹೇಳಿಕೊಂಡಂತೆ "ಭಾರತೀಯ ಸಂಗೀತ ನಕ್ಷೆಯಲ್ಲಿ ನಮ್ಮ ಧಾರವಾಡ, ಹುಬ್ಬಳ್ಳಿ ಕುಂದಗೋಳ, ಗದಗಗಳ ಸ್ಥಾನ ನೆತ್ತಿಯ ಮೇಲಿದೆ" ಎಂದು ಹುಟ್ಟೂರಿನ ಅಭಿಮಾನವನ್ನು ಮೆರೆಯುತ್ತಾರೆ.

ಗಂಗೂಬಾಯಿ ಎಂದರೆ ಒಬ್ಬ ಹಿಂದೂಸ್ಥಾನಿ ಗಾಯಕಿ ಮಾತ್ರವೆಂದೆ ಸ್ಥೂಲ ರೂಪದಲ್ಲಿ ತಿಳಿದವರಿಗೆ ಈ ಪುಸ್ತಕ ಅವರ ಎಲ್ಲಾ ಮುಖಗಳನ್ನು, ಸ್ವಭಾವಗಳನ್ನು, ಪರಿಚಯ ಮಾಡಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಅವರ ಬಾಲ್ಯ, ಅವರ ತಾಯಿ ಅಂಬಕ್ಕನ ಪ್ರೀತಿ, ಸಂಗೀತಕ್ಕೆ ಆಕೆ ನೀಡುತ್ತಿದ್ದ ಪ್ರೋತ್ಸಾಹ, ತಮ್ಮ ಮಗಳನ್ನು ಹಿಂದೂಸ್ಥಾನಿ ಗಾಯಕಿಯನ್ನಾಗಿ ಮಾಡಬೇಕೆಂಬ ಉತ್ಕಟ ಇಚ್ಛೆಯಿಂದ ಆಕೆ ತನ್ನ ಕರ್ನಾಟಕ ಸಂಗೀತ ಹಾಡುಗಾರಿಕೆಯನ್ನು ತ್ಯಾಗ ಮಾಡಿದ್ದು, ಆ ಕಾಲದ ಸಾಮಾಜಿಕ ವಾತಾವರಣ, ವಿವಾಹ, ಕುಟುಂಬ ಪದ್ಧತಿಗಳು ಆರಂಭದ ಸಾಧನೆಯಲ್ಲಿ ವಿವಿಧ ಸಂದರ್ಭಗಳಲ್ಲಿ ಸಂಗೀತ ಅಭ್ಯಾಸ ಮಾಡಿಸಿದ ಮಹನೀಯರ ಉದ್ಧರಣೆ, ಅದರಲ್ಲೂ ದತ್ತೋಪಂತ ದೇಸಾಯಿ, ಹುಲಗೂರ ಕೃಷ್ಣಾಚಾರ್ಯರ ಶಿಷ್ಯತ್ವ, ನಂತರ ನಿಜವಾದ ಸಾಧನೆಗೆ ಕಾರಣವಾದ ಸವಾಯಿ ಗಂಧರ್ವರ ಶಿಷ್ಯತ್ವ, ನಂತರ ವಿವಾಹ, ಈ ನಡುವೆ ತಾಯಿಯ ಮರಣ ಒಂದಾದರೊಂದರಂತೆ ಮೂರು ಮಕ್ಕಳು, ಅವುಗಳನ್ನು ಕಟ್ಟಿಕೊಂಡೆ ಅವರು ನಡೆಸುತ್ತಿದ್ದ ಸಾಧನೆ, ಪ್ರವಾಸ ಮತ್ತೆ ಪತಿಗೆ ಖಾಯಿಲೆ, ಅವರ ಆಕಸ್ಮಿಕ ಅಗಲಿಕೆ ಜೀವನದಲ್ಲಿ ಅಭದ್ರತೆ..... ಹೀಗೆ ಜೀವನದ ವಿವಿಧ ಮುಖಗಳ ಚಿತ್ರಣ ಈ ಪುಸ್ತಕದಲ್ಲಿ ಹಾಸು ಹೊಕ್ಕಾಗಿದೆ.

ಇಡೀ ಪುಸ್ತಕದಲ್ಲಿ ಸವಾಯಿ ಗಂಧರ್ವರ ವ್ಯಕ್ತಿತ್ವ, ಅವರ ಜೊತೆಗಿನ ಸಾಧನೆ, ಅವರು ಶಿಷ್ಯರಿಗೆ ಕಲಿಸುತ್ತಿದ್ದ, ವಿಧಿ ವಿಧಾನಗಳು, ನಿರೀಕ್ಷಿಸುತ್ತಿದ್ದ ಶಿಸ್ತು, ಏಕಾಗ್ರತೆ ಇಲ್ಲಿ ಮತ್ತೆ ಮತ್ತೆ ಪ್ರಸ್ತಾಪಗೊಂಡಿವೆ.

ಸವಾಯಿ ಗಂಧರ್ವ ಅವರ ಬಗ್ಗೆ ಹೇಳುತ್ತಾ ಗಂಗೂಬಾಯಿಯವರು ಈ ಪುಸ್ತಕದಲ್ಲಿ ಒಂದು ಕಡೆಗೆ "ಇವೊತ್ತು ನಾನೇನಾಗಿದ್ದೇನೋ ಅದು ನನ್ನ ಗುರುವಿನ ಕೃಪೆ, ತಾಯಿಯ ಹಾರೈಕೆಗಳು, ನನ್ನ ಸೋದರ ಮಾವನ ಸದಿಚ್ಛಾ, ಸತತ ಸಹಾಯ, ಸಹಕಾರಗಳು' ಎಂದಿದ್ದಾರೆ.

ತಮ್ಮ ಜೊತೆ ಸಂಗೀತಲೋಕ ಪ್ರವೇಶ ಮಾಡಿದ, ಅಪಾರ ಹೆಸರು ಗಳಿಸಿದ ಸಹ ಸಂಗೀತಗಾರರನ್ನು ಕುರಿತು ಗಂಗೂಬಾಯಿಯವರು ಅಭಿಮಾನಪಟ್ಟುಕೊಂಡು ಇಲ್ಲಿ ಉಲ್ಲೇಖಿಸಿದ್ದಾರೆ. ವಿಶೇಷವಾಗಿ ಭೀಮಸೇನ ಜೋಶಿ ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ನೀಲಕಂಠ ಬುವಾ, ವೆಂಕಟರಾವ್ ರಾಮದುರ್ಗ, ಪಿರೋಜ್ ದಸ್ತೂರ್, ಬಿಸ್ಮಿಲ್ಲಖಾನ್ ಜದ್ದನಬಾಯಿ, ರಸೂಲನ್‌ಬಾಯಿ, ಬೇಗಂ ಅಖ್ತರ್, ಹೀರಬಾಯಿ ಬಡೋದೇಖರ್, ಓಂಕಾರನಾಥ್ ಠಾಕೂರ್, ಫೈಯಾಜ್‌ಖಾನ್, ಬಡೇಗುಲಾಂಖಾನ್, ರವಿಶಂಕರ್, ಝಾಕಿರ್ ಹುಸೇನ್, ಶ್ಯಾಮ್ ಪ್ರಸಾದ್, ಶಂಸುದ್ದೀನ್, ಅಮ್ಜದ್ ಆಲಿಖಾನ್... ಇಂತಹ ಸಮಕಾಲೀನ ಸಂಗೀತ ಲೋಕದ ಘಟಾನುಘಟಿಗಳ ಪ್ರಸ್ತಾಪವೂ ಈ ಪುಸ್ತಕದಲ್ಲಿದ್ದು ಓದುಗರಿಗೆ ಇವರುಗಳ ಪರಿಚಯ ಕೂಡ ಆಗುತ್ತದೆ.

ಹಾಗೆಯೇ ವೈಯಕ್ತಿಕ ಜೀವನದಲ್ಲಿ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಂಡವರ ಪ್ರಸ್ತಾಪವೂ ಈ ಪುಸ್ತಕದಲ್ಲಿ ಪುನರುಕ್ತಿಯೋ ಎಂಬಂತೆ ಪದೇ ಪದೇ ಪ್ರಸ್ತಾಪವಾಗಿದೆ. ವಿಶೇಷವಾಗಿ ಮಗಳಾಗಿ ಹುಟ್ಟಿ ಎದೆಹಾಲಿನ ಜೊತೆ ಸಂಗೀತವನ್ನು ಸವಿಯುತ್ತ, ತಮ್ಮ ಸಂಗೀತದಲ್ಲಿ ಸಾಥ್ ನೀಡುವ ಮಟ್ಟಕ್ಕೆ ಬೆಳೆದ ಕೃಷ್ಣಾ ಹಾನಗಲ್ ಬಗ್ಗೆಯಂತೂ ಗಂಗೂಬಾಯಿ ಅವರಿಗೆ ಎಷ್ಟು ಹೇಳಿದರೂ ಕಡಿಮೆಯೇ. ಹಾಗೆಯೇ ಸೋದರ ಮಾವ ರಾಮಣ್ಣ, ತಬಲಾಸಾಥಿ ತಮ್ಮ ಶೇಷಗಿರಿ ಹಾನಗಲ್, ತಮ್ಮ ಮಕ್ಕಳಾದ ಬಾಬಣ್ಣ, ನಾರಾಯಣ, ತಾಯಿ ಅಂಬಕ್ಕ, ಯಜಮಾನರಾದ ಗುರುನಾಥ ಕೌಲಗಿ, ಗುರು ಸವಾಯಿ ಗಂಧರ್ವ, ಕವಿಗಳಾದ ಬೇಂದ್ರೆ ಮೊದಲಾದವರ ನೆನಪುಗಳು ಗಂಗೂಬಾಯಿ ಹಾನಗಲ್ ಅವರ ಸ್ಮತಿಪಟಲದ ಮೇಲೆ ಕ್ಷಣ ಕ್ಷಣಕ್ಕೂ ಹಾದು ಹೋಗುತ್ತದೆ.

ಒಂದು ಕಡೆ ಅವರು ತಮ್ಮ ಬದುಕು ಕುರಿತು ಹೀಗೆ ಬರೆಯುತ್ತಾರೆ. "ಈಗ ಸ್ವಲ್ಪ ಸುಸ್ಥಿತಿಯಲ್ಲಿದ್ದೇನಷ್ಟೇ. ಆದರೆ ನನ್ನ ಕಣ್ಮುಂದೆ ಕಟ್ಟಿರುವುದು ನನ್ನ ಬಾಲ್ಯದ ಕಷ್ಟದ ಬದುಕು. ಯಜಮಾನರ ಕೈ ಹಿಡಿದ ಮೇಲೆ ಕಣ್ಣೀರಿನ ಬದುಕು, ಮಕ್ಕಳಾದ ಮೇಲೂ ಸಮ್ಮಿಶ್ರ ಭಾವನೆಗಳ ಬದುಕು. ನನ್ನ ಬದುಕಿನ ಹಾಡಿನಲ್ಲಿ ಜೋಗಿಯಾ ತೋಡಿಗಳೂ ಇವೆ, ಬಸಂತ ಬಿಹಾರವೂ ಇದೆ. ಭೈರವಿಯಂತೂ ಇದ್ದೇ ಇದೆ.'

ಆದರೂ ಇಂಥ ಮುಳ್ಳಿನ ಹಾದಿಯಲ್ಲೂ ಹೂವು ಚೆಲ್ಲಿ ಹಾರೈಸಿದವರನ್ನು ಗಂಗುಬಾಯಿಯವರು ಪ್ರಾಂಜಲ ಅಂತಃಕರಣದಿಂದ ನೆನೆಯುವುದನ್ನು ಮರೆತಿಲ್ಲ. ಹಾಗೆಯೇ ಇವರ ಸಾಧನೆಯನ್ನು ಗುರುತಿಸಿ ಸಂಘ-ಸಂಸ್ಥೆಗಳು ನೀಡಿದ ಪ್ರಶಸ್ತಿ, ಸನ್ಮಾನಗಳನ್ನು ಕೃತಜ್ಞತೆಯಿಂದ ಇಲ್ಲಿ ನೆನೆದಿದ್ದಾರೆ. ದೇಶದ ನಾಲ್ಕು ಅತ್ಯುನ್ನತ ವಿಶ್ವ ವಿದ್ಯಾಲಯಗಳು ಅವರಿಗೆ ಡಾಕ್ಟರೇಟ್ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ. ಕರ್ನಾಟಕ ಸರ್ಕಾರ ಅವರನ್ನು ಒಮ್ಮೆ ವಿಧಾನ ಪರಿಷತ್ತಿಗೆ ಸದಸ್ಯರಾಗಿ ನಾಮಕರಣ ಮಾಡಿ ಗೌರವ ತೋರಿದೆ.

ಇಷ್ಟೆಲ್ಲಾ ನೀರೂ ಡಾ. ಗಂಗೂಬಾಯಿ ಹಾನಗಲ್ ಅವರ ಬದುಕಿನಲ್ಲಿ ಹಾದು ಹೋಗಿದ್ದರೂ ಈಗಲೂ ಅವರು ಶುಕ್ರವಾರ ಪೇಟೆಯ ಅಂಬಕ್ಕನ ಮುಗ್ಧ ಶಿಶು ಗಂಗೂವಾಗಿ ಉಳಿದಿದ್ದಾರೆ. ಅದೇ ಬಿಚ್ಚು ಹೃದಯ, ನಿಷ್ಕಪಟ ಮನಸ್ಸು, ಮಂದಹಾಸ, ಸರಳತೆ, ಸಜ್ಜನಿಕೆ, ಮತ್ತು ನಿರಂತರ ಸಾಧನೆ. ಇದೆಲ್ಲವನ್ನು ಈ ಪುಸ್ತಕ ಬಿಚ್ಚಿ ತೋರುತ್ತದೆ. 1952ರಲ್ಲಿಯೇ ಖ್ಯಾತ ಕಾದಂಬರಿಕಾರರಾದ ಅ.ನ.ಕೃ ಅವರು ಗಂಗೂಬಾಯಿ ಹಾನಗಲ್ ಅವರ ಕುರಿತು "ಗಂಗೂಬಾಯಿ ಅವರ ಸಂಗೀತದ ಘನತೆಗೆ ಅವರ ವೈಯಕ್ತಿಕ ಘನತೆಯೂ ಕಾರಣ" ಎಂದು ಅಂದು ಆಡಿದ ಮಾತು ಇಂದೂ ಸತ್ಯವಾಗಿ ಉಳಿದು ಬಂದಿದೆ.

(ಪ್ರಕಟನೆ ಸಾಹಿತ್ಯಭಂಡಾರ ಹುಬ್ಬಳ್ಳಿ)

ಕಳಚಿ ಹೋದ "ಮಾತೃ ಸಂಭ್ರಮ"

ಎಂ.ವಿ.ಸುಬ್ರಹ್ಮಣ್ಯ,

ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಅಕ್ಕ ಗಂಗೂಬಾಯಿ ಅವರೊಂದಿಗೆ ನಾನು ತುಂಬಾ ನಿಕಟವಾದದ್ದು- ಈಗ ಹನ್ನೆರಡು ವರ್ಷಗಳ ಹಿಂದೆ. ಕಾಕಾ ಎನ್ನೆ ಅವರು "ತರಂಗಕ್ಕೆ' ಬರೆಯುತ್ತಿದ್ದ ಗಂಗೂಬಾಯಿ ಆತ್ಮಕತೆ "ನನ್ನ ಬದುಕಿನ ಹಾಡನ್ನು" ಅದು ಮುಗಿದು 3-4 ವರ್ಷಗಳಾದರೂ ಪುಸ್ತಕ ರೂಪಕ್ಕೆ ಬರುತ್ತಿಲ್ಲವಲ್ಲ ಎಂಬ ಕೊರಗನ್ನು ಶ್ರೀ ನಿರಂಜನ ವಾಲಿಶೆಟ್ಟರ ಹೊರಹಾಕುತ್ತಿದ್ದರು. ವಾಲಿಶೆಟ್ಟಿಗೆ ಆಪ್ತರಾಗಿದ್ದ ಗಂಗಕ್ಕನ ಮನೆಮಂದಿಗೆ - ನಾನು 'ನಮಸ್ಕಾರ-ನಮಸ್ಕಾರ'ದ ಸ್ನೇಹಿತನಾಗಿದ್ದೆ. ಹಾಗೇ ಒಂದು ದಿನ ನಾನು, ನಿರಂಜನರು ಜಿಡುವು ಮಾಡಿಕೊಂಡು ಗಂಗಕ್ಕನ ಮನೆಗೆ ಹೋಗಿ ಹರಟೆ ಹೊಡೆದು ಈ ವಿಷಯ ತಿಳಿಸಿದೆವು. ಆಗ ಕೃಷ್ಣಕ್ಕ ಇದ್ದರು. ಮನೆಗೆ ಬರುವ ಅತಿಥಿಗಳಿಗೆ ಉಪಚರಿಸುವ ಹೊಣೆ ಕೃಷ್ಣಕ್ಕನದೇ ಇದ್ದಂತಿತ್ತು. ತಾಯಿ ಮಗಳಿಬ್ಬರೂ (ಅವರು ಅಕ್ಕತಂಗಿಯರಂತೆ, ಗೆಳತಿಯರಂತೆಯೇ ಇದ್ದರು). ಒಂದೇ ಉಸಿರಿನಲ್ಲಿ ಹೇಳಿದ್ದ. "ಅದರಾಗ ಕೆಲವು ವಿಷಯ ತಪ್ಪು-ತಪ್ಪಾಗಿ ನಮೂದ ಆಗ್ಯಾವ. ಅದನೆಲ್ಲ ಸರಿಮಾಡಿ ಪುಸ್ತಕ ತರೋಹಂಗಿದ್ರ ತರ್ರಿ", ಎಂದು.

ಅಂದಿನಿಂದಲೇ ನನ್ನದು, ವಾಲಿಶೆಟ್ರುದು ಅಜ್ಜಿ ಮನೆಯಲ್ಲಿ ಬೈಟಕ್. ತರಂಗದ ಧಾರಾವಾಹಿಯನ್ನು ನಾನು ಜೋರಾಗಿ ಓದುತ್ತ ಹೋಗುವುದು, ಅಕ್ಕ, ಕೃಷ್ಣಕ್ಕ ಇಬ್ಬರೂ "ತಡ್ರಿ, ತಡ್ರಿ, ಹೇಳಲ್ಲಾ ನಾನು, ಇದು ತಪ್ಪಾಗೇದ ವಿಷಯ ಹಂಗಲ್ಲದು ಹೀಂಗ" ಎಂದು ತಿದ್ದುವುದು. ಹೀಗೆ ನಮ್ಮದು 10-15 ಬೈಟಕ್‌ಗಳು ನಡೆದ ನಂತರವೇ "ನನ್ನ ಬದುಕಿನ ಹಾಡಿಗೊಂದು." ಕೃತಿ ರೂಪ ಲಭಿಸಿದ್ದು. ಆ ಅಷ್ಟೂದಿನ ಗಂಗವ್ವ ಗಂಗೂಮಾಯಿಯ ಅನುಭವಗಳನ್ನು ಅವರ ಬಾಯಿಂದಲೇ, ಹೃದಯಾಂತರಾಳದಿಂದಲೇ, ಕೇಳುವ ಭಾಗ್ಯ ನಮ್ಮದಾಗಿತ್ತು. ಜೊತೆಗೆ ಕೃಷ್ಣಕ್ಕನ ಜುಗಲ್‌ಬಂದಿ ಬೇರೆ. ಇಂಥ ಸೌಭಾಗ್ಯ ಲಭಿಸಿದ ಕೆಲವೇ ಕೆಲವರಲ್ಲಿ ನಾವಿಬ್ಬರು ಎಂಬ ಹೆಮ್ಮೆ ನಮ್ಮದು. ಪ್ರತಿದಿನ ಕೃಷ್ಣಕ್ಕನ ಅವಲಕ್ಕಿ,

ಚಹಾ ಸೇವೆ ನಮಗೆ. ಈಗ ಐದು ವರ್ಷಗಳ ಹಿಂದೆ ಕೃಷ್ಣಕ್ಕ ಹೋದಾಗಿನಿಂದ ಅಕ್ಕ ಗಂಗೂಬಾಯಿಯ ಅರ್ಧಭಾಗವೇ ಕಳಚಿದಂತಾಗಿದೆ ಎನಿಸುತ್ತಿತ್ತು. "ನನ್ನ ಬದುಕಿನ ಹಾಡನ್ನು" the song of my life ಎಂದು ಇಂಗ್ಲೀಷ್‌ನಲ್ಲಿ ಅನುವಾದಿಸಿದ ಗಂಗೂಬಾಯಿಯ ಕಟ್ಟಾ ಅಭಿಮಾನಿ ಹಾಗೂ ಶಾಸ್ತ್ರೀಯ ಸಂಗೀತದ ಅಪ್ಪಟ ಜ್ಞಾನವಿದ್ದ ಮುಂಬಯಿಯ ಆಕಾಶವಾಣಿ ನಿವೃತ್ತ ಎಂಜಿನಿಯರ್ ಶ್ರೀ ಹಾನಗಲ್ ಎಂಬುವರು ಗಂಟುಬಿದ್ದು ನನ್ನಿಂದಲೇ ಪ್ರಕಟ ಮಾಡಿಸಿದರು. 2003ರ ಡಿಸೆಂಬರ್ 13 ರಂದು ಧಾರವಾಡ ಮಾಳಮಡ್ಡಿಯ "ಬಾಲ ಬಳಗದ" ಹಸಿರು ಆವರಣದಲ್ಲಿ ಬಿಡುಗಡೆ. ಕೃಷ್ಣಕ್ಕ ಅವರು ಹಾಡಿದ್ದು ಅವತ್ತೆ ಕೊನೆ. ಸಭಿಕರಲ್ಲಿ ಬಂದು ಕುಳಿತ್ತಿದ್ದವರು–ಗಿರೀಶ ಕಾರ್ನಾಡ, ಪಾಪು, ಗಿರಡ್ಡಿ, ಚನ್ನವೀರ ಕಣವಿ, ಸಿದ್ದಲಿಂಗ ಪಟ್ಟಣಶೆಟ್ಟಿ–ಮುಂತಾದ ದಿಗ್ಗಜರು. ಹಸಿರು ಪರಿಸರದ ಶುಭ್ರ ಸಂಜೆ ತಾಯಿಗಾಗಿ ರಾಗ ತೆಗೆದದ್ದು ಮಗಳು ಕೃಷ್ಣಕ್ಕ ಅದೊಂದು ಅಪೂರ್ವ ಕಾರ್ಯಕ್ರಮ.

ನಿನ್ನೆ ರಾತ್ರಿ ಅಕ್ಕನಿಗೆ "ಸೀರಿಯಸ್" ಎಂದು ತಿಳಿಯುತ್ತಲೇ ಆಸ್ಪತ್ರೆಗೆ ಓಡಿದೆ. ದಾರಿಯಲ್ಲಿ ಇದೆಲ್ಲ ನೆನಪಾಯಿತು. ರಾತ್ರಿ ಒಂದು ಗಂಟೆಯವರೆಗೆ ಅಲ್ಲಿದ್ದ ನಾನು ಬೆಳಗ್ಗೆ ಹೋಗೋಣವೆಂದು ವಾಪಸಾದರೆ–ಅಕ್ಕ ಹೋಗಿಯೇ ಬಿಟ್ಟಿದ್ದರು.

ಬೆಳಗ್ಗೆ ವಾರ್ತೆ ತಿಳಿದು ಜನಸಾಗರ ನುಗ್ಗುತ್ತಿತ್ತಲ್ಲ! ಅಕ್ಕನ ದೇಹ ಸ್ವಚ್ಛಗೊಳಿಸುವುದರಲ್ಲಿ, ದಾನ ಕೊಟ್ಟ ಕಣ್ಣುಗಳನ್ನು ಪಡೆಯುವಲ್ಲಿ ನಿರತರಾಗಿದ್ದ ವೈದ್ಯರಿಗೆ ಆಗುತ್ತಿದ್ದ ತೊಂದರೆ ತಪ್ಪಿಸಲು ಜನರ ನಿಯಂತ್ರಣ ಕೆಲಸಕ್ಕಾಗಿ ಬಾಗಿಲಲ್ಲಿ ಕಾಯುತ್ತ ನಿಂತೆ. ಬಂದ ಜನರೆಲ್ಲ, "ಅವರ ಫ್ಯಾಮಿಲಿ ಮನುಷ್ಯಾರಿ ನಾನು.... ಅವರ ಫ್ಯಾಮಿಲಿ ಫ್ರೆಂಡ್‌ರಿ... ಅವರಿಗೆ ನಾ ಬ್ಹಾಳಾ ಸಮೀಪದಂವ್ರಿ" ಎಂಬ ಮಾತುಗಳಿಂದ ಒಳ ನುಗ್ಗಲು ಯತ್ನಿಸುತ್ತಿದ್ದರು. ಆಗ ಮತ್ತೆ ನೆನಪಾಯಿತು. ಎಸ್.ಎಲ್. ಭೈರಪ್ಪ ತಮ್ಮ ಆತ್ಮಕತೆ ಭಿತ್ತಿಯಲ್ಲಿ ಬರೆದದ್ದು; ಭೈರಪ್ಪ ಇನ್ನೂ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ರಸ್ತೆಯಲ್ಲಿ ಕೇಳಿ ಬರುತ್ತಿದ್ದ ರಾಗಕ್ಕೆ ಆಕರ್ಷಿತರಾಗಿ ಹೋಗಿ ಕುಳಿತದ್ದು, ತನ್ನ ತಾಯಿ ತನಗಾಗಿಯೇ ಹಾಡುತ್ತಿದ್ದಾಳೆ ಎಂದೆನಿಸಿ ಅಲ್ಲಿಯೇ ಬೆಳಗಿನ ಜಾವದವರೆಗೂ ಮಿಸುಗಾಡದೆ ತಳವೂರಿದ್ದು. ಅಕ್ಕನ ಆ ಆಲಾಪದಿಂದಲೇ ಹಿಂದೂಸ್ತಾನಿ ಸಂಗೀತದ ಹುಚ್ಚನ್ನು ಅವರು ಬೆಳೆಸಿಕೊಂಡಿದ್ದು– ಹೀಗೆಲ್ಲ ಭೈರಪ್ಪ ಬರೆದದ್ದು ಕಣ್ಮುಂದೆ ಬಂತು. ಅಕ್ಕ ಗಂಗೂಬಾಯಿಯ ರಾಗದಲ್ಲಿ ಮಾತ್ರ ಆ ಮಾತೃ

ಹೃದಯ ಇರುತ್ತಿರಲಿಲ್ಲ. ಅವರ ಇಡೀ ವ್ಯಕ್ತಿತ್ವವೇ ತಾಯಿಯೊಬ್ಬಳ ಶಿಲ್ಪ ಎಂಬ ಭಾವನೆ ಬರುತ್ತಿತ್ತು. ಆಡುವ ಮಾತು ಯಾವುದೊಂದೂ ಬಾಯಿಂದ ಬರದೆ, ಹೃದಯಾಂತರಾಳದಿಂದಲೇ ಬರುತ್ತಿತ್ತು. ನಮ್ಮ ತಾಯಿಯೇ ಎದುರು ಕುಳಿತು ಸಾಂತ್ವನ ಹೇಳುತ್ತಿದ್ದಾಳೋ, ರಮಿಸುತ್ತಿದ್ದಾಳೋ, ಕತೆ ಹೇಳುತ್ತಿದ್ದಾಳೋ, ಬುದ್ಧಿ ಹೇಳುತ್ತಿದ್ದಾಳೋ, ನಮ್ಮ ನೋವಿಗೆ ಕಣ್ಣೀರು ಹಾಕುತ್ತಿದ್ದಾಳೋ ಎಂಬ ಭಾವ ಅಕ್ಕನೆದುರು ಕುಳಿತಾಗ. "ನೋಡಪಾ, ಹುಬ್ಬಳಿಯೊಳಗ ನನ್ನ ಕಾರ್ಯಕ್ರಮ ಆಗೋದ ಅಪರೂಪ. ಆದರೂ ಮಂದಿ ನನ್ನ ಬ್ಹಾಳ ಹಚ್ಕೊಂಡಾರ. ನಾನು ಕಲ್ಕತ್ತಾ ಹೋಗ್ಲಿ, ಮುಂಬಯಿಗೆ ಹೋಗ್ಲಿ, ಕಾರ್ಯಕ್ರಮ ಮುಗಿಯುವುದು ತಡಾ, ಓಡಿ ಹುಬ್ಬಳ್ಳಿಗೆ ಬಂದುಬಿಡತೇನಿ," ಅಂತ ನೂರಾರು ಸಲ ಅಜ್ಜಿ ಹೇಳಿದ್ದು ಕೇಳಿದ್ದೇನೆ. ಹುಬ್ಬಳ್ಳಿ ಜನ ಅಜ್ಜಿಯನ್ನು ಹಿಂದೂಸ್ತಾನಿ ಗಾಯಕಿಗಿಂತಲೂ ಒಬ್ಬ ಮಾತೃ ಹೃದಯಿಯಾಗಿಯೇ ಅನುಭವಿಸಿದವರು. ಹೀಗಾಗಿಯೇ "ನಾನು ಫ್ಯಾಮಿಲಿ ಮೆಂಬರ್, ನಾನು ಬ್ಹಾಳ ಸಮೀಪದವನು..." ಎಂದೆಲ್ಲ ಹೇಳಿ ಒಳಗೆ ನುಗ್ಗುತ್ತಿದ್ದರು.

ಏನೂ ಇಲ್ಲದ ಹುಬ್ಬಳ್ಳಿಯಲ್ಲಿ ಗಂಗೂಬಾಯಿಯಂತಹ ಒಂದು 'ಮಾತೃ ಸಂಭ್ರಮ' ಇತ್ತು ಅದು ಕಳಚಿಬಿತ್ತು. ತುಂಬಿಕೊಡುವವರಾರು?

ಗಾನ ಗಂಗೆ ಗಂಗೂಬಾಯಿ

ಎನ್.ಎಸ್. ಶ್ರೀಧರಮೂರ್ತಿ

ಗಂಗೂಬಾಯಿ ಹಾನಗಲ್ಲ ರವರು ಜನಿಸಿದ್ದು 1913ರ ಮಾರ್ಚಿ 5ರಂದು ಧಾರಾವಾಡದಲ್ಲಿ. ಅವರ ತಾಯಿ ಅಂಬಾಬಾಯಿ ಕರ್ನಾಟಕಿ ಸಂಗೀತ ಹಾಡುಗಾರ್ತಿಯಾಗಿದ್ದರು. ಅಸಾಧಾರಣ ಸ್ವರನಿಯಂತ್ರಣ ಹೊಂದಿದ್ದ ಅವರು ಬರಹಗಾರ್ತಿಯಾಗಿದ್ದರು, ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಮನೆಯಲ್ಲೇ ಖಾಸಗಿ ಕಛೇರಿಗಳನ್ನು ನೀಡುತ್ತಿದ್ದರು. ಕಿರಾಣಾ ಘರಾಣೆಯ ಸ್ಥಾಪಕರಾದ ಉಸ್ತಾದ್ ಅಬ್ದುಲ್ಲಾ ಕರೀಂಖಾನರು ಈ ಕಛೇರಿಗಳಿಗೆ ತಪ್ಪದೇ ಬರುತ್ತಿದ್ದ ಪ್ರಮುಖರಲ್ಲೊಬ್ಬರಾಗಿದ್ದರು. ಅವರ ಸಂಗೀತ ಕೇಳಲು ಬರುತ್ತಿದ್ದ ಇತರ ದಿಗ್ಗಜರಲ್ಲಿ ಹೀರಾಬಾಯಿ ಬೊಂದಾಡೆಕರ್, ಸುಂದರಬಾಯಿ, ಸವಾಯಿ ಗಂಧರ್ವ ಸೇರಿದ್ದರು.

ಗಂಗೂಬಾಯಿ ಅವರಿಗೆ ಗಾಯಕಿಯಾಗಬೇಕು ಎಂಬ ಆಕರ್ಷಣೆ ತಂದಿದ್ದೇ ತಾಯಿಯ ಈ ಸಂಗೀತ ಕಛೇರಿಗಳು. ಅವರು ವಾಸಿಸುತ್ತಿದ್ದ ಶುಕ್ರವಾರ ಪೇಟೆ ಆಗ ಬ್ರಾಹ್ಮಣರಿಂದ ತುಂಬಿತ್ತು. ಅವರಿಗೆಲ್ಲ ಹಾಡುವುದು ಎಂದರೆ ಕೀಳಾದ ಕಲೆ ಎಂಬ ಭಾವನೆ. ಗಂಗೂಬಾಯಿ ರಸ್ತೆಯಲ್ಲಿ ಬರುತ್ತಿದ್ದರೆ ಕೆಸರನ್ನು ಎರಚುವವರಿದ್ದರು. "ಅದೇ ಜನ ಮುಂದೆ ನನ್ನನ್ನು ಆದರಿಸಿದರು" ಎಂದು ಗಂಗೂಬಾಯಿ ನೆನಪು ಮಾಡಿಕೊಳ್ಳುತ್ತಾರೆ ತಾಯಿಯ ಹಾಡು ಕೇಳಲು ಬರುತ್ತಿದ್ದ ಅಬ್ದುಲ್ ಕರೀಂಖಾನರು ಬಾಲಕಿ ಗಂಗೂಬಾಯಿ ಹಾಡನ್ನು ಕೇಳಿ, ಕಂಠ ಚೆನ್ನಾಗಿದೆ, ಸಂಗೀತ ಕಲಿ ಎಂದರು. ಮಾತ್ರವಲ್ಲ ಸವಾಯಿ ಗಂಧರ್ವರಲ್ಲಿ ಕಲಿಕೆಗೂ ವ್ಯವಸ್ಥೆ ಮಾಡಿದರು. ಧಾರವಾಡದಿಂದ ಹುಬ್ಬಳ್ಳಿಗೆ ಮನೆ ಬದಲಾಯಿಸಿದ್ದ ತಾಯಿ ಗಂಗೂಬಾಯಿ ಅವರಿಗೆ ಹಲಗೂರು ಕೃಷ್ಣಚಾರ್ಯರ ಬಳಿ ಸಂಗೀತಾಭ್ಯಾಸಕ್ಕೆ ವ್ಯವಸ್ಥೆ ಮಾಡಿದ್ದರು. ಮುಂದೆ ಸವಾಯಿ ಗಂಧರ್ವರ ಬಳಿ ಕಲಿಯಲು ನಿತ್ಯ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ರೈಲು ಪ್ರಯಾಣ ಮಾಡುತ್ತಿದ್ದರು. ಪಂಡಿತ ಭೀಮಸೇನ ಜೋಶಿ ಅವರ ಜೊತೆಗಾರ, ಇವರಿಬ್ಬರ ಸಂಬಂಧ ಮುಂದೆ ಅಕ್ಕ-ತಮ್ಮಂದಿರಂತೆ ಗಾಢವಾಗಿ ಬೆಳೆಯಿತು.

1924ರ ಬೆಳಗಾವಿ ಅಧಿವೇಶನದಲ್ಲಿ ಮಹಾತ್ಮಗಾಂಧಿಯವರ ಸಮ್ಮುಖದಲ್ಲಿ

ಗಂಗೂಬಾಯಿ 'ಉದಯವಾಗಲಿ ಚೆಲುವ ಕನ್ನಡ ನಾಡು' ಹಾಡಿದರು, ಅದು ಅವರ ಬದುಕಿನ ರೀತಿಯನ್ನೇ ಬದಲಿಸಿತು. ಹಿನ್ನೆಲೆ ಗಾಯನ ಮಾತ್ರವಲ್ಲ ಮರಾಠಿ ಚಿತ್ರವೊಂದರಲ್ಲಿ ಗಂಗೂಬಾಯಿ ಹಾನಗಲ್ಲ ಎಂಬ ಹೆಸರಲ್ಲಿ ನಾಯಕಿಯಾಗಿ ಅಭಿನಯ ಕೂಡ ಮಾಡಿದರು. ಸವಾಯಿ ಗಂಧರ್ವರು ಗಂಗೂಬಾಯಿ ಅವರಿಗೆ ಬಹಳ ರಾಗವನ್ನೇನು ಕಲಿಸಲಿಲ್ಲ ಆದರೆ ಕಲಿತಿದ್ದರಲ್ಲಿ ಪೂರ್ಣತೆಗಳಿಸುವ ತುಡಿತ ಕಲಿಸಿದ್ದರು. ಇದರಿಂದ ಯಾವ ದಾರಿಯಲ್ಲಿ ಹೋದರೂ ಅವರ ಸಂಗೀತದ ಸಂಸ್ಕಾರ ಗಟ್ಟಿಯಾಗುತ್ತಲೇ ಹೋಯಿತು. 1929ರಲ್ಲಿ ವಕೀಲ ಗುರುರಾಝು ಕೌಲಗಿಯವರೊಂದಿಗೆ ವಿವಾಹವಾಯಿತು. ಈ ವಿವಾಹ ಗಂಗೂಬಾಯಿಯವರಿಗೆ ಬಲ ನೀಡಲಿಲ್ಲ. ಕಾರಣ ಕೌಲಗಿ ಎಂದಿಗೂ ಶಿಸ್ತುಬದ್ಧ ವಕೀಲರಾಗಿರಲಿಲ್ಲ. ಸಂಸಾರದ ಜವಾಬ್ದಾರಿಯನ್ನೂ ಹೋರಲಿಲ್ಲ. ಇದರಿಂದ ಸಂಸಾರ ನಡೆಸುವ ಅನಿವಾರ್ಯತೆಗೆ ಸಂಗೀತ ಕಛೇರಿಗಳನ್ನು ಒಪ್ಪಿಕೊಳ್ಳಲೇ ಬೇಕಾಯಿತು. ಚಿಕ್ಕ-ಮಕ್ಕಳನ್ನು ಕಟ್ಟಿಕೊಂಡು ಗಂಗೂಬಾಯಿ ಹೆಣಗಾಡಿದ್ದು ಅಷ್ಟಿಷ್ಟಲ್ಲ ಕೊನೆಗೆ ಮುಂಬೈ ಆಕಾಶವಾಣಿ ಕಛೇರಿಗಳು ಅವರಿಗೆ ಆರ್ಥಿಕ ಭದ್ರತೆ ತಂದವು ಅದಕ್ಕಾಗಿ ಮುಂಬೈನಲ್ಲಿ ಅವರು ಮನೆಯನ್ನು ಕೂಡ ಮಾಡಿದರು.

1938ರಲ್ಲಿ ಕಲ್ಕತ್ತೆಯಲ್ಲಿ ನಡೆದ 'ಸಂಗೀತ ಸಮ್ಮೇಳನಕ್ಕಾಗಿ ಗಂಗೂಬಾಯಿ ಅವರಿಗೆ ಕರೆ ಬಂದಿತು ಅಲ್ಲಿಂದ ಮುಂದೆ ಅವರ ಸಂಗೀತಯಾನ ದೇಶ-ವಿದೇಶಗಳನ್ನೆಲ್ಲಾ ವ್ಯಾಪಿಸಿತು. ಗಂಗೂಬಾಯಿ ಹಾನಗಲ್ಲರ ರಾಗ ನಿರೂಪಣಾ ಶೈಲಿಯು ಅಬ್ದುಲ್ ವಾಹೀದ್ ಖಾನರ ಪರಂಪರೆಯಿಂದ ಬಂದ 'ಮೇರು ಖಂಡ' ಪದ್ಧತಿಯಿಂದಲೇ ಪ್ರಭಾವಿತವಾಗಿತ್ತು. ಕಿರಾಣಾ ಘರಾಣೆಯ ಶೈಲಿಯ ಪ್ರಮುಖ ಅಂಶವೆಂದರೆ ಮಾಧುರ್ಯಕ್ಕೆ ಪ್ರಾಧಾನ್ಯ ನೀಡುವಿಕೆ, ಅಲಾಪ ಯುಕ್ತ ರಾಗಗಳಾದ ಮಿಯಾಕೀ ತೋಡಿ, ಭೀಮ್ ಪಲಾಸ್, ಮುಲ್ತಾನಿ, ಶುದ್ಧಕಲ್ಯಾಣ್, ಯಮಾನ್, ದರ್ಬಾರಿ ಮೊದಲಾದ ರಾಗಗಳ ಬಳಕೆ. ಗುರು ಸವಾಯಿ ಗಂಧರ್ವರು ಗಂಗೂಬಾಯಿಗೆ ಕಲಿಸಿದ್ದ ಮೂರು ಘನರಾಗಗಳಾದ ಮೀಯಾಕಿ ತೋಡಿ, ಪೂರ್ವಿ ಮತ್ತು ಮುಲ್ತಾನಿ ಆ ಮೂಲಕವೇ ಅವರು ಸಂಗೀತ ಸೌಧ ಕಟ್ಟುತ್ತಿದ್ದರು. ತಮ್ಮ ಗಂಡುಕಂಠದ ಶಾರೀರದಿಂದ ಮಾಧುರ್ಯಕ್ಕೆ ಘನತೆ ಬೆರೆಸಿದ ಗಂಗೂಬಾಯಿ ಹಲವು ವಿಸ್ತಾರಗಳನ್ನು ಸಾಧಿಸಿದರು. ಅವರ ರಾಗ ಶುದ್ಧತೆಯಿಂದ ಇದು ಪರಿಣಾಮವನ್ನು ಸಾಧಿಸಿತು. ಅವರೆಂದೂ ಸಂಭಾವನೆ ನೆಚ್ಚಲಿಲ್ಲ. ಕಲೆಯ ಬದ್ದತೆ ಕಳೆದುಕೊಳ್ಳಲಿಲ್ಲ. ಹಲವು ಜೀವನದ ಒತ್ತಡಗಳಲ್ಲಿ ಅವರಿಗೆ ಸಾಥ್ ನೀಡಿದ್ದು ಸಂಗೀತವೇ 'ಹಿಂದೂಸ್ತಾನಿ ಅನ್ನೋದು

ಎಲ್ಲೆಡೆ ಬರಬೇಕು' ಎಂಬುದಷ್ಟೇ ಆಕೆಯ ಕಾಳಜಿಯಾಗಿತ್ತು. ವಿಜೃಂಭಣೆಗೆ ಅವರೆಂದೂ ಗಮನ ನೀಡಲಿಲ್ಲ. ಅದಕ್ಕಾಗಿ ಲಘು ಸಂಗೀತಕ್ಕೆ ಗಮನ ಕೊಡಲಿಲ್ಲ. ಜನಪ್ರಿಯತೆ ಬೆನ್ನು ಹತ್ತಲಿಲ್ಲ ಬದಲಾಗಿ ಜನಪ್ರಿಯತೆ ಅವರನ್ನು ಹುಡುಕಿ ಬಂದಿತು.

'ಗಂಗೂಬಾಯಿ ಅವರಿಗೆ ನೂರು ವರ್ಷ ಬದುಕುತ್ತೇನೆ' ಎಂಬ ಭರವಸೆ ಇತ್ತು. ಬದುಕಿನ ಎಲ್ಲಾ ಘಟ್ಟದಲ್ಲೂ ಸ್ವಂತಿಕೆಯಿಂದ ಬೆಳೆದ ಅವರಿಗೆ ವಿಧಿ ಕೊನೆಗೆ ಈ ಆಸೆ ಈಡೇರಲು ಅವಕಾಶ ನೀಡಲಿಲ್ಲ.

ಗಂಗಜ್ಜಿ ನೂರರ ಗಡಿ ಮುಟ್ಟಲಿಲ್ಲ. ಆದರೆ ಅವರ ಸಂಗೀತಕ್ಕೆ ಸಾವಿರ ವರ್ಷವಾದರೂ ಅಳವಿಲ್ಲ.

ತುಂಗೆಯಲ್ಲಿ ಐಕ್ಯವಾದ "ಗಾಯನಗಂಗೆ"

ಎಂ.ಎ. ವೆಂಕಟೇಶ್

ಗಂಗೂಬಾಯಿ ಹಾನಗಲ್‌ರವರು ಮಾರ್ಚ5, 1913ರಂದು ರಾಣಿಬೆನ್ನೂರಿನ ಚಿಕ್ಕು ರಾವ್ ನಾಡಿಗೇರ ಮತ್ತು ಅಂಬಾಬಾಯಿಯವರ ಮಗಳಾಗಿ ಧಾರವಾಡದ ಶುಕ್ರವಾರ ಪೇಟೆಯಲ್ಲಿ ಜನಿಸಿದರು. 5ನೇ ಇಯತ್ತೆಯವರೆಗೆ ವ್ಯಾಸಂಗ ಮಾಡಿದ್ದರು. ತಾಯಿ ಕರ್ನಾಟಕ ಸಂಗೀತದ ಆರಾಧಕಿಯಾಗಿದ್ದರು. ಆದರೆ ಹಿಂದುಸ್ತಾನಿ ಸಂಗೀತವನ್ನೇ ಕಲಿಯಲು ಹೇಳಿ ಮಾರ್ಗದರ್ಶನ ಮಾಡಿದ್ದರು. ಗಂಗೂಬಾಯಿಯವರ ಜನ್ಮದ ಹೆಸರು "ಗಾಂಧಾರಿ" ಎಂಬುದಾಗಿದ್ದು ನಂತರ ಗಂಗೂಬಾಯಿ ಆಯಿತು. ತಮ್ಮ 16ನೇ ವಯಸ್ಸಿನಲ್ಲಿ ವಕೀಲ ಗುರುರಾಜ ಕೌಳಗಿಯವರನ್ನು ವಿವಾಹವಾದರು. ಮಗಳು ಕೃಷ್ಣಾ ಹಾನಗಲ್ ಮಗ ಬಾಬೂರಾವ್ ಹಾಗೂ ನಾರಾಯಣ್ ರಾವ್‌ರವರನ್ನು ಒಳಗೊಂಡ ಏಳು ಜನ ಮೊಮ್ಮಕ್ಕಳು, ಆರು ಜನ ಮರಿಮಕ್ಕಳನ್ನೊಳಗೊಂಡ "ಗಾಯನಗಂಗೆ" ಗಂಗೂ ಬಾಯಿ ಹಾನಗಲ್ಲರು, ಹಿಂದೂಸ್ತಾನಿ ಸಂಗೀತದ ಪರಂಪರೆಯ ಹೊಳೆಯುವ ನಕ್ಷತ್ರವಾಗಿದ್ದುದು 21.07.2009 ಮಂಗಳವಾರ ಬೆಳಕು ಹರಿಯುವ ಹೊತ್ತಿಗೆ ಕಳಚಿ ಬಿತ್ತು. ಸಂಗೀತಲೋಕದ ನಕ್ಷತ್ರ, ಎಲ್ಲರ "ಗಂಗಜ್ಜಿ" ಈ ಲೋಕದಿಂದ "ಮಾಯ"ವಾದರು.

"ಗಂಗಾಮಾಯಿ"ಯ "ಸಂಗೀತ ಸಾಗರ"ದಿಂದ ಆಯ್ದ ಅಣಿ ಮುತ್ತುಗಳನ್ನು ನೀಡುತ್ತಿದ್ದೇನೆ.

1857ರ ನರಗುಂದದ ಬಂಡಾಯದಲ್ಲಿ ಗಾಂಧಾರಿಯವರ ಅಜ್ಜಿ ಗಂಗವ್ವನವರ ಪತಿ ನರಗುಂದದಲ್ಲಿ ಮುನ್ನೀಫರಾಗಿದ್ದಾಗ ಬ್ರಿಟಿಷರು ಬಂಧಿಸಲು ಬಂದಾಗ ಬೇರೆ ಪ್ರಾಂತ್ಯಕ್ಕೆ ಹೋಗಿದ್ದರು. ಗಂಗವ್ವನನ್ನು ಪರಿ ಪರಿಯಾಗಿ ಕಾಡಿದಾಗ ಆಕೆಯು ಕುದುರೆಯೇರಿ ಹಾನಗಲ್‌ಗೆ ಪಲಾಯನ ಗೈದು ಅಲ್ಲಿಯೇ ನೆಲೆಸಿದರು. ಆದುದರಿಂದ ಅಜ್ಜಿಯ ಹೆಸರನ್ನೇ ಪಡೆದು "ಗಂಗೂ ಬಾಯಿ" ಎಂದಾದರು.

ತಾಯಿ ಅಂಬಾಬಾಯಿ ಹಾಡುಗಾರ್ತಿ ಯಾಗಿದ್ದುದರಿಂದ ಅನೇಕ ಸಂಗೀತಗಾರರು ಮನೆಗೆ ಬರುತ್ತಿದ್ದರು. ಹಾಗೆ ಬಂದವರಲ್ಲಿ ಕಿರಾಣಾ

ಘರಾಣೆಯ ಸಂಸ್ಥಾಪಕ ಅಬ್ದುಲ್ ಕರೀಂ ಖಾನರು ತಮ್ಮ ಹಾಡಿನಲ್ಲಿ ಸರಗಮ್ ಸೇರಿಸಿ ಹಾಡುತ್ತಿದ್ದರು. ಒಮ್ಮೆ ಎಳೆಯ ಬಾಲಕಿ ಗಂಗೂ ಬಾಯಿಗೂ ಹಾಡಲು ಹೇಳಿದರು. ಬಾಲಕಿ ಹಾಡಿದಾಗ ಬಹಳ ಖುಷಿಪಟ್ಟು ಬೆನ್ನು ಸವರಿದರು. 1924ರ ಬೆಳಗಾವಿ ಕಾಂಗ್ರೇಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧಿ ಸಮ್ಮುಖದಲ್ಲಿ 4ನೇ ಇಯತ್ತೆಯಲ್ಲಿದ್ದ 11 ವರ್ಷದ ಬಾಲಕಿ "ಸ್ವಾಗತವು ಸ್ವಾಗತವು ಸಕಲ ಜನ ಸಂಕುಲಕೆ" (ಮೊದಲು ಉದಯವಾಗಲಿ ಚೆಲುವ ಕನ್ನಡ ನಾಡು ಎಂದಿದ್ದುದನ್ನು ಬದಲಾಯಿಸಿ ಮೇಲಿನ ಗೀತೆಯನ್ನು ಹಾಡಲು ಹೇಳಿದರು) ಎಂದು ಪ್ರಥಮ ಬಾರಿಗೆ ಸಾರ್ವಜನಿಕವಾಗಿ ಹಾಡಿದ್ದರು.

1923ರಲ್ಲಿ 10 ವರ್ಷದ ಬಾಲೆ ಗಂಗೂ ಬಾಯಿ ಹಾನಗಲ್‌ರವರು ಹಿಂದೂಸ್ತಾನಿ ಸಂಗೀತದಲ್ಲಿ ಹಿಮಾಲಯದೆತ್ತರಕ್ಕೆ ಸಾಧನೆ ಮಾಡಲು ಸಾಕಾರರಾದವರು ತಾಯಿ ಅಂಬಾಬಾಯಿ. ತಾವು ಹಾಡುತ್ತಿದ್ದ ಕರ್ನಾಟಕ ಸಂಗೀತ ಹಾಡುವುದನ್ನೇ ತ್ಯಾಗ ಮಾಡಿ, ಮಗಳ ಹಿಂದೂಸ್ತಾನಿ ಸಂಗೀತ ಗಾಯನದ ಜ್ಞಾನ ಜ್ಯೋತಿಗೆ ತೈಲವಾದರು. ತಾಯಿ ಅಂಬಾಬಾಯಿಯ ಪ್ರೋತ್ಸಾಹ ಮತ್ತು ಸತತ ಅನ್ವೇಷಣೆಯಿಂದ ಗಂಗೂಬಾಯಿ ಓರ್ವ ಸಂಗೀತಗಾರರಾಗಲು ಕಾರಣವಾಯಿತು.

1924-25 ರಲ್ಲಿ ಧಾರವಾಡದಿಂದ ಹುಬ್ಬಳ್ಳಿಗೆ ಬಂದು ಕೃಷ್ಣಾಚಾರ್ಯರಿಂದ ಸಂಗೀತ ಪಾಠ ನಡೆಸಲಿಕ್ಕೆ ತಿಂಗಳಿಗೆ 10.ರೂ ನಂತೆ, ಒಮ್ಮೆಲೆ ನೂರಾರು ರೂ.ಗಳನ್ನು ಕೊಡಲು ತಾಯಿಯವರು ತಮ್ಮ ಬಂಗಾರದ ಬಿಲ್ವರಗಳನ್ನು ಮಾರಬೇಕಾಯಿತು. ಆದರೆ ಗುರುಗಳ ಮುನಿಸಿನಿಂದ ಪಾಠ ಅರ್ಧಕ್ಕೆ ನಿಂತು ಮತ್ತೆ ಧಾರಾವಾಡಕ್ಕೆ ಮರಳಿದರು. ಎರಡು ವರ್ಷಗಳವರೆಗೆ ಉತ್ತಮ ಗುರುಗಳು ಸಿಗದೆ ಗಂಗೂಬಾಯಿಯವರು ಕಥಕ್ ನೃತ್ಯ ಮತ್ತು ಠುಮ್ರಿ ಗಜಲ್ ಕಲಿಯುತ್ತಿದ್ದರು.

ಸವಾಯಿ ಗಂಧರ್ವರು ಅಬಿನಯಿಸುತ್ತಿದ್ದ ಕಂಪನಿ ಒಮ್ಮೆ ಹುಬ್ಬಳ್ಳಿಗೆ ಬಂದಾಗ, ಗಂಗೂಬಾಯಿ ಹುಬ್ಬಳ್ಳಿಗೇ ಹಿಂತಿರುಗಿ ದತ್ತೋ ಪಂತ ದೇಸಾಯಿ ಮೂಲಕ, ತಮ್ಮನ್ನು ಶಿಷ್ಯೆಯನ್ನಾಗಿ ಸ್ವೀಕರಿಸಲು ಕೇಳಿಕೊಂಡರು. ಅವರು ತಾನಿರುವುದು ಪುಣೆ-ಮುಂಬಯಿಯಲ್ಲಿ ಹ್ಯಾಗ ಕಲಿಸೋದೆಂದಾಗ "ನೀವು ಹುಬ್ಬಳ್ಳಿಗೆ ಬಂದಾಗಷ್ಟೆ ಹೇಳಿಕೊಟ್ಟರೆ ಸಾಕು" ಎಂದು ಹೇಳಿದ್ದರು. ಸವಾಯಿ ಗಂಧರ್ವರು ಬಾಲಕಿಯನ್ನು ತಮ್ಮ ಶಿಷ್ಯೆಯಾಗಿ ಒಪ್ಪಿಸಿಕೊಂಡು ಅವರಿಗೆ

"ಗಿರಿ ಬಿನ ಕೈಸೆ ಗನಗಾವೆ?" ಎಂಬ ಚೀಸ್ ಹೇಳಿಕೊಟ್ಟು ಪ್ರತಿದಿನ ಬೆಳಗ್ಗೆ ಖರ್ಜ್ ಪ್ರಾಕ್ಟೀಸ್ ಮಾಡಲು ಹೇಳಿದರು. ಸೋದರಮಾವ ರಾಮಣ್ಣನವರ ಪ್ರೋತ್ಸಾಹದಿಂದ, ದತ್ತೋ ಪಂಡಿತ ದೇಸಾಯಿಯವರ ಮಾರ್ಗದರ್ಶನದಿಂದ, ಏಕಲವ್ಯನಂತೆ ತಮ್ಮ ಸಾಧನೆಯಲ್ಲಿ ತೊಡಗಿಸಿಕೊಂಡರು. ಗುರುಗಳು ಆಗೀಗ ಬಂದಾಗ ಪಾಠ ಹೇಳುತ್ತಿದ್ದರು. ಸವಾಯಿ ಗಂಧರ್ವರು ಕುಂದಗೋಳದಲ್ಲಿಯೇ ನೆಲೆಸಿದಾಗ ಪ್ರತಿದಿನ ಬೆಳಗ್ಗೆ ಸಮೀಪದ ಕುಂದಗೋಳಿಗೆ ಹೋಗಿ ರಾತ್ರಿಯವರೆಗೂ ಅಭ್ಯಸಿಸಿ ಹಿಂತಿರುಗುತ್ತಿದ್ದರು. ಇದಕ್ಕೆ ಸೋದರ ಮಾವ ರಾಮಣ್ಣನವರು ಜೊತೆಯಾಗಿರುತ್ತಾ ಐದು ವರ್ಷಗಳ ಕಾಲ ಸತತ-ಅಭ್ಯಾಸ ಪಡೆದರು.

ಮಗಳ ಸಾಧನೆಯಿಂದ ತಾಯಿಯವರಿಗೆ ಸಂತೋಷವಾದರೂ, ಆ ಸಂತೋಷ ಬಹಳ ದಿನ ನಿಲ್ಲಲಿಲ್ಲ. ಅದಕ್ಕೆ ಕಾರಣ ಅಂಬಾಬಾಯಿಯವರ ಹೊಟ್ಟೆ ಹುಣ್ಣು(ಅಲ್ಸರ್) ವಿಪರೀತವಾಗಿ ಅವರು ತೀರಿಕೊಂಡರು. ಆದರೆ H.M.V ರವರು ತಾಯಿ-ಮಗಳು ಇಬ್ಬರನ್ನೂ ತಮ್ಮ ಡಿಸ್ಕ್‌ಗಳಿಗಾಗಿ ಕೇಳಿದ್ದರು. ತಾಯಿಯ ನಿಧನದ ನಂತರ ಕೆಲವು ಕಾಲ ಹಾಡುಗಾರಿಕೆಯನ್ನು ನಿಲ್ಲಿಸಿದಾಗ. ರಾಮಣ್ಣ ಮತ್ತು ದತ್ತೋ ಪಂತರ ಒತ್ತಾಯದಿಂದ "ಅವ್ವನ ಆತ್ಮಕ ಶಾಂತಿ ಸಿಗಬೇಕಂದ್ರೆ ನಾ ಸಾಧನೆ ಮುಂದುವರಿಸುವುದು ಅವಶ್ಯಿತ್ತು." ಎಂದು ಹೇಳಿದರು. 1932 ರಲ್ಲಿ ಮುಂಬೈಗೆ ಹೋಗಿ H.M.V ಕಂಪನಿಯಲ್ಲಿ ಹಾಡಿದರು. ಪ್ರಥಮ ಡಿಸ್ಕ್‌ಗಳು "ಗಂಗೂಬಾಯಿ ಹುಬ್ಬಳ್ಳೀಕರ್ ಮತ್ತು "ಗಾಂಧಾರಿ ಹುಬ್ಬಳ್ಳಿಕರ್" ಆಗಿತ್ತು. ಸೋದರಮಾವ ರಾಮಣ್ಣನವರು ಹುಬ್ಬಳ್ಳಿಯ ಹೆಸರಿನಲ್ಲಿ ಯಾಕೆ ಹಾಡಿದೆ ಹೇಳಿದಾಗ ನಂತರದ ಡಿಸ್ಕ್‌ಗಳು "ಗಂಗೂಬಾಯಿ ಹಾನಗಲ್" ಎಂತಲೇ ಬಂದವು.

ಈ ರೆಕಾರ್ಡುಗಳಿಂದ ಅವರಿಗೆ ಗಾಯನಕ್ಕೆ ಆಹ್ವಾನಗಳು ಬರಲು ಪ್ರಾರಂಭವಾಗಿ, ಪ್ರಥಮವಾಗಿ ಆಕಾಶ ವಾಣಿಯಲ್ಲಿ ಅವರು ಹಾಡಿದ್ದುದನ್ನು ಕೇಳಿದ ಸವಾಯಿ ಗಂಧರ್ವರು ಅದರಲ್ಲಿದ್ದ ನ್ಯೂನತೆಗಳನ್ನು ತಿದ್ದಿ ತೀಡಿದರು. ಈ ತಿದ್ದುವಿಕೆಯಿಂದ ಗಂಗೂಬಾಯಿಯವರು ಕಿರಾಣಿ ಘರಾಣಾ ಧ್ವಜವನ್ನು ಭಾರತದ ಉದ್ದಗಲಕ್ಕೂ ಎತ್ತಿ ಹಿಡಿದು ಆಕಾಶವಾಣಿ ಸಂಗೀತ ಸಮ್ಮೇಳನದ ಅವಿಭಾಜ್ಯ ಅಂಗವೇ ಆಗಿಬಿಟ್ಟರು. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬಂತೆ, ಸವಾಯಿ ಗಂಧರ್ವರು ಪಾರ್ಶ್ವವಾಯು ಪೀಡಿತರಾದಾಗ ತಮ್ಮ ಮನೆಯಲ್ಲಿ ಇಟ್ಟುಕೊಂಡು ಭಕ್ತಿಯಿಂದ ಅವರ ಮರಣದ ಕಾಲದವರೆಗೂ (1952) ಸೇವೆಗೈದರು.

ವಾಮನ ವರ್ಟೀಕರ್‌ರವರ "ವಿಜಯಾ ಚೀಲಗ್ನ" ಎಂಬ ಮರಾಠಿ ಸಿನಿಮಾದಲ್ಲಿ ಅವರು ಗಾಯಕಿಯಾಗಿಯೂ ಅಭಿನಯಿಸಿದ್ದರು.

ಅಂದಿನ ದಿನಗಳಲ್ಲಿ ಮುಂಬಯಿ ಆಕಾಶವಾಣಿ ಕೇಂದ್ರ ಹಿಂದೂಸ್ಥಾನಿ ಸಂಗೀತಕ್ಕೆ ಪ್ರಸಿದ್ಧವಾಗಿತ್ತು. ಕಲ್ಕತ್ತಾ ಮತ್ತು ಮದರಾಸು ಕೇಂದ್ರಗಳು ಈ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತಿದ್ದವು. ಬಹುತೇಕ ಕಾರ್ಯಕ್ರಮಗಳು ನೇರ ಪ್ರಸಾರವಾಗುತ್ತಿದ್ದವು. ಒಮ್ಮೆ ಹೀರಾಬಾಯಿ ಬಡೋದಕರ ಹಾಡಬೇಕಾಗಿ ಬರಬೇಕಾದಾಗ ಅನಾರೋಗ್ಯ ನಿಮಿತ್ತ ಬರಲಾಗಲಿಲ್ಲ. ಅಚಾನಕ್ಕಾಗಿ ಅಲ್ಲಿಗೆ ಬಂದ ಆಪತ್ತಂದು ಯುವ ಗಾಯಕಿಯೊಬ್ಬರಿಂದ "ಮೀಯಾ ಮಲ್ಹಾರ" ಹಾಡಿಸಿದರು. ಮೆಚ್ಚಿದ ಶ್ರೋತೃಗಳಿಂದ ಗಾಯಕಿಯ ಬಗ್ಗೆ ದೂರವಾಣಿ ಕರೆಗಳು ಬಂದಾಗ ಹಾಡಿನ ಮಧ್ಯದಲ್ಲಿಯೇ ಗಂಗೂಬಾಯಿ ಹೆಸರನ್ನು ಬಿತ್ತರಿಸಲಾಯಿತು. ಅಂದಿನಿಂದಲೇ ಮುಂಬೈ ಆಕಾಶವಾಣಿಗೆ ಅನೇಕ ಬಾರಿ ಆಮಂತ್ರಿತರಾಗಿ ಹಾಡಿದ್ದಾರೆ. 1933ರಲ್ಲಿ ಪ್ರಥಮ ಕಾರ್ಯಕ್ರಮಕ್ಕೆ 25ರೂಪಾಯಿ ಸಂಭಾವನೆ ಪಡೆದದ್ದ ಗಂಗೂಬಾಯಿಯವರಿಗೆ ಮುಂದೆ ಕಚೇರಿಯೊಂದಕ್ಕೆ 125ರೂಗಳನ್ನು ನೀಡಿದಾಗ ಆದ ಸಂತೋಷಕ್ಕೆ ಎಣೆಯೆ ಇಲ್ಲ. ಆಕಾಶವಾಣಿಯ ಜೊತೆ 7ದಶಕಗಳ ಕಾಲ ಸಾಥ್ ನೀಡಿದ್ದರು.

1938ರಲ್ಲಿ ಆಕಾಶವಾಣಿ ದೆಹಲಿ ಕೇಂದ್ರದಿಂದ ಹಾಡಲು ಕರೆ ಬಂದಾಗ, ತೆಳುವಾದ ಶರೀರದ, ಒಂಬತ್ತು ಮೊಳ ಸಾದಾ ಸೀರೆ ಉಟ್ಟಿದ್ದ ಯುವತಿಯನ್ನು ಕಂಡು ಅಲ್ಲಿಯ ಸಿಬ್ಬಂದಿಗೆಇವರೇ ಗಾಯಕಿ ಎನಿಸದೆ ವೈಟಿಂಗ್ ರೂಂನಲ್ಲಿ ಕೂರಿಸಿದ್ದರು. ಪ್ರಸಾರದ ವೇಳೆಯಾದಾಗಲೂ ನಿರ್ದೇಶಕರು ಚಡಪಡಿಸುತ್ತಿದ್ದಾಗ, ಅಲ್ಲಿದ್ದವರು ಓರ್ವ ಮಹಿಳೆ ಅರ್ಧಗಂಟೆಯಿಂದಲೂ ವೈಟಿಂಗ್ ರೂಂನಲ್ಲಿದ್ದಾರೆ ಎಂದಾಗ, ಗಂಗೂಬಾಯಿ ಪರಿಚಯವಿದ್ದ ನಿರ್ದೇಶಕರು ತಮ್ಮಿಂದ ಆದ ತಪ್ಪಿಗೆ ಕ್ಷಮಾಪಣೆ ಕೇಳಿ ಅವರಿಂದ ಹಾಡಿಸಿದ್ದರು.

ಮೊದಮೊದಲು ಇಂಪಾಗಿದ್ದ ಧ್ವನಿ 40ನೇ ವರ್ಷದಲ್ಲಿ ಗಂಟಲಿನ ಟಾನ್ಸಿಲ್ ಶಸ್ತ್ರ ಚಿಕಿತ್ಸೆಯ ನಂತರ ಸರಿಯಾದರೂ ಧ್ವನಿ ಗಡುಸಾಗಿ ಗಂಡು ಧ್ವನಿಯಾಯಿತು. ಆ ಗಡುಸು ಧ್ವನಿಯನ್ನೇ ತಮ್ಮ ಹಾಡುಗಳಿಗೆ ಅಳವಡಿಸಿ ಹಿಂದಿನ ಮಾಧುರ್ಯವನ್ನೇ ಹರಿಸಿದ್ದಾರೆ.

ಪತಿ ಕೌಳಗಿ ಗುರುರಾಯರು 6.3.1966 ರಂದು ತೀರಿಕೊಂಡಾಗ ಹಾಡುವುದನ್ನು ಬಿಟ್ಟಿದ್ದರು. ಆದರೆ ರಾಷ್ಟ್ರೀಯ ಸೇವಾ ದಳದ ಡಾ:ನಾ.ಸು.

ಹರ್ಡಿಕರರವರು "ನೀನು ಖಾಯಂ ಆಗಿ ಹಾಡುವುದನ್ನು ಬಿಡುವುದಾದರೆ ಬಿಟ್ಟು ಬಿಡು, ಆದರೆ ಇಷ್ಟು ದಿನ ಹಾಡಿನಲ್ಲಿ ತನ್ಮಯತೆ ಪಡೆದು ಮನ್ನಣೆ ಸಂಪಾದಿಸಿದಾಗ ಮನೆಯಲ್ಲಿ ಕುಳಿತಿರದೆ ಹಾಡಬೇಕು." ಎಂದು ಬುದ್ಧಿವಾದ ಹೇಳಿದಾಗ ತಮ್ಮ ಸಂಗೀತವನ್ನು ಮುಂದುವರಿಸಿದರು.

"ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು" ಎಂಬ ಗಾದೆ ಗಂಗೂಬಾಯಿಯವರಿಗೂ ಅನ್ವಯಿಸುತ್ತದೆ. ಸರಳತೆಯೇ ಮೂರ್ತಿಯಾಗಿರುವ, ಅತ್ಯಂತ ಸಾಧಾರಣ ವೇಷಭೂಷಣ ಧರಿಸಿರುವ, ಶರೀರ ಕೃಶವಾದರೂ ಶಾರೀರ ಗಟ್ಟಿಯಾಗಿದ್ದು ಹಾಡುಗಾರಿಕೆಯಲ್ಲಿ ನಭೋಮಂಡಲವನ್ನೇ ಮುಟ್ಟಿದ್ದಾರೆ ಹಾನಗಲ್‌ರವರು.

ಗಂಗಾನದಿಯು ಉತ್ತರದಿಂದ ದಕ್ಷಿಣಕ್ಕೆ ಹರಿದರೆ, ನಮ್ಮ ಕರ್ನಾಟಕದ ಗಂಗೂಬಾಯಿ ಹಾನಗಲ್‌ರವರು ತಮ್ಮ ಕಿರಣ ಘರಾಣೆಯ ಹಿಂದೂಸ್ತಾನಿ ಸಂಗೀತದಿಂದ ದಕ್ಷಿಣದಿಂದ ಉತ್ತರಕ್ಕೆ ಹರಿವ ಗಾಯನ ಗಂಗೆಯಾಗಿದ್ದರು.

"ನನ್ನ ಬದುಕಿನ ಹಾಡು"ಗಾಯನ ಗಂಗೆಯ ಬದುಕಿನ ಏರಿಳಿತಗಳ ಜೊತೆಗೆ, ಸಂಗೀತಲೋಕದ ಇತಿಹಾಸವನ್ನು ತೆರೆದಿಟ್ಟಿರುವ ಎನ್ಕೆಯವರ ನಿರೂಪಣೆಯ ಅಪರೂಪದ ಪುಸ್ತಕ.

ನಾನಾ ಪಾಟೇಕರ್ ಹೇಳುತ್ತಾರೆ "ನೀನು ನನಗೇನಾಗಬೇಕೆಂದು ನಾನು ಹೇಗೆ ಹೇಳಲಿ ಆಯಿ? ನೀನು ನನ್ನ ಜೀವನದ ಸಂಗೀತ, ನನ್ನ ಅಮ್ಮ, ನನ್ನ ಹೆತ್ತವ್ವ, ಈ ತಾಯಿ ಗೇಣುದ್ದಳಿದ್ದಾಳೆ, ಆದರೆ ಆಕೆ ಏರಿದ ಎತ್ತರಕ್ಕೆ ನಾನು ಹೋಗಲಾರೆ ಅನ್ನಿಸುತ್ತದೆ. ನಿನ್ನ ಗಾಯನ ಗಂಗೆ ಹರಿಯುತ್ತಲೇ ಇರಬೇಕು." ಎಂದು 95 ವರ್ಷದ ಸಮಾರಂಭದಲ್ಲಿ ನೆನೆಸಿದರು. ಶಾಲಾ ದಿನಗಳಲ್ಲಿ ಜೆ.ಜೆ. ಕಾಲೇಜಿನಲ್ಲಿ ಓದುತ್ತಿದ್ದಾಗ ಗಂಗೂಬಾಯಿಯವರ ಗಾಯನ ಏರ್ಪಾಡಾಗಿತ್ತು. ನಾವು ಒಂದಿಷ್ಟು ಜನ ಪುಂಡು ಹುಡುಗರು ಗಲಾಟೆ ಮಾಡಿ ಕಾರ್ಯಕ್ರಮ ಕೆಡಿಸುವ ಉದ್ದೇಶದಿಂದ ಅಲ್ಲಿದ್ದೆವು. ಗಾಯನ ಪ್ರಾರಂಭವಾಯಿತು. ಐದು ನಿಮಿಷ ನೋಡೋಣವೆಂದೆ, ಹಾಗೆಯೇ ಹತ್ತು ನಿಮಿಷವಾಯಿತು. ಮುಂದೆ ಒಂದು ಗಂಟೆ ಹಾಡಾಯಿತು. ನಾವೆಲ್ಲ ಪುಂಡಾಟಿಕೆ ಮರೆತು ಹಾಡು ಕೇಳುತ್ತಲೇ ಇದ್ದೇವೆ. ಅಂದಿನಿಂದ ಈಕೆ ನನಗೂ ಆಯಿ ಆದಳು.

ಗಂಗೂಬಾಯಿಯವರ ಗಾಯನ ಬಹಳವ ಪರಿಶುದ್ಧ, ಸಮೃಧ ಹಾಗೂ ಸಂಪ್ರದಾಯ ಬದ್ಧ, ತಮ್ಮ ಗುರುಗಳಾದ ಸವಾಯಿ ಗಂಧರ್ವರ ಶೈಲಿ ಹಾಗೂ ಚೌಕಟ್ಟಿನಿಂದ ಸ್ವಲ್ಪವೂ ಆಚೀಚೆ ಸರಿದವರಲ್ಲ. ಬೇರೆಯ ಹಾಗೂ ಸಮಕಾಲೀನ ಶೈಲಿ ಹಾಗೂ ಘರಾನೆಗಳಿಂದ ಪ್ರಭಾವಿತರಾಗದೆ ತಮ್ಮ ಪರಂಪರೆ ಹಾಗೂ ಸ್ವಂತಿಕೆಯ ಛಾಪು ಉಳಿಸಿಕೊಂಡು, ಬೆಳೆಸಿಕೊಂಡು ಬಂದವರು.

"ನಾನು ಹಾಡಲು ಪ್ರಾರಂಭಿಸಿದಾಗ, ಸಂಗೀತ ಭಾವಲಹರಿಗಳು ನನ್ನ ಹೃದಯದೊಳಗಿನಿಂದಲೇ ಉದಯಿಸಿ ಬರುತ್ತದೆ. ಸಂಗೀತ ಮಾಧ್ಯಮದ ಮೂಲಕ ಜನತೆಗೆ ನಾನು ಹೇಳ ಬಯಸುವ ಭಾವನೆಗಳನ್ನು ಅರುಹುತ್ತೇನೆ. ಒಂದು ವೇಳೆ ಅಂಥ ಸಂಗೀತವನ್ನು ನಾನು ನಿಲ್ಲಿಸಿಬಿಟ್ಟರೆ ಆ ಭಾವನೆಗಳನ್ನು ಹತ್ತೆಗ್ಯೆದಂತಾಗುತ್ತದೆ. ಆಲ್ಲಿಯೇ ನನ್ನ ಸಂಗೀತವೂ ಸತ್ತು ಹೋಗುತ್ತದೆ". ಶ್ರೋತೃಗಳು ಬೇರೆ ಪ್ರಕಾರದ ಸಂಗೀತ(ಲಘು ಸಂಗೀತ)ವನ್ನು ಹಾಡಲು ಹೇಳಿದಾಗ ಹೀಗೆ ಹೇಳಿದ್ದರು.

ಗಂಗಾ ನದಿ ದೇಶದಲ್ಲಿ ಮಾತ್ರ ಹರಿದಿದ್ದರೆ, ಕನ್ನಡ ನಾಡಲ್ಲಿ ಹುಟ್ಟಿದ ಈ ಗಾಯನ ಗಂಗೆ ದೇಶ ಬಿಟ್ಟು ವಿದೇಶಾದ್ಯಂತ ಹರಿದಿದೆ. "ಸಂಗೀತಕ್ಕೆ ಭಾಷೆ ಇಲ್ಲ. ನಾ ಅಮೆರಿಕಾ. ಕೆನಡಾ. ಪ್ಯಾರೀಸ್, ಹಾಲೆಂಡ್, ಲಂಡನ್, ಜರ್ಮನಿ. ನೇಪಾಳ ಮತ್ತು ಪಾಕಿಸ್ತಾನದಲ್ಲೆಲ್ಲಾ ಹಾಡಿ ಬಂದೀನಿ. ತಿರುಗಿ ಬಂದಾಗ ಹುಬ್ಬಳ್ಳಿಯಾಗ ಯಾರೋ ಕೇಳಿದ್ರು, ಕನ್ನಡದಾಕಿ ನಿಂಗ ಇಂಗ್ಲೀಷ್ ಬರೊದಿಲ್ಲ ಅವರಿಗೆ ನಿನ್ನ ಹಾಡು ಅರ್ಥವಾಯ್ತಾಂತ..... ಅದಕ ನಾ ಹೇಳಿದಿ ನಂಗ ಅವರ ಭಾಷಾ ತಿಳಿಯೋದಿಲ್ಲ ಆದರ, ಅವರಿಗೆ ನನ್ನ ಭಾಷಾ ತಿಳೀತಂತೆ"ಎಂದು ಕನ್ನಡ ಭವನದ ಮನೆಯಂಗಳದ ಮಾತುಕತೆಯಲ್ಲಿ ಹೇಳಿದ್ದಾರೆ. ಸಂಗೀತಕ್ಕೆ ಭಾಷೆಯೇ? "ಸುರ್ ಗಯಾ ತೋ ಸಿರ್ ಗಯಾ" ಕಿವಿಗೆ ಯಾವುದು ಇಂಪಾಗಿ ಕೇಳುತ್ತೋ ಅದೇ ಸಂಗೀತ. ಒಬ್ಬ ಹೆಂಗಸು ದೇಶ ವಿದೇಶಗಳಲ್ಲಿ ಸುತ್ತಾಡಿ ಸಂಗೀತದಲ್ಲಿ ಇತಿಹಾಸ ನಿರ್ಮಿಸಿದ್ದು ನಮಗೆಲ್ಲ ಹೆಮ್ಮೆಯ ವಿಷಯ.

ಗಂಗೂಬಾಯಿ ಹಾನಗಲ್ಲರ ದೈನಂದಿನ ಚಟುವಟಿಕೆ ಈರೀತಿ ಇತ್ತು. 7ಗಂಟೆಗೆ ಎದ್ದು ಒಂದು ಲೋಟ ಬಿಸಿ ನೀರು ಕುಡಿಯುತ್ತಾರೆ. ನಂತರ ಎಲ್ಲಾ ಪತ್ರಿಕೆಗಳ ಅವಲೋಕನ, ಸ್ನಾನಾ ನಂತರ ತಿಂಡಿ(ಉಪ್ಪಿಟ್ಟು, ಇಡ್ಲಿ, ದೋಸೆ, ಅವಲಕ್ಕಿ) ತಿನ್ನುತ್ತಾರೆ. ಹತ್ತು ಗಂಟೆಗೆ ಭೇಟಿಯಾಗಲು ಬಂದವರೊಂದಿಗೆ ಮಾತುಕತೆ, ಮಧ್ಯಾಹ್ನ 1.00ಗಂಟೆಗೆ ಊಟ (ಮೆತ್ತನೆಯ

ಅನ್ನ ಅಥವಾ ಗಂಜಿ, ತುಪ್ಪ, ಚಟ್ನಿ ಪುಡಿ) ಸಂಜೆ ಸೇಬು ಹಾಲಿನ ಜ್ಯೂಸ್. ರಾತ್ರಿ ಊಟವೂ ಸಹ ಬೆಳಗಿನಂತೆಯೇ. ಅವರಿಗೆ ಇಷ್ಟವಾದದ್ದು ಐಸ್‌ಕ್ರೀಂ ಮತ್ತು ಹೋಳಿಗೆ. ಬೇರೆ ಊರುಗಳಿಗೆ ಹೋಗುವಾಗ ಹೋಟಲ್‌ಗಳಿಗೆ ಹೋಗದೆ ಪರಿಚಯದವರ ಮನೆಯಲ್ಲಿಯೇ ಇಳಿಯುತ್ತಾರೆ. ತಮ್ಮ ಜೊತೆ ತುಪ್ಪ, ಚಟ್ನಿಪುಡಿ ಒಯ್ಯುತ್ತಿದ್ದರು.

"ನಾನೇನು ಸಕ್ರಿ ತುಪ್ಪದಾಗ ಕೈ ತೊಳೆದವಳಲ್ಲ ಬಡವರ ಮಗಳಾಗಿ ಬೆಳೆದವಳು. ನನ್ನ ಬದುಕು ಬಡತನದ ಝಳತಾಗಿಸಿಕೊಂಡೇ ಸಾಗಿ ಬಂದಿದೆ. ಬದುಕಿನ ಸಿಹಿ-ಕಹಿ, ಸುಖ-ದುಃಖ ಇವೆಲ್ಲಾ ಅನುಭವಗಳ ಆರ್ಕೆಸ್ಟ್ರಾ, ಕೆಲವು ಕಹಿ-ದುಃಖ ಕ್ಷಣಿಕ "ಎಂದು ಗಂಗಜ್ಜಿ ಹೇಳುತ್ತಾರೆ. ನಮ್ಮ ಹಿಂದಿನವರು ಹೇಳುವಂತೆ "ಬರೀ ವಯಸ್ಸಾದರೆ ಸಾಲದು ಅನುಭವ ಬೇಕು"ಅನ್ನೋದು. ಇಂತಹ ಅನುಭವ ಗಂಗೂಬಾಯಿಯವರಲ್ಲಿ ಅಪಾರವಾಗಿದೆ. "ಸಂಗೀತ ಉಳೀಬೇಕು, ಬೆಳೀಬೇಕು ಅದಾ ನನ್ನ ಆಸೆ, ಆದ್ರ ಕೇಳವ್ರನ್ನು ಬೆಳೆಸಿದ್ರೆ ಸಂಗೀತ ಬೆಳೀತದೆ. ಆದ್ರ ಕೇಳೋವ್ರು ಇಲ್ಲದಿದ್ರೆ ಹಾಡೋದು ಹ್ಯಾಂಗ" ಗಂಗೂಬಾಯಿ ಹಾನಗಲ್ ಪ್ರಶ್ನೆ?

ರಾಜ್ಯ ಸಂಗೀತ ನೃತ್ಯ ಅಕಾಡಮಿಯ ಅಧ್ಯಕ್ಷರಾಗಿದ್ದಾಗ ಅವರು "ಇಷ್ಟು ದಿನ ಹಾಡುಗಾರ್ತಿಯಾಗಿ ಹೊಗಳಿಸಿಕೊಳ್ಳುವ ಗ್ರಹ, ಈಗ ಅಧ್ಯಕ್ಷೆಯಾಗಿ ಬೈಸಿಕೊಳ್ಳುವ ಗ್ರಹ" ಎಂದು ತಮ್ಮ ಅಧ್ಯಕ್ಷಗಿರಿ ಬಗ್ಗೆ ತಮಾಷೆ ಮಾಡುತ್ತಿದ್ದರು. ಅಕಾಡಮಿಯ ಅಧ್ಯಕ್ಷರಾದಾಗ ನಾಡು-ನುಡಿ ಪ್ರಶ್ನೆ ಎದುರಾಗಿ, ಅಕಾಡಮಿಯ ಅಧ್ಯಕ್ಷತೆಯನ್ನೆ ತ್ಯಜಿಸಿ ಗೋಕಾಕ ಚಳುವಳಿಯಲ್ಲಿ ಧುಮುಕಿದ ಧೀಮಂತ ಮಹಿಳೆ. ಹಾಗೆಯೇ ನೈರುತ್ಯ ರೈಲ್ವೆ ವಲಯ ಸ್ಥಳಾಂತರ, ಅವಳಿ ನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಹೋರಾಟದಲ್ಲಿ ಸಕ್ರಿಯವಾಗಿದ್ದರು.

ಬಡಕಲು ದೇಹದ ಪುಟ್ಟ ಹೆಂಗಸಿನ ಸಾಮರ್ಥ್ಯವನ್ನು ಶಂಕಿಸಿದವರಿಗೆತಮ್ಮ ಪ್ರತಿಭೆ ಆಳ ವಿಸ್ತಾರಗಳ ಪರಿಚಯವನ್ನೂ ಮಾಡಿಸಿದರು. ಆತ್ಮ-ವಿಶ್ವಾಸ, ಆತ್ಮಾಭಿಮಾನಗಳು ಅವರ ಸಂಗೀತದಲ್ಲಿ ಹೇಗೋ ವ್ಯಕ್ತಿತ್ವದಲ್ಲಿ ಹಾಸು ಹೊಕ್ಕಾಗಿದ್ದವು. ಇದಕ್ಕೆ ಕುಂದು ಬಂದಾಗ ಅವರು ಕಟುವಾಗಿ ಟೀಕಿಸಿದ ನಿದರ್ಶನಗಳಿವೆ.

ಇದಕ್ಕೆ ಉದಾಹರಣೆಯಾಗಿ 11.04.2005 ರಲ್ಲಿ ಹುಬ್ಬಳ್ಳಿಯ ಸವಾಯಿ ಗಂಧರ್ವ ಹಾಲ್‌ನಲ್ಲಿ ಪೌರಸನ್ಮಾನ ನಡೆಸಲು ನಿರ್ಧರಿಸಿದ್ದರು. 3.00 ಗಂಟೆಗೆ

ಕಾರ್ಯಕ್ರಮ ನಡೆಯಬೇಕಿತ್ತು. ಗಂಗೂಬಾಯಿ ಸಮಯಕ್ಕೆ ಸರಿಯಾಗಿ ಸಿದ್ಧರಿದ್ದರೂ, ಮುಖ್ಯಮಂತ್ರಿ ಬರುವ ಸ್ವಲ್ಪ ಮುಂಚೆ ಹೊರಡಲು ಹೇಳಿದ್ದರಿಂದ ಅವರು 5.30ಕ್ಕೆ ಸಭಾಂಗಣಕ್ಕೆ ಬಂದರು. ಮೇಯರ್‌ರವರು ಗಂಗೂಬಾಯಿಯವರಿಗೆ ಅರ್ಪಿಸಬೇಕಾಗಿದ್ದಸನ್ಮಾನ ಪತ್ರವನ್ನು ಓದಿದಾಗ ಮುಖ್ಯ ಮಂತ್ರಿಗಳು ಬಂದಿರಲಿಲ್ಲ. 6.30ಕ್ಕೆ ಮುಖ್ಯ ಮಂತ್ರಿ ಧರ್ಮಸಿಂಗ್ ಆಗಮಿಸಿ ತುರಾತುರಿಯಲ್ಲಿ ಶಾಲು ಹೊದ್ದಿಸಿ, ಪೌರ ಸನ್ಮಾನದ ಸ್ಮರಣಿಕೆ ನೀಡಿ ವಿಮಾನ ನಿಲ್ದಾಣಕ್ಕೆ ತೆರಳಿದರು. ಅವರ ಹಿಂದೆಯೇ ಪಾಲಿಕೆ ಸದಸ್ಯರು, ಗಣ್ಯರು ಹೊರಟು ವೇದಿಕೆ ಖಾಲಿಯಾಯಿತು. ಇದರಿಂದ ಆಕ್ರೋಶಗೊಂಡ ಗಂಗೂಬಾಯಿ ಅಭಿಮಾನಿಗಳು "ಗಾಯನ ಗಂಗೆಗೆ ಹುಟ್ಟೂರಿನಲ್ಲಿ ಆದ ಅವಮಾನ"ವೆಂದು ಮುಖ್ಯಮಂತ್ರಿಗಳಿಗೆ ಧಿಕ್ಕಾರ ಹಾಕಿದರು.

ನಂತರ ತಮ್ಮ ದುಃಖ ವ್ಯಕ್ತಪಡಿಸಿದ ಹಾನಗಲ್ "ನನಗೆ 9ಪ್ರಧಾನಿಗಳು, ನಾಲ್ವರು ರಾಷ್ಟ್ರಪತಿಗಳು ಸನ್ಮಾನ ಮಾಡಿದ್ದಾರೆ. ಆದರೆ ನನ್ನ ತವರೂರಿನಲ್ಲೇ ನನಗೆ ಈ ರೀತಿ ಅಸಹ್ಯಕರವಾಗಿ ಸನ್ಮಾನ ಮಾಡಿ ಅವಮಾನಿಸಿರುವುದು ತೀವ್ರ ನೋವುಂಟು ಮಾಡಿದೆ" ಎಂದರು ಅಪಮಾನಕ್ಕೆ ನೊಂದ ಗಂಗೂಬಾಯಿಯವರು ಹೂವು ಹಣ್ಣು ಸ್ವೀಕರಿಸಿ, ನೆನಪಿನ ಕಾಣಿಕೆ, ಶಾಲು ಸನ್ಮಾನ ಪತ್ರಗಳನ್ನು ಹುಬ್ಬಳ್ಳಿಯ ಕಲಾಪಿದರು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಮಹಾ ಪೌರರ ಕೊಠಡಿಯಲ್ಲಿಟ್ಟು ಬಂದರು.

ಹುಬ್ಬಳ್ಳಿಯ ಪೌರ ಸನ್ಮಾನಕ್ಕೆ ಉತ್ತರವೆಂಬಂತೆ ಮಹಾರಾಷ್ಟ್ರದ ರಾಜ್ಯಪಾಲ ಎಸ್.ಎಂ.ಕೃಷ್ಣರವರು ಗಂಗೂಬಾಯಿಯವರನ್ನು ರಾಜಭವನಕ್ಕೆ ಕರೆಸಿ, ಮುಖ್ಯ ಮಂತ್ರಿ ವಿಲಾಸ್ ರಾವ್ ದೇಶ್‌ಮುಖ್‌ರೊಂದಿಗೆ ಸನ್ಮಾನಿಸಿದಾಗ ಗಂಗೂಬಾಯಿಯವರು (ಮಗಳು ಕೃಷ್ಣಾ ನಿಧನದ ನಂತರ ಮೂರು ವರ್ಷ ಹಾಡಿರಲಿಲ್ಲ) 1913ರಲ್ಲಿ ಮುಂಬಯಿಯಲ್ಲಿ ಹಾಡಿದಂತೆಯೇ ಸಮುದ್ರ ಬೆಳದಿಂಗಳಿನ ಅಹ್ಲಾದಕ್ಕೆ ಪುಳಕಿತರಾಗಿ ಎದೆ ತುಂಬಿ ಹಾಡಿದರು.

ವಿಜಯನಗರದರಸರು ಆಳಿದ "ಹೂಬ್ಬಳ್ಳಿ" ಹುಬ್ಬಳ್ಳಿಯಲ್ಲಿ ಇಂದು "ಭಾರತೀಯ ಶಾಸ್ತ್ರೀಯ ಸಂಗೀತ ವಸ್ತು ಸಂಗ್ರಹಾಲಯ" "ಗಂಗಾಲಹರಿ" ಯಲ್ಲಿ ಗಂಗೂಬಾಯಿ ಹಾನಗಲ್ಲರ ಕನಸಿನ ಕೂಸಾಗಿ ವಿರಾಜಿಸುತ್ತಿದೆ. ಈ ವಸ್ತು ಸಂಗ್ರಹಾಲಯದ ಹಿಂದಿನ ಕಥೆ ಎಂದರೆ, ಹಾನಗಲ್ ಮೊಮ್ಮಗ ಮನೋಜ್ ವಕೀಲ ವೃತ್ತಿ ಮಾಡುತ್ತಿದ್ದಾರೆ. ಅವರು ಸಂಚರಿಸುತ್ತಿದ್ದ ಸ್ಥಳಗಳಲ್ಲಿದ್ದ ಸಂಗೀತಾಭಿಮಾನಿಗಳು ಅವರ ಹಾಡುಗಾರಿಕೆಯ ಬಗ್ಗೆ ಕೇಳುತ್ತಿದ್ದರು. ಸಂಗೀತ

ಬರುವುದಿಲ್ಲವೆಂದಾಗ, ಒಂದು ರೀತಿಯ ಕೀಳರಿಮೆ ತೋರಿಸುತ್ತಿದ್ದರು. ಈ ಅಪಮಾನವೇ ಪ್ರೇರಣೆಯಾಗಿ ಅಜ್ಜಿಯ ಸಂಗೀತ ಲೋಕದ ಕನಸನ್ನು ನನಸಾಗಿಸಲು ಪಣ ತೊಟ್ಟರು. 1992ರಲ್ಲಿ ಹಾನಗಲ್ ಮ್ಯೂಸಿಕ್ ಫೌಂಡೇಷನ್ ಪ್ರಾರಂಭವಾಯಿತು ಉದಯೋನ್ಮುಖ ಗಾಯಕರಿಗೆ ಬಹು ದೊಡ್ಡ ವೇದಿಕೆಯಾಗಿ ಹೊರ ಹೊಮ್ಮಿದೆ. ದೇಶದ ಹೆಸರಾಂತ ಕಲಾವಿದರೆಲ್ಲಾ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಇದರಲ್ಲಿ ಭಾಗವಹಿಸಿರುವ ಯಾವುದೇ ಕಲಾವಿದ ತಮ್ಮ ಸಂಭಾವನೆಗಿಂತ ಗಾಯನ ಸಾಮ್ರಾಜ್ಞೆಯ ಎದುರು ತಮ್ಮ ಕಲೆ ಪ್ರದರ್ಶಿಸಿ ಧನ್ಯರಾಗಿದ್ದಾರೆ.

ಭಾರತೀಯ ಸಂಗೀತ ಉಳಿಸಿ-ಬೆಳೆಸುವುದು ಯುವಕಲಾವಿದರಿಗೆ ವೇದಿಕೆ, ಭರತ ನಾಟ್ಯ, ಕಥಕ್, ಮಣಿಪುರಿ, ಒಡಿಸ್ಸಿ, ಕುಚುಪುಡಿ ಹಾಗೂ ರವೀಂದ್ರ ಸಂಗೀತಕ್ಕೆ ಪ್ರೋತ್ಸಾಹ ನೀಡುತ್ತಿರುವ ಮನೋಜ್ ಪ್ರಾರಂಭಿಸಿದ "ಹಾನಗಲ್ ಮ್ಯೂಸಿಕ್ ಫೌಂಡೇಷನ್"ನ ಮುಂದಿನ ಪ್ರಗತಿಯೆ ಈ ಸಂಗ್ರಹಾಲಯ ಕಳೆದ 300-400 ವರ್ಷಗಳ ಇಡೀ ಭಾರತೀಯ ಶಾಸ್ತ್ರೀಯ ಸಂಗೀತವನ್ನೇ ಇಂದಿನ ಹಾಗೂ ಮುಂದಿನ ಪೀಳಿಗೆಗೆ ನೀಡಲಿರುವ ಮಹತ್ವ ಕಾಣಿಕೆ ಎಂದರೆ ತಪ್ಪಾಗಲಾರದು. ಸಂಗೀತಕ್ಕೆ ಸಂಬಂದಿಸಿದ ಎಲ್ಲ ವಿಷಯಗಳನ್ನು ಸಂಗ್ರಹ ಮಾಡಿದರು. ಕಿರಾಣ ಘರಾಣದ ಇತಿಹಾಸವನ್ನು ಬೆಂಬಲಿಸುವ ಎಲ್ಲ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಕಳೆದ ಶತಮಾನದಲ್ಲಿ ದೇಶದ ಸಂಗೀತ ಕ್ಷೇತ್ರವನ್ನು ಶ್ರೀಮಂತ ಗೊಳಿಸಿದ ಖ್ಯಾತ ಸಂಗೀತಗಾರರ ಚಿತ್ರಗಳು, ಜನನ-ಮರಣ ದಾಖಲೆಗಳು, ಅವರ ಗ್ರಾಮಫೋನ್ ರೆಕಾರ್ಡಗಳು ಈ ಸಂಗ್ರಹಾಲಯದಲ್ಲಿದೆ. 13.3.2005 ರಲ್ಲಿ ಪ್ರಾರಂಭವಾಗಿದ್ದು ಇನ್ನೂ ಬಹಳ ವಿಷಯ ಮತ್ತು ಮಾಹಿತಿ ಸಂಗ್ರಹಗಳನ್ನು ಸೇರಿಸಬೇಕಾಗಿದೆ."

"ಗಾನ ಕೋಗಿಲೆ" ಗಂಗೂಬಾಯಿ ಹಾನಗಲ್‌ರವರು ದೇಶದ ಎಲ್ಲಾ ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿದ್ದಾರೆ. ಪದ್ಮವಿಭೂಷಣ ಸೇರಿದಂತೆ ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದ 50 ಪ್ರಶಸ್ತಿಗಳು 25ಬಿರುದು-ಬಾವಲಿಗಳು ಹಾಗೂ 6 ವಿಶ್ವವಿದ್ಯಾಲಯಂದ ಗೌರವ ಡಾಕ್ಟರೇಟುಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಐವರು ರಾಷ್ಟ್ರಪತಿ ಮತ್ತು ಒಂಬತ್ತು ಪ್ರಧಾನಿಗಳಿಂದ ಪ್ರಶಸ್ತಿ-ಪುರಸ್ಕಾರಗಳನ್ನು ಸ್ವೀಕರಿಸಿ ಧನ್ಯರಾಗಿದ್ದಾರೆ.

ಗಳಿಸಿದ ಪ್ರಶಸ್ತಿಗಳು

1.	ಕರ್ನಾಟಕ ಸಂಗೀತ ನೃತ್ಯ ಅಕಾಡಮಿ	1962
2.	ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ	1970
3.	ಪದ್ಮ ಭೂಷಣ	1971
4.	ಕೇಂದ್ರ ಸಂಗೀತ ಕರ್ನಾಟಕ ಅಕಾಡೆಮಿ	1973
5.	ಆಕಾಶವಾಣಿ ಸುವರ್ಣ ಪ್ರಶಸ್ತಿ	1977
6.	ಆಲ್ ಇಂಡಿಯಾ ರೇಡಿಯೋ ಸುವರ್ಣ ಮಹೋತ್ಸವ ಪ್ರಶಸ್ತಿ	1977
7.	ತಾನ್‌ಸೇನ್ ಪ್ರಶಸ್ತಿ	1984
8.	ರೋಹೆ ಘಜಲ್ ಬೇಗಂ ಅಕ್ತರ್	1987
9.	ಭೂವಾಕ ಅವಾರ್ಡ್	1990
10.	ಅಫಜಲ್ ಖಾನ್ ಮೆಮೊರಿಯಲ್ ಪ್ರಶಸ್ತಿ	1990
11.	ಕನಕ ಪುರಂದರ ಪ್ರಶಸ್ತಿ (ರಾಜ್ಯ ಸರ್ಕಾರ)	1992
12.	ಐ.ಟಿ.ಸಿ ಸಂಗೀತ ಅಕಾಡೆಮಿ ಅವಾರ್ಡ್	1992
13.	ಸುಜನ ಗೌರವ ಪುರಸ್ಕಾರ	1993
14.	ಗೋದಾವರಿ ಗೌರವ ಪ್ರಶಸ್ತಿ	1993
15.	ಶ್ರೀಮಂತ ಶಂಕರದೇವ ಪ್ರಶಸ್ತಿ (ಅಸ್ಸಾಂ)	1993
16.	ಮೈಸೂರು ಟಿ. ಚೌಡಯ್ಯ ಸ್ಮಾರಕ ಪ್ರಶಸ್ತಿ	1995
17.	ಕೇಂದ್ರ ಸರ್ಕಾರದ ಫೆಲೊ ಶಿಪ್	1996
18.	ಗಾನಯೋಗಿ ಪಂಚಾಕ್ಷರಿ ಗವಾಯಿ ಪ್ರಶಸ್ತಿ	1997
9.	ವಾದಿರಾಜ ಆದ್ಯ ಸ್ಮಾರಕ ಪ್ರಶಸ್ತಿ	1997
10.	ದೀನಾನಾಥ ಮಂಗೇಷ್ಕರ್ ಪ್ರಶಸ್ತಿ	1998
11.	ಮಾಣಿಕ್ಯರತ್ನ ಪ್ರಶಸ್ತಿ	1998
12.	ಮಹೋಪಾಧ್ಯಾಯ ಪ್ರಶಸ್ತಿ	2000
13.	ಆಚಾರ್ಯ ಪಂಡಿತ ರಾಮನಾರಾಯಣ ಫೌಂಡೇಶನ್ ಪ್ರಶಸ್ತಿ	2000
14.	ಎಸ್.ಆರ್. ಪಾಟೀಲ್ ಫೌಂಡೇಶನ ಪ್ರಶಸ್ತಿ	2000
15.	ಕರ್ನಾಟಕ ಭೂಷಣ ಪ್ರಶಸ್ತಿ	2001
16.	ನಿರ್ಮಲಾ ದೇವಿ ಪ್ರಶಸ್ತಿ	2002
17.	ಪದ್ಮವಿಭೂಷಣ	2002

18. ಷಣ್ಮುಖಾನಂದ ಫೈನ್ ಆರ್ಟ್ಸ್ ಮತ್ತು ಸಂಗೀತ ಸಭಾ 2003
19. ನ್ಯಾಷನಲ್ ಆರ್ಟಿಸ್ಟ್ ಪ್ರಶಸ್ತಿ 2004
20. ಉಸ್ತಾದ ಇನಾಯತ್‌ಕಾನ್ ಮೆಮೋರಿಯಲ್ ಪ್ರಶಸ್ತಿ 2004
21. ಗಾಯನ ಸಮಾಜ ಸೆಂಚುರಿ ಪ್ರಶಸ್ತಿ 2005
22. ಪೌಲ್ ಹ್ಯಾರೀಸ ಫೆಲೊಷಿಪ್ 2005
23. ಅಂತರ ರಾಷ್ಟ್ರೀಯ ಜೈಂಟ್ಸ್ ಪ್ರಶಸ್ತಿ 2005
24. ರೋಟರಿ ಶತಮಾನೋತ್ಸವ 2005
25. ಅದಿತ್ಯ ವಿಕ್ರಮ ಬಿರ್ಲಾ ಕಲಾಶಿಖರ ಪುರಸ್ಕಾರ 2005
26. ಇಂಡಿಯನ್ ಮ್ಯೂಜಿಕ್ ಪ್ರಶಸ್ತಿ 2006
27. ಶ್ರೀಮಾತಾ ಪ್ರಶಸ್ತಿ 2006
28. ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ 2006
29. ಶ್ರೀ. ಕೃಷ್ಣ ಪ್ರಶಸ್ತಿ 2006
30. ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ 2007
31. ಮದರ್ ತೆರೆಸಾ ರಾಷ್ಟ್ರೀಯ ಸ್ತ್ರೀರತ್ನ ಪುರಸ್ಕಾರ 2007
32. ಹುಯಿಲುಗೋಳ ನಾರಾಯಣರಾವ್ ಪ್ರಶಸ್ತಿ 2007
33. ಲಕ್ಷ್ಮೀ ನಾರಾಯಣ ಅಂತರರಾಷ್ಟ್ರೀಯ ಪ್ರಶಸ್ತಿ 2007
34. ಈಟಿ.ವಿ ವರ್ಷ ಕನ್ನಡಿಗ ಪ್ರಶಸ್ತಿ 2008
35. ಪಂ.ಸವಾಯಿ ಗಂಧರ್ವ ರಾಷ್ಟ್ರೀಯ ಪ್ರಶಸ್ತಿ 2008
36. ನೆದರ್‌ಲ್ಯಾಂಡ್ ಅವಾರ್ಡ್ 2009

ನೀಡಿದ ಬಿರುದುಗಳು

1. ಸಂಗೀತ ಶಿರೋಮಣಿ 1950
2. ಭಾರತೀಯ ಕಂಠ 1953
3. ಸಂಗೀತ ಸರಸ್ವತಿ 1976
4. ಸಪ್ತಗಿರಿ ಸಂಗೀತ ವಿದ್ವನ್ಮಣಿ 1995

5.	ಸಂಗೀತ ರತ್ನ	1995
6.	ಸಂಗೀತ ಕಲಾ ರತ್ನ	1977
7.	ಆಧುನಿಕ ಸಂಗೀತ ಶಬರಿ	1997
8.	ಕನ್ನಡ ಕುಲತಿಲಕ	1998
9.	ನಾದಬ್ರಹ್ಮಿಣಿ	1998
10.	ಗಾನರತ್ನ	1999
11.	ಸಂಗೀತ ಸಾಮ್ರಾಜ್ಞಿ	2000
12.	ಸಂಗೀತ ಸರಸ್ವತಿ	2005
13.	ಸ್ವರ ಸರಸ್ವತಿ	2005
14.	ಗಾನ ಗಂಧರ್ವ ಗಂಗಾತೀತ	2006
15.	ಗಂಗಾ ಮುಕುಟಮಣಿ	2006
16.	ಗಾನ ಗಂಗಾಮಾಯಿ	2006
17.	ಅಂಬಾಸುತೆ ಗಂಗಾ	2007
18.	ರಾಗ ಭೂಷಣ	2007
19.	ಸ್ವರ ಚಿಂತಾಮಣಿ	2007
20.	ಗುರು ಗಂಧರ್ವ	2007
21.	ರಾಗ ರಾಜೇಶ್ವರಿ	2007
22.	ಅಮೃತ ಗಂಗೆ	2008

ಗೌರವ ಡಾಕ್ಟರೇಟ್

1.	ಕರ್ನಾಟಕ ವಿಶ್ವವಿದ್ಯಾಲಯ	1976
2.	ಗುಲ್ಬರ್ಗ ವಿಶ್ವವಿದ್ಯಾಲಯ	1986
3.	ಹಂಪಿ ಕನ್ನಡ ವಿ.ವಿ	1995
4.	ಅಖಿಲ ಭಾರತೀಯ ಗಂಧರ್ವ ವಿಶ್ವ ವಿದ್ಯಾಲಯ ಮುಂಬೈ	1995

5. ದೆಹಲಿ ವಿಶ್ವ ವಿದ್ಯಾಲಯ 1998
6. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ 2008
7. ವಿಜಾಪುರ ಮಹಿಳಾ ವಿಶ್ವವಿದ್ಯಾಲಯ 2009

ಅಲಂಕರಿಸಿದ ಸ್ಥಾನಗಳು

1. ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಗೌರವ ಉಪನ್ಯಾಸಕಿ 1976
2. ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡಮಿ ಅಧ್ಯಕ್ಷೆ. 1992
3. ರಾಜ್ಯ ವಿಧಾನ ಪರಿಷತ್ ನಾಮಕರಣ ಸದಸ್ಯೆ 1996

ಈಗ ಮರಣಾ ನಂತರ ಕರ್ನಾಟಕ ಸರ್ಕಾರ ಮತ್ತು ಅದಕ್ಕೆ ಮೊದಲೇ ಮಹಾರಾಷ್ಟ್ರದ ರಾಜ್ಯ ಪಾಲರಾಗಿದ್ದ ಎಸ್.ಎಂ. ಕೃಷ್ಣರವರು ಗಂಗೂಬಾಯಿ ಹಾನಗಲ್ಲರಿಗೆ "ಭಾರತ ರತ್ನ" ನೀಡಲು ವಿನಂತಿಸಿದ್ದಾರೆ. ಈ ಹಿಂದೆ "ಭೀಮಸೇನ ಜೋಷಿಗೆ "ಭಾರತ ರತ್ನ" ಬಂದಾಗ, ನನಗೆ ಬಂದಷ್ಟೆ ಖುಷಿ ಆತು. ಆತನಿಗೆ ಫೋನ್ ಹಚ್ಚಿ ಅಭಿನಂದಿಸಿದೆ. ಅಮ್ಯಾಗ ಸಂಗೀತ ಕಲಾನಿಧಿ, ಗಾನಗಂಧರ್ವ ಪ್ರಶಸ್ತಿಗಳನ್ನು ಹಾನಗಲ್ ಮ್ಯುಸಿಕ್ ಫೌಂಡೇಶನ್ ಮೂಲಕ ಕೊಟ್ಟ ಗೌರವಿಸಿದೆವು. ಭೀಮು ಯಶಸ್ಸಿನಾಗ ನನ್ನದೂ ಪಾಲೈತಿ" ಎಂದು ಆನಂದ ಬಾಷ್ಪ ಸುರಿಸಿದ್ದರು.

ಗಂಗೂಬಾಯಿಯವರು ಕಳೆದ ಬಾರಿ ಹುಷಾರಿಲ್ಲದಿದ್ದಾಗ ಸುಂದರ ಪ್ರಕಾಶನದ ಶ್ರೀ ಗೌರಿ ಸುಂದರ್‌ರವರು ಅವರನ್ನು ಭೇಟಿ ಮಾಡಿ ತಮ್ಮ ಪ್ರಕಾಶನದ "ನಿಟ್ಟೂರು ನೂರು" ಮತ್ತು "ಚಿತ್ರರಂಗದ ಭೀಷ್ಮ ಜಿ.ವಿ. ಐಯ್ಯರ್ ಪುಸ್ತಕಗಳನ್ನು ನೀಡಿ ಆಶೀರ್ವಾದ ಪಡೆದಿದ್ದರು. ಈಗ ಅವರ ಪ್ರಕಾಶನದಿಂದ "ಭಾರತರತ್ನ ಪಂಡಿತ ಭೀಮಸೇನ ಜೋಷಿ" ಪುಸ್ತಕ ಸಿದ್ದತೆಯಲ್ಲಿದೆ. ಇದಾದ ನಂತರ ವರ್ಷದ ಕೊನೆಯ ವೇಳೆಗೆ ಹಾನಗಲ್ಲರ ಪುಸ್ತಕ ಪ್ರಕಟಿಸುವ ಯೋಜನೆ ಇತ್ತು. ಆದರೆ ಹಠಾತ್ತಾಗಿ ಸಂಗೀತ ಸಾಮ್ರಾಜ್ಞೆ ನಭೋಮಂಡಲಕ್ಕೆ ಸೇರಿದುದರಿಂದ ಈಗ "ಗಗನ ಗಂಗೆ" ಪುಸ್ತಕ ಅವರ ನೆನೆಪಿಗಾಗಿ ಪ್ರಕಟವಾಗುತ್ತಿದೆ.

ನಾದಗಂಗೆ ಗಂಗೂಬಾಯಿ ಹಾನಗಲ್

ಎನ್. ಆನಂದ ರಾಮರಾವ್.

ಸಂಗೀತ ಲೋಕದ ದಂತಕತೆ, ಗಾಯನಗಂಗೆ, ಅನರ್ಘ್ಯರತ್ನ, ಕಿರಾಣಾ ಘರಾನೆಯ ಅಭಿಜಾತ ಕಲಾವಿದೆ ಎಂದೆಲ್ಲಾ ಪ್ರಖ್ಯಾತರಾದ ಗಾನವಿದುಷಿ ಡಾ. ಗಂಗೂಬಾಯಿ ಹಾನಗಲ್ 97 ವರ್ಷಗಳ ತುಂಬು ಜೀವನದ ನಂತರ – ಈ ಲೋಕವನ್ನು ಬಿಟ್ಟು ಅಂತಿಮ ವಿದಾಯ ಹೇಳಿ 21.7.2009 ರಂದು ಅಪಾರ ಅಭಿಮಾನಿಗಳನ್ನು ತ್ಯಜಿಸಿ ಹೋಗಿದ್ದಾರೆ.

ದಿನಾಂಕ 5.3.1913ರಲ್ಲಿ ಜನಿಸಿದ ಡಾ.ಗಂಗೂಬಾಯಿ ಹಾನಗಲ್‌ರವರು ಪ್ರಥಮವಾಗಿ ತಮ್ಮ 11ನೇ ವಯಸ್ಸಿನಲ್ಲಿ 39ನೇಯ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಾಗತ ಗೀತೆಯನ್ನು ಹಾಡುವುದರ ಮೂಲಕ, ಸಾರ್ವಜನಿಕವಾಗಿ ಹಾಡಲು ಆರಂಭಿಸಿದರು.

ಭಾರತವು ಸ್ವಾತಂತ್ರ್ಯ ಪಡೆಯುವ ಮುಂಚೆ ಅದಕ್ಕಾಗಿ ಹೋರಾಟ ನಡೆಸುತ್ತಿದ್ದ ದಿನಗಳು. ಅಖಿಲ ಭಾರತ ಕಾಂಗ್ರೆಸ್ ಸರ್ಕಾರವು 1924ರಲ್ಲಿ ತನ್ನ 39ನೇಯ ಅಧಿವೇಶವನ್ನು ನಡೆಸಲು ಆರಿಸಿಕೊಂಡಿದ್ದು, ಬೆಳಗಾವಿಯನ್ನು ಕರ್ನಾಟಕದಲ್ಲಿ ನಡೆದ ಪ್ರಥಮ ಕಾಂಗ್ರೆಸ್ ಅಧಿವೇಶನ ಇದಾಗಿತ್ತು.

ಈ ಮಹಾಧಿವೇಶನದಲ್ಲಿ ಭಾಗವಹಿಸಿದ್ದವರು ರಾಜಕೀಯ ರಂಗದಲ್ಲಿ ಅಂದು ಗಣ್ಯಾತಿಗಣ್ಯರಾಗಿದ್ದ ಮಹಾತ್ಮಾ ಗಾಂಧಿ, ಜವಹರಲಾಲ್ ನೆಹರು, ಸರ್ದಾರ್ ವಲ್ಲಭಬಾಯ್ ಪಟೇಲ್, ಲಾಲ್‌ಬಹದ್ದೂರ್ ಶಾಸ್ತ್ರಿ, ಮೌಲಾನಾ ಅಬ್ದುಲ್ ಕಲಂ ಆಜಾದ್, ಸರೋಜಿನಿ ನಾಯ್ಡು ಮುಂತಾದವರು ಈ ಐತಿಹಾಸಿಕ ಅಧಿವೇಶನದಲ್ಲಿ ಸ್ವಾಗತ ಗೀತೆಯನ್ನು ಹಾಡುವ ಅಪೂರ್ವ ಅವಕಾಶ ದೊರಕಿದ್ದು ಹನ್ನೊಂದು ವರ್ಷದ ಬಾಲಕಿ ಗಂಗೂಬಾಯಿಗೆ.

ಆದೀಗ ತಾನೇ ಸಂಗೀತ ಕಲಿಕೆಯನ್ನು ಆರಂಭಿಸಿದ್ದ ಗಂಗೂಬಾಯಿ ಅವರಿಗೆ ಮೊಟ್ಟ ಮೊದಲ ಬಾರಿಗೆ ಬೃಹತ್ ಸಮಾವೇಶದಲ್ಲಿ ರಾಷ್ಟ್ರದ

ಅಗ್ರಗಣ್ಯ ನಾಯಕರ ಹಾಗೂ ಸಾವಿರಾರು ದೇಶ ಭಕ್ತರ ಸಮ್ಮುಖದಲ್ಲಿ ಸ್ವಾಗತ ಗೀತೆಯನ್ನು ಹೇಳುವ ಸುಪದವಕಾಶ ಸಿಕ್ಕಿದ್ದು ಅವರ ಜೀವಮಾನದಲ್ಲಿಯೇ ಮರೆಯಲಾರದ ಘಟನೆಯಾಗಿ ಅವರ ನೆನಪಿನಲ್ಲಿ ಚಿರಂತರವಗಿ ಮನೆ ಮಾಡಿತ್ತು. ಅಂದು ಅವರು ಹಾಡಿದ "ಸ್ವಾಗತವು ನಿಮಗೆ" ಗೀತೆ ಅವರ ಮೊಟ್ಟಮೊದಲ ಗೀತೆಯಾಯಿತು. ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ಗಂಗೂಬಾಯಿಯವರ ಬಾಯಿಂದ ಹೊರ ಹೊಮ್ಮಿದ ಈ ಗೀತೆಯ ಮಾಧುರ್ಯವನ್ನು ಬಹುವಾಗಿ ಮೆಚ್ಚಿಕೊಂಡು ಆಶಿರ್ವದಿಸಿದ್ದ ಮಧುರ ನೆನಪು ಅವರ ಜೀವನದ ಕೊನೆಯವರೆಗೂ ಮಾಸದೆ ಉಳಿದಿತ್ತು.

"ಮೊದಲ ಬಾರಿಗೆ ವೇದಿಕೆ ಹತ್ತಿ ನಿಂತಾಗ ಕಾಲುಗಳು ನಡುಗಿತು. ಇಡೀ ಶರೀರದಲ್ಲಿ ವಿದ್ಯುತ್ ಸಂಚಾರವಾದಂತೆ ಆಯಿತು. ರಾಷ್ಟ್ರದ ಗಣ್ಯಾತಿಗಣ್ಯ ನಾಯಕರ ಮುಂದೆ ನಿಂತು ಹಾಡುವ ಅಪರೂಪದ ಅವಕಾಶ ನನ್ನ ಪಾಲಿಗೆ ದೊರೆಕಿದ್ದು ಅದನ್ನು ಒದಗಿಸಿದ ಬೆಳಗಾವಿಯನ್ನು ಎಂದಿಗೂ ಮರೆಯಲಾಗುವುದಿಲ್ಲ"ವೆಂದು ಪದೇ ಪದೇ ಹೇಳುತ್ತಿದ್ದರು.

ಹೀಗೆ ಮೊದಲ ಕಾರ್ಯಕ್ರಮದಿಂದಲೇ ಮೆಚ್ಚುಗೆಗಳಿಸಿದ ಅವರಿಗೆ ಜೀವನದುದ್ದಕ್ಕೂ ಸಂಗೀತಶ್ರೋತೃಗಳಿಂದ, ಅಭಿಮಾನಿಗಳಿಂದ ರಸಿಕರಿಂದ, ಸಂಘಸಂಸ್ಥೆಗಳಿಂದ ಸಿಕ್ಕಿದ್ದು ಅವ್ಯಾಹತ ಮೆಚ್ಚುಗೆ.

ಇದಕ್ಕೆಲ್ಲ ಮುಖ್ಯ ಕಾರಣ ಆರಂಭದಿಂದಲೂ ಅವರು ಸಂಗೀತ ಶಿಕ್ಷಣದಲ್ಲಿ, ಅಭ್ಯಾಸದಲ್ಲಿ ತಮ್ಮನ್ನು ತಾವೇ ತೀವ್ರವಾಗಿ ತೊಡಗಿಸಿಕೊಂಡಿದ್ದೇ ಆಗಿತ್ತು.

ಅವರು ಹುಟ್ಟಿದ್ದು ಧಾರವಾಡದ ಶುಕ್ರವಾರ ಪೇಟೆಯಲ್ಲಿ 5.3.1913 ರಂದು ಸಂಗೀತ ಮನೆತನದಲ್ಲಿ ಹುಟ್ಟಿದ ಅವರಿಗೆ ಸಂಗೀತ ಜನ್ಮದತ್ತವಾಗಿ ಒಲಿದು ಬಂದಿತ್ತವರ. ಅವರ ತಾಯಿ ಅಂಬಾಬಾಯಿ, ತಂದೆ ಚಿಕ್ಕೂರಾವ್ ನಾಡಿಗೇರ.

ತಾಯಿ ಅಂಬಾಬಾಯಿಯವರು ಕೂಡ ಹಾಡುಗಾರಿಕೆಯಲ್ಲಿ ನೈಪುಣ್ಯತೆ ಪಡೆದವರೇ ಆಗಿದ್ದರು. ಅವರು ಕರ್ನಾಟಕ ಸಂಗೀತ ಶೈಲಿಯಲ್ಲಿ ಪ್ರಸಿದ್ಧರಾಗಿದ್ದವರು. ಸಂತ ತ್ಯಾಗರಾಜರ ಕೀರ್ತನೆಗಳನ್ನು ಹೇಳುವುದರಲ್ಲಿ ನಿಷ್ಣಾತರಾಗಿದ್ದ ಅಂಬಾಬಾಯಿಯವರಿಗೆ ಮಗಳು ಗಂಗಾಬಾಯಿಯನ್ನೂ ಸಂಗೀತಗಾರ್ತಿಯನ್ನಾಗಿ ಮಾಡುವ ಹಂಬಲ. ಅದಕ್ಕೆ ತಕ್ಕಂತೆ ಮಗಳಿಗೂ ಸಹ ಗಾಯನದಲ್ಲಿ ಒಲವು ಹಾಗಾಗಿ ತಾಯಿಯ ಇಚ್ಛೆ - ಮಗಳ ಆಸಕ್ತಿ ಕೂಡಿಕೊಂಡು, ಮಗಳಿಗೆ ಸಂಗೀತ ಕಲಿಸುವುದರಲ್ಲಿ ಉತ್ಸಾಹ ಹೆಚ್ಚಾಯಿತು.

ತಾಯಿ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಒಲವು ಹೊಂದಿದ್ದರೆ ಮಗಳಿಗೆ ಆಸಕ್ತಿ ಇದ್ದುದು ಹಿಂದೂಸ್ಥಾನಿ ಸಂಗೀತದತ್ತ ಮಗಳ ಸಂಗೀತದ ಆಸಕ್ತಿ ಹಾಗೂ ಪ್ರತಿಭೆಯ ಅರಿವಿದ್ದು ತಾಯಿ ಅಂಬಾಬಾಯಿಯವರು ಮಗಳನ್ನು ಹಿಂದೂಸ್ಥಾನಿ ಸಂಗೀತ ಗುರುಗಳಾದ ಕೃಷ್ಣಾಚಾರ್ಯ ಹುಲಿಗೂರ್ ಅವರ ಬಳಿ ಸಂಗೀತ ಅಭ್ಯಾಸಕ್ಕೆ ಸೇರಿಸಿದರು.

ಕರ್ನಾಟಕ ಸಂಗೀತದಲ್ಲಿ ತನಗೆ ಆಸಕ್ತಿಯಿದ್ದರೂ, ಅದನ್ನು ಮಗಳ ಮೇಲೆ ಹೇರದೆ, ಮಗಳ ಇಚ್ಛೆಗೆ ತಕ್ಕ ಹಾಗೆ ಹಿಂದೂಸ್ಥಾನಿ ಸಂಗೀತಕ್ಕೆ ಸೇರಿಸಿದ ತಮ್ಮ ತಾಯಿಯ ಔದಾರ್ಯವನ್ನು ಗಂಗೂಬಾಯಿಯವರು ಸದಾ ಸ್ಮರಿಸುತ್ತಿದ್ದರು.

ಸಂಗೀತ ಶ್ರೀಮಂತಿಕೆಯ ಮನೋಭಾವ ತಾಯಿ ಮಗಳಲ್ಲಿದ್ದರೂ, ಮನೆಯ ಆರ್ಥಿಕ ಪರಿಸ್ಥಿತಿ ಮಾತ್ರ ತದ್ವಿರುದ್ಧವಾಗಿತ್ತು. ಬಡತನದ ಬೇಗೆ ಕಾಡುತ್ತಿತ್ತು. ಆದರೆ ಆ ಬಡತನ ಸಂಗೀತದ ಒಲವು ತುಂಬಿದ್ದ ಮನಕ್ಕೆ ಎಂದು ಅಡ್ಡಿ ಬರಲಿಲ್ಲ. ಸಂಗೀತ ಸಾಧನೆಗೆ ಕುಳಿತರೆಂದರೆ ಮನಸ್ಸು ಯಾವ ದಿಕ್ಕಿಗೂ ಹರಿಹಾಯದೆ ಕಲಿಕೆಯಲ್ಲೇ ಮಗ್ನವಾಗುತ್ತಿದ್ದರು. ಅಂತಹ ಕಠಿಣ ತಪಸ್ಸಿನ ಸಾಧನೆಯೇ, ನಿಷ್ಠೆ ತಪಸ್ಸುಗಳೇ, ಅವರನ್ನು ಸಂಗೀತದ ಮೇರು ಪರ್ವತಕ್ಕೆ ಕೊಂಡೊಯ್ಯುವುದರಲ್ಲಿ ಸಫಲವಾಗಿದ್ದು

ಕೃಷ್ಣಚಾರ್ಯ ಹುಲಿಗೂರರಲ್ಲಿ ಸಂಗೀತದ ಆರಂಭಿಕ ಪಾಠಗಳಾದ ನಂತರ, ಅವರ ಮುಂದಿನ ಸಂಗೀತಾಭ್ಯಾಸ ಸಾಗಿದ್ದು ಕಿರಾಣ ಘರಾಣದ ಗಂಧರ್ವ ಸವಾಯಿ ಗಂಧರ್ವರಲ್ಲಿ. ಪ್ರತಿದಿನ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಪ್ರಾಯಾಣ ಮಾಡುತ್ತಿದ್ದು ಸಂಗೀತ ಪಾಠದ ಅಧ್ಯಯನದಲ್ಲಿ ತೊಡಗುತ್ತಿದ್ದರು. ಅಂದು ಅವರ ಸಹಪಾಠಿಗಳಾಗಿದ್ದವರು ಭೀಮಸೇನ ಜೋಷಿಯವರು. ಒಬ್ಬರೇ ಗುರುಗಳಲ್ಲಿ ಅಭ್ಯಾಸ ಮಾಡುತ್ತಿದ್ದ ಅವರಿಬ್ಬರಲ್ಲಿಯೂ ಸೋದರ ಬಾಂಧವ್ಯ ಬೆಳೆದಿತ್ತು; ಭೀಮಸೇನ ಜೋಷಿಯವರನ್ನು ಗಂಗೂಬಾಯಿಯವರು ಕರೆಯುತ್ತಿದ್ದುದು 'ಭೀಮಣ್ಣ'ನೆಂದೇ. ಜೋಷಿಯವರಾದರೋ ಗಂಗೂಬಾಯಿಯವರನ್ನು ಸ್ವಂತ ಅಕ್ಕನೆಂದೇ ಭಾವಿಸಿದ್ದರು. ಈ ಅಕ್ಕತಮ್ಮಂದಿರ ಸುಮಧುರ ಬಾಂಧವ್ಯ ಕೊನೆಯವರೆಗೂ ಸಾಗಿಬಂದಿತ್ತು;.

ತಮ್ಮ ಭೀಮಣ್ಣನಿಗೆ ಅರ್ಥಾತ್ ಭೀಮಸೇನ ಜೋಷಿಯವರಿಗೆ ಭಾರತದ ಅತ್ಯುನ್ನತ ಪ್ರಶಸ್ತಿ 'ಭಾರತ ರತ್ನ' ಲಭಿಸಿದಾಗ, ಗಂಗೂಬಾಯಿಯವರು

ಅತ್ಯಂತ ಹರ್ಷ ಭರಿತರಾದರು ಪ್ರಶಸ್ತಿ ತಮಗೇ ಬಂದಂತೆ ಸಂಭ್ರಮ ಪಟ್ಟರು.

"ಭೀಮುಗೆ 'ಭಾರತ ರತ್ನ' ಬಂದಾಗ ನನಗೇ ಬಂದಷ್ಟು ಖುಷಿ ಆಯಿತು. ಆತನಿಗೆ ಫೋನ್ ಮಾಡಿ ಅಭಿನಂದಿಸಿದೆ." ಎಂದು ಹೇಳಿದ ಗಂಗೂಬಾಯಿಯವರು ತಮ್ಮದು ಎಷ್ಟು ನಿಷ್ಕಳಂಕ ಮನೋಭಾವವೆಂಬುದನ್ನು ತೋರಿಸಿದರು.

ಗಂಗೂಬಾಯಿಯವರಲ್ಲಿದ್ದ ಒಂದು ದೊಡ್ಡ ಗುಣವೆಂದರೆ ಗುರುಗಳು ಹೇಳಿ ಕೊಡುತ್ತಿದ್ದುದನ್ನು ಅವರು ಯಾವತ್ತು ಪ್ರಶ್ನಿಸುತ್ತಿರಲಿಲ್ಲ ಗುರುಗಳು ಹೇಳುತ್ತಿದ್ದ ಮಾತುಗಳನ್ನು- "ದುಡ್ಡು ಮತ್ತು ಸ್ವರವನ್ನು ಎಷ್ಟುಬೇಕೋ ಅಷ್ಟು ಮಾತ್ರ ಖರ್ಚು ಮಾಡು" - ತಪ್ಪದೆ ಪಾಲಿಸಿದರು.

ತಮ್ಮ ಜೀವನದಲ್ಲಿ ಎಷ್ಟೇ ತೊಂದರೆ ತಾಪತ್ರಯಗಳಿರಲಿ, ಕಷ್ಟ ಕಾರ್ಪಣ್ಯಗಳಿರಲಿ, ಅದನ್ನೆಲ್ಲ ಮರೆತು ಸಂಗೀತ ಸಾಧನೆಗೆ ಮನಗೊಡುತ್ತಿದ್ದರು. ಹಾಗಾಗಿಯೇ ಅವರು ತಮ್ಮ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಯ ಶಿಖರವೇರುವಂತೆ ಆಯಿತು. ತಮ್ಮ ಶ್ರೋತೃಗಳಿಗೆ ಸಂಗೀತದ ಸೊಬಗನ್ನು ಉಣ ಬಡಿಸಲು ಸಾಧ್ಯವಾಯಿತು.

ಗಂಡುದನಿಯ ಗಂಗೂಬಾಯಿ

ಗಂಗೂಬಾಯಿಯವರದು ಗಂಡು ದನಿ. ಆಕಾಶವಾಣಿಯಲ್ಲಿ ಅವರ ಹಾಡು ಕೇಳಿದ ಯಾರಿಗಾದರೂ ಅನಿಸುತ್ತಿದ್ದುದು ಯಾರೋ ಗಂಡಸರು ಹಾಡುತ್ತಿದ್ದಾರೆ ಎಂದು. ಇದಕ್ಕೆ ಕಾರಣವಾಗಿದ್ದು ಅವರು 40 ವರ್ಷದವರಾಗಿದ್ದಾಗ ಅವರಿಗೆ ಟಾನ್ಸಿಲ್ ಆಪರೇಷನ್ ಆದಾಗ ಸಂಭವಿಸಿದ್ದು. ಆಗ ಅವರು ತಮ್ಮ ಇಂಪಾದ ಸ್ವರವನ್ನು ಕಳೆದುಕೊಳ್ಳುವಂತಾಯಿತು. ಬದಲಿಗೆ ಗಂಡು ದನಿಯಾಯಿತು. ಆದರೆ ಅವರ ಮನಸ್ಸು ಇದರಿಂದ ವಿಚಲಿತವಾಗಲಿಲ್ಲ. ಬದಲಿಗೆ ತಮ್ಮ ಶಾಸ್ತ್ರೀಯ ಶೈಲಿ. ಸ್ವರ ಪ್ರಸ್ತಾರ. ಅಷ್ಟೇ ಅಲ್ಲ, ಉಚ್ಚಾರಣೆ, ಸ್ಪಷ್ಟತೆಗಳಿಂದ ಶ್ರೋತೃಗಳ ಮನಗೆದ್ದರು. ಸಂಗೀತದಲ್ಲಿ ಹೆಣ್ಣು ದನಿಯೋ, ಗಂಡುದನಿಯೋ ಯಾವುದೇ ಇರಲಿ, ಸಂಗೀತವನ್ನು ಶಾಸ್ತ್ರೀಯವಾಗಿ, ಆಪ್ಯಾಯಮಾನವಾಗಿ ಶ್ರೋತೃಗಳಿಗೆ ತಲುಪಿಸಬೇಕಾದ್ದು ಮುಖ್ಯ ಎಂದು ಹೇಳುತ್ತಿದ್ದರು.

ತಮ್ಮ ಧ್ವನಿಯ ಬಗ್ಗೆ ಯಾರೇ ಟೀಕೆ ಮಾಡಿದರೂ ಅದಕ್ಕೆ ಗಮನ ಕೊಡದೆ ನಿರ್ಲಕ್ಷ್ಯ ಮನೋಭಾವದಿಂದಿರುತ್ತಿದ್ದರು.

ಆದರೆ ಕನ್ನಡದ ವರಕವಿ ಡಾ.ದ.ರಾ. ಬೇಂದ್ರೆ ಯವರು ಮಾತ್ರ ಈ ವಿಷಯದಲ್ಲಿ ಇವರನ್ನು ಆಗಾಗೆ ಛೇಡಿಸುತ್ತಿದ್ದರು. "ನಿನ್ನ ಗಂಟಲಲ್ಲಿ ಶಾಪಗ್ರಸ್ತ ಗಂಧರ್ವ ಕೂತಿದ್ದಾನೆ." ಎಂದು ತಮಾಷೆ ಮಾಡುತ್ತಿದ್ದರು. ಗಂಗೂಬಾಯಿಯವರಿಗಾದರೋ ಬೇಂದ್ರೆ ಅವರೆಂದರೆ ಅತಿಶಯವಾದ ಮೆಚ್ಚುಗೆ. ಅಪಹಾಸ್ಯಮಾಡಿದರೂ ಬೇಂದ್ರೆ ಯವರು ಗಂಗೂಬಾಯಿಯವರಿಗೆ "ಗಾಯನ ಗಂಗಾ" ಎಂಬ ಬಿರುದನ್ನು ನೀಡಿ ತಮ್ಮ ಅತಿಶಯವಾದ ವಿಶ್ವಾಸವನ್ನು ತೋರಿಸಿದರು. ಹೀಗಾಗಿ ಅವರು ಬೇಂದ್ರೆಯವರ ನುಡಿಗಳನ್ನು ಅಷ್ಟೇ ನಗುಮುಖದಿಂದ ಸ್ವೀಕರಿಸುತ್ತಿದ್ದರು. ಅವರ ಜೀವನದ ಕೊನೆಯವರೆಗೂ ಬೇಂದ್ರೆಯವರ ಶಿಷ್ಯರಾಗಿದ್ದರು.

ಅಪ್ಪಟ ಶಾಸ್ತ್ರೀಯ ಸಂಗೀತಕ್ಕೆ ಮನಕೊಟ್ಟವರು.

ಗಂಗೂ ಬಾಯಿಯವರ ನಿಷ್ಠೆ ಮೀಸಲಾಗಿದ್ದುದು ಅಪ್ಪಟ ಶಾಸ್ತ್ರೀಯ ಸಂಗೀತಕ್ಕೆ 'ಮಾತ್ರ' ಶಾಸ್ತ್ರೀಯವಾದುದನ್ನು ಬಿಟ್ಟು ಬೇರೆನನ್ನೂ ಹಾಡಲು ಅವರು ಒಲವು ತೋರುತ್ತಿರಲಿಲ್ಲ. ಅಷ್ಟೇ ಏಕೆ ಭಕ್ತಿ ಸಂಗೀತಕ್ಕೂ ಕೂಡ ಗಮನ ಕೊಡುತ್ತಿರಲಿಲ್ಲ. ಒಂದು ಸಲ ಅವರನ್ನು ಸುದರ್ಶಿಸುತ್ತಿದ್ದನರೊಬ್ಬರು ಅವರನ್ನು ಒಂದು ಪ್ರಶ್ನೆ ಕೇಳಿದರು. "ನೀವೇಕೆ ಭಕ್ತಿ ಸಂಗೀತವನ್ನು ಹೇಳುವುದಿಲ್ಲ"? ಎಂದು ಅದಕ್ಕೆ ಅವರು ಕೊಟ್ಟ ಉತ್ತರ:" ತಮ್ಮ ಸಂಗೀತದಲ್ಲೇ ಭಕ್ತಿ ತುಂಬಿದೆ" ಎಂದು.

ಅಷ್ಟೇ ಅಲ್ಲ. ಸಂಗೀತದ ಇತರೇ ಪ್ರಾಕಾರಗಳಾದ ಲಘುಸಂಗೀತವನ್ನು ಟುಮರಿಯನ್ನೂ ಹಾಡಲಿಲ್ಲ. ಲಘುಸಂಗೀತದಿಂದ ಅವರು ದೂರವೇ ಉಳಿದಿದ್ದರು. ಆದರೆ ಸುಗಮಸಂಗೀತ, ಭಕ್ತಿ ಸಂಗೀತ, ಲಘು ಸಂಗೀತಗಳನ್ನು ಇತರರು ಹಾಡುವುದನ್ನು ಕೇಳಿ ಸಂತೋಷ ಪಡುತ್ತಿದ್ದರು. ಗಾಯಕರನ್ನು ಪ್ರಶಂಸಿಸುತ್ತಿದ್ದರು.

ಗಂಗೂಬಾಯಿಯವರದು ಸರಳ ವ್ಯಕ್ತಿತ್ವ. ಯಾವುದೇ ವಿಧದ ಬಿಂಕು ಬಿನ್ನಾಣಗಳಿಲ್ಲದೆ. ಚಿಕ್ಕವರು-ದೊಡ್ಡವರೆನ್ನದೆ. ಎಲ್ಲರೊಂದಿಗೆ ಸಮಸಮವಾಗಿ ಬೆರೆಯುವ ವಿಶಾಲ ಮನಸ್ಸನ್ನು ಹೊಂದಿದ್ದರು.

ತಮ್ಮ ಸಂಗೀತ ಭಾಷೆಯ ಮೂಲಕ ದೇಶದ ಎಲ್ಲ ಶ್ರೋತೃಗಳನ್ನು ಭಾಷಾ ಭೇದವಿಲ್ಲದೆ ಸಂತುಷ್ಟ ಪಡಿಸುತ್ತಿದ್ದರು. ಈ ಮಹಾನ್ ಗಾಯಕಿ

ಕನ್ನಡಿಗರಿಂದ ಎಷ್ಟೊಂದು ಅವರ ಅಭಿಮಾನಿಗಳನ್ನು ಗಳಿಸಿದ್ದರೋ, ಅಷ್ಟೇ ಮಟ್ಟದಲ್ಲಿ ಮಹಾರಾಷ್ಟ್ರೀಯರಿಂದಲೂ ಅದರ ಅಭಿಮಾನಗಳನ್ನು ಗಳಿಸಿದ್ದರು. ಕನ್ನಡಿಗರ ಅಭಿಮಾನದ 'ಗಂಗೂಬಾಯಿ' ಮಹಾರಾಷ್ಟ್ರೀಯನ್ನರ 'ಬಡೇದೀದಿ'ಯಾಗಿದ್ದರು.

ವೈವಾಹಿಕ ಜೀವನ

ಗಂಗೂಬಾಯಿಯವರಿಗೆ 16ನೇ ವರ್ಷವಾಗಿದ್ದಾಗ ವಿವಾಹವಾಯಿತು. ಅವರ ಪತಿ ಗುರುರಾವ್ ಕೌಲಗಿ. ಅವರು ವಕೀಲ ವೃತ್ತಿಯಲ್ಲಿದ್ದರು. ಈ ದಂಪತಿಗಳಿಗೆ ಒಬ್ಬಳು ಮಗಳು – ಕೃಷ್ಣಾ ಹಾನಗಲ್, ಇಬ್ಬರು ಗಂಡು ಮಕ್ಕಳು – ಬಾಬುರಾವ್ ಹಾಗೂ ನಾರಾಯಣರಾವ್.

ಮಗಳು ಕೃಷ್ಣಾ ಹಾನಗಲ್, ತಾಯಿ ಗಂಗೂಬಾಯಿಗೆ ತಮ್ಮ ಜೀವನದುದ್ದಕ್ಕೂ ಸಾಥ್ ನೀಡಿದರು. ತಾಯಿ ಮಗಳು ಇಬ್ಬರೂ ವೇದಿಕೆ ಏರಿ ಹಾಡಲು ಕುಳಿತು ಬಿಟ್ಟರೆ, ಅಲ್ಲೊಂದು ವಿಶೇಷ ಲೋಕವೇ ಸೃಷ್ಟಿಸಿದಂತೆ ಆಗಿ ಬಿಡುತ್ತಿತ್ತು. ಇವರಿಬ್ಬರ ಗಾಯನದ ಮೋಡಿಗೆ ತಲೆಬಾಗದವರೇ, ಇರುತ್ತಿರಲಿಲ್ಲ. "ಗಂಗೂ ಹಾಡಿದರೆ ಮುಗಿಲು ಮುಟ್ಟುತ್ತದೆ ಕೃಷ್ಣಾ ಹಾಡಿದರೆ ಹೃದಯ ಮುಟ್ಟುತ್ತದೆ" ಎಂದು ಇವರಿಬ್ಬರ ಜೋಡಿಯ ಗಾಯನ ವೈಖರಿಯನ್ನು ವರ್ಣಿಸಲಾಗುತ್ತಿತ್ತು.

ಆದರೆ, ವಿಧಿಗೂ ಇವರಿಬ್ಬರ ಅನ್ಯೋನ್ಯತೆ ಸಹಿಸಲಾಗಲಿಲ್ಲವೆಂದು ಕಾಣುತ್ತದೆ. ಕೃಷ್ಣಾ ಹಾನಗಲ್‌ಗೆ ಕ್ಯಾನ್ಸರ್ ತಗುಲಿ ಅಸುನೀಗಿದಾಗ ತಾಯಿಯ ಹೃದಯಕ್ಕೆ ಸಹಿಸಿಕೊಳ್ಳಲಾಗದ ಭಾರೀ ಪೆಟ್ಟು ಬಿದ್ದಿತು. ಗಂಗೂಬಾಯಿ ಮಾನಸಿಕವಾಗಿ ಕುಗ್ಗಿ ಹೋದರು. ಆಗಾಗ್ಗೆ ಮಗಳ ನೆನಪು ಮರು ಕಳಿಸುತ್ತಿತ್ತು. 2002ರಲ್ಲಿ ಅವರಿಗೂ ಸಹ ಅದೇ ಕ್ಯಾನ್ಸರ್ ಅಂಟಿಕೊಂಡಿತು. ಮನಸ್ಸಿನ ಒಳಗೆ ಭಾರೀ ತಳಮಳವುಂಟಾಗುತ್ತಿದ್ದರೂ ಹೊರಗೆ ಅದನ್ನು ತೋರ್ಪಡಿಸುತ್ತಿರಲಿಲ್ಲ. "ಕ್ಯಾನ್ಸರ್‌ಗೆ ಹೆದರಬೇಡಿ ಏನೂ ಆಗುವುದಿಲ್ಲ. ನನ್ನನ್ನು ನೋಡಿ ಹೇಗೆ ಗಟ್ಟಿಯಾಗಿದ್ದೀನಿ" ಎಂದು ಬೇರೆಯವರಿಗೆ ಧೈರ್ಯ ಹೇಳುತ್ತಿದ್ದರು. ಕೊನೆಗೆ ಆ ಕ್ಯಾನ್ಸರ್ ಎಂಬ ಹೆಮ್ಮಾರಿಗೆ ತಾವು ಬಲಿಯಾದರು.

ತಮ್ಮ ಜೀವನದ ಕೊನೆಯಲ್ಲಿ ತಾವು ಮೊಮ್ಮಗನಿಗೆ ಹೇಳಿ ಬರೆಸಿದ "ಕ್ಯಾನ್ಸರಿಗೆ ಹೆದರಬೇಡಿ" ಪುಸ್ತಕವನ್ನು ಮುಖ್ಯ ಮಂತ್ರಿಗಳಾದ ಯಡಿಯೂರಪ್ಪನವರು ಆಕೆ ಸತ್ತ ದಿನವೇ ಬಿಡುಗಡೆ ಮಾಡಿದರು.

ನಾಡು ನುಡಿಯ ಅಭಿಮಾನಿ - ಹೋರಾಟದ ಮುಂಚೂಣಿಯಲ್ಲಿ.

ಗಂಗೂಬಾಯಿ ಹಾನಗಲ್ ಅವರಿಗೆ ಸಂಗೀತವೆಂದರೆ ಎಷ್ಟು ಪಂಚಪ್ರಾಣವೋ, ಎಷ್ಟು ಪ್ರೀತಿಯೋ ಅಷ್ಟೇ ಪ್ರೀತಿ ಅವರ ಅಭಿಮಾನವನ್ನು ನಾಡು-ನುಡಿಯ ಮೇಲೆಯೂ ಹೊಂದಿದ್ದರು. ನಾಡು ನುಡಿಯ ಹಿತಾಸಕ್ತಿಗೆ ಧಕ್ಕೆ ಬಂದಾಗಲೆಲ್ಲ ಕನ್ನಡ ಪರ ಸಂಘಟನೆಗಳು ನಡೆಸುತ್ತಿದ್ದ ಹೋರಾಟದಲ್ಲಿ, ಚಳುವಳಿಗಳಲ್ಲಿ ಸ್ವಯಂ ಪ್ರೇರಿತರಾಗಿ ತಾವೂ ಭಾಗವಹಿಸಿ ಚಳುವಳಿಗೆ ಜೀವ ತುಂಬುತ್ತಿದ್ದರು.

1982ರಲ್ಲಿ ರಾಜ್ಯದಾದ್ಯಂತ ಗೋಕಾಕ್ ವರದಿಯ ಅನುಷ್ಠಾನಕ್ಕಾಗಿ ನಡೆದ ಚಳುವಳಿ ಬೃಹದಾಕಾರ ತಾಳಿ ನಾಡಿನಾದ್ಯಂತ ಪಸರಿಸಿತ್ತು. ಸಾಹಿತಿಗಳೂ ಕಲಾವಿದರು, ಶಿಕ್ಷಕರು, ವಿದ್ಯಾರ್ಥಿಗಳು, ಹೀಗೆ ಸಮಾಜದ ಎಲ್ಲ ಸ್ತರದ ಜನರೂ ಸ್ವಯಂ ಪ್ರೇರಿತರಾಗಿ ಈ ಬೃಹತ್ ಚಳುವಳಿಯಲ್ಲಿ ಪಾಲ್ಗೊಂಡರು. ಅಷ್ಟೇ ಅಲ್ಲ, ಇಡೀ ಕನ್ನಡ ಚಿತ್ರರಂಗಕ್ಕೆ ಚಿತ್ರರಂಗವೇ ಮೇರು ನಟ ಡಾ.ರಾಜಕುಮಾರ್ ಅವರ ನಾಯಕತ್ವದಲ್ಲಿ ಚಳುವಳಿಯಲ್ಲಿ ಭಾಗವಹಿಸಿತ್ತು.

ಆ ಸಮಯದಲ್ಲಿ ರಾಜ್ಯದ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು ಗಂಗೂಬಾಯಿ ಹಾನಗಲ್ ಅವರು. ಸರ್ಕಾರದ ಅಂದಿನ ಕನ್ನಡ ವಿರೋಧಿ ನೀತಿಯನ್ನು ವಿರೋಧಿಸಿ ಅಕಾಡೆಮಿ ಅಧ್ಯಕ್ಷಸ್ಥಾನಕ್ಕೆ ಸ್ವಯಂ ಪ್ರೇರಿತರಾಗಿ ರಾಜೀನಾಮೆ ಸಲ್ಲಿಸಿ ಚಳುವಳಿಯಲ್ಲಿ ತಾವೂ ಭಾಗಿಗಳಾದರು.

ಅದೇ ರೀತಿ ನೈರುತ್ಯ ರೈಲ್ವೆ ವಲಯವನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಬೇಕೆಂದು ಆಗ್ರಹಿಸಿ ನಡೆಯುತ್ತಿದ್ದ ಹೋರಾಟದಲ್ಲಿಯೂ ಸಹ ಇವರು ಭಾಗವಹಿಸಿ ಹೋರಾಟಕ್ಕೆ ಬೆಂಬಲವಾಗಿ ನಿಂತರು.

ಹುಬ್ಬಳ್ಳಿಯ ವಿವಾದಿತ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಾಟಕ್ಕೆ ಅವಕಾಶ ನೀಡುವಂತೆ ಒತ್ತಾಯಿಸಿ ಏರ್ಪಡಿಸಿದ್ದ ಹೋರಾಟದಲ್ಲಿಯೂ ಸಹ ಭಾಗವಹಿಸಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಹುಬ್ಬಳ್ಳಿ ಧಾರವಾಡ ಅವಳಿ ನಗರದಲ್ಲಿ ರಾಜ್ಯ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಒತ್ತಾಯಿಸಿ ನಡೆಸಿದ ಹೋರಾಟದಲ್ಲಿಯೂ ಸಹ ಕ್ರಿಯಾತ್ಮಕವಾಗಿ ಭಾಗವಹಿಸಿದ್ದರು.

ಹೀಗೆ ಒಂದೇ ಎರಡೇ? ಕನ್ನಡ ನಾಡು ನುಡಿಯ ಪರವಾಗಿ ನಡೆದ ಎಲ್ಲಾ ಹೋರಾಟಗಳಲ್ಲಿಯೂ ಇತರರಿಗೆ ಮಾದರಿಯಾಗುವಂತೆ ತಾವೂ ಸಹ ಅವೆಲ್ಲವುಗಳಲ್ಲಿ ಭಾಗವಹಿಸುತ್ತಿದ್ದರು.

ಹೋರಾಟದ ಮನೋಭಾವ.

ಮೊದಲಿನಿಂದಲೂ ಹೋರಾಟದ ಮನೋಭಾವವನ್ನೂ ಮೈಗೂಡಿಸಿಕೊಂಡಿದ್ದ ಗಂಗೂಬಾಯಿಯವರು ಎಪ್ಪತ್ತರ ದಶಕದಲ್ಲಿ ಆಕಾಶವಾಣಿಯಲ್ಲಿ ದಿನಗೂಲಿ ನೌಕರರೆಂದು ಪರಿಗಣಿಸಲ್ಪಟ್ಟಿದ್ದ ಕಲಾವಿದರನ್ನು ಖಾಯಂ ಗೊಳಿಸಬೇಕೆಂದು ಒತ್ತಾಯಿಸಿ ಹೋರಾಟ ನಡೆಸಿದರು. ಆಗ ವಾರ್ತಾ ಮತ್ತು ಪ್ರಸಾರ ಇಲಾಖೆಯ ಸಚಿವರಾಗಿದ್ದವರು ಇಂದಿರಾ ಗಾಂಧಿಯವರು. ಅವರ ವಿರುದ್ಧವೇ ಧರಣಿ ಸತ್ಯಾಗ್ರಹವನ್ನು ನಡೆಸಿದರು. ತಮ್ಮ ದಿಟ್ಟ ನಿಲುವನ್ನು ಗಟ್ಟಿಯಾಗಿ ಪ್ರದರ್ಶಿಸಿದರು. ಇದಾದ ಮೂರು ತಿಂಗಳೊಳಗೆ ಇವರ ಹೋರಾಟಕ್ಕೆ ಜಯಸಿಕ್ಕಿತು. ದಿನಗೂಲಿ ಕಲಾವಿದರನ್ನೆಲ್ಲಾ ಕಾಯಂ ಗೊಳಿಸಲಾಯಿತು.

ಸಾಂಸ್ಕೃತಿಕ ರಾಯಭಾರಿ – ವಿಶ್ವ ಪರ್ಯಟನ

ಗಂಗೂಬಾಯಿಯವರು ಶಾಲೆಯಲ್ಲಿ ಸಾಂಪ್ರದಾಯಿಕ ಶಿಕ್ಷಣ ಪಡೆದಿದ್ದು ಬಹಳ ಕಡಿಮೆ. ಓದಿದ್ದು ನಾಲ್ಕನೇ ತರಗತಿಯವರೆಗೆ ಮಾತ್ರ. ಆದರೆ ಅವರು ಪಡೆದ ಜಾಗತಿಕ ಅನುಭವ ಮಾತ್ರ ಅಪಾರವಾದುದು– ವೈವಿಧ್ಯಮಯವಾದುದು.

ಕನ್ನಡ ಭಾಷೆಯಷ್ಟೇ ಇತರ ಭಾಷೆಗಳನ್ನೂ ಅಂದರೆ ಹಿಂದಿ, ಮರಾಠಿ, ಉರ್ದು, ತೆಲುಗು ಭಾಷೆಗಳಲ್ಲೂ ಮಾತನಾಡುತ್ತಿದ್ದರು. ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಸ್ಫುಟವಾಗಿ ಬರೆಯುತ್ತಿದ್ದರು.

ಅಮೇರಿಕ, ಇಂಗ್ಲೆಂಡ್, ಫ್ರಾನ್ಸ್, ಕೆನಡ, ಜರ್ಮನಿ, ನೇಪಾಳ ಹಾಗೂ ನೆರೆ ರಾಷ್ಟ್ರವಾದ ಪಾಕೀಸ್ಥಾನಕ್ಕೂ ಭೇಟಿ ನೀಡಿದ್ದರು. ಅಲ್ಲೆಲ್ಲಾ ಸಂಗೀತದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಾರತದ ಸಾಂಸ್ಕೃತಿಕ ರಾಯಭಾರಿ ಎನಿಸಿ ಕೊಂಡರು.

1947ಕ್ಕೂ ಮುಂಚೆ ಅಂದರೆ ಭಾರತವು ಸ್ವಾತಂತ್ರ್ಯ ಹೊಂದುವುದಕ್ಕೆ ಮುಂಚೆ ಪಾಕಿಸ್ತಾನದ ಕರಾಚಿಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದರು. ಅಷ್ಟೇ

ಅಲ್ಲಿ ಸ್ವಾತಂತ್ರ್ಯ ಪಡೆದ ನಂತರವೂ ಸಹ ಆ ದೇಶಕ್ಕೆ ಭೇಟಿ ನೀಡಿದ ಭಾರತೀಯ ಸಾಂಸ್ಕೃತಿಕ ನಿಯೋಗದಲ್ಲಿಯೂ ಸಹ ಪ್ರತಿನಿಧಿಯಾಗಿ ತೆರಳಿದ್ದರು.

ಹುಬ್ಬಳ್ಳಿಯೊಂದಿಗೆ ಅವಿನಾಭಾವ ಸಂಬಂಧ

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದ, ದೇಶ ವಿದೇಶಗಳಲ್ಲಿ ಪ್ರವಾಸ ಮಾಡಿದ್ದ ಗಂಗೂಬಾಯಿಯವರಿಗೆ ಹುಬ್ಬಳ್ಳಿಯೊಂದಿಗೆ ಇದ್ದುದು ಅವಿನಾಭಾವ ಸಂಬಂಧ. ಹುಬ್ಬಳ್ಳಿಯನ್ನು ಬಿಟ್ಟು ಹೋಗುವ ಬಗ್ಗೆ ಅವರು ಕನಸು ಮನಸಿನಲ್ಲಿಯೂ ಯೋಚಿಸಿರಲಿಲ್ಲ. "ನನ್ನನ್ನು ಹುಬ್ಬಳ್ಳಿ ಬಿಡುವುದಿಲ್ಲ - ಹುಬ್ಬಳ್ಳಿಯನ್ನು ನಾನೂ ಬಿಡುವುದಿಲ್ಲ" ಎನ್ನುತ್ತಿದ್ದರು.

ಗಂಗೂಬಾಯಿಯವರು ಹುಬ್ಬಳ್ಳಿಯಲ್ಲಿ ವಾಸ ಮಾಡುತ್ತಿದ್ದುದರಿಂದ ಇಡೀ ಪ್ರಪಂಚವೇ ಹುಬ್ಬಳ್ಳಿಯನ್ನು ಗೌರವಿಸುತ್ತಿತ್ತು.

ಹುಬ್ಬಳ್ಳಿ ನನ್ನ ಮನೆ - ಬೆಳಗಾವಿ ನನ್ನ ತವರುಮನೆ

1997, ಏಪ್ರಿಲ್, 10,11,12ರಂದು ಬೆಳಗಾವಿಯಲ್ಲಿ ನೀಡಿದ ಅವರ ಸಂಗೀತ ಕಛೇರಿಯು ಅವರ ಕೊನೆಯ ಸಾರ್ವಜನಿಕ ಕಛೇರಿಯೆನಿಸಿದೆ. ಇದಾದ ನಂತರ ಮತ್ತೆ ಇನ್ನೊಂದು ಅವರು ಸಾರ್ವಜನಿಕ ಸಮಾರಂಭಗಳಲ್ಲಿ ಹಾಡಲೇ ಇಲ್ಲ.

1924ರಲ್ಲಿ, ತನ್ನ 11ನೇ ವಯಸ್ಸಿನಲ್ಲಿ, ಪ್ರಪಥಮವಾಗಿ, ಕಾಂಗ್ರೆಸ್ ಅಧಿವೇಶನದ ವೇದಿಕೆ ಹತ್ತಿದ್ದೇ ಬೆಳಗಾಂನಲ್ಲಿ. ಇವರ ಸಾರ್ವಜನಿಕ ಸಂಗೀತ ಕಛೇರಿಯ ಕೊನೆಯ ವೇದಿಕೆ ಆಗಿದ್ದೂ ಇಲ್ಲಿಯೇ! ಎಷ್ಟೊಂದು ಕಾಕ ತಾಳೀಯ! ಅಂದು ಅವರು ಹಾಡಿದ್ದ ಆ ಐತಿಹಾಸಿಕ ಸ್ಥಳ ಇಂದು ವೀರಸೌಧ ಎಂದು ಹೆಸರು ಪಡೆದಿದೆ. ಆಂಗ್ಲರನ್ನು ಎದುರಿಸಲು ಹೋರಾಟದ ಕಿಚ್ಚನ್ನು ಪ್ರಜ್ವಲಿಸಲು ಕಾಂಗ್ರೆಸ್ ತನ್ನ ಅಧಿವೇಶನದ ವೇದಿಕೆಯನ್ನಾಗಿ ಮಾಡಿಕೊಂಡಿದ್ದ ಅಂದಿನ ಕಾಂಗ್ರೆಸ್ ಬಾವಿ ಇಂದಿಗೂ ನೆನಪಾಗಿ ಉಳಿದಿದೆ.

ಆಗಾಗ್ಗೆ ಬೆಳಗಾವಿಗೆ ಬಂದು ತಮ್ಮ ಕಾರ್ಯಕ್ರಮವನ್ನು ನೀಡುತ್ತಿದ್ದ ಗಂಗೂಬಾಯಿಗೆ ಬೆಳಗಾವಿ ಎಂದರೆ ಹೃದಯ ತುಂಬಿದ ಅಭಿಮಾನ; ಬೆಳಗಾವಿ ತಮ್ಮ ತವರು ಮನೆ ಎಂದು ಅಭಿಮಾನ ಪಡುತ್ತಿದ್ದರು. "ಹುಬ್ಬಳ್ಳಿ ನನ್ನ ಮನೆಯೆಂದರೆ ಬೆಳಗಾವಿ ನನ್ನ ತವರು ಮನೆ ಎನ್ನುತ್ತಿದ್ದರು.

ಗಂಗಾಲಹರಿ – ಸಂಗೀತ ವಸ್ತು ಸಂಗ್ರಹಾಲಯ

ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿ ಎರಡನೇ ಕ್ರಾಸಿನಲ್ಲಿರುವ "ಗಂಗಾಲಹರಿ" ಗಂಗೂಬಾಯಿಯವರು ವಾಸಿಸುತ್ತಿದ್ದ ಸ್ಥಳ. ಇಂದು ತನ್ನ ಒಡತಿಯನ್ನು ಕಳೆದುಕೊಂಡಿದೆ. ಮನೆ ತುಂಬ ಹರಡಿರುವ ಅವರು ಪಡೆದ ಪ್ರಶಸ್ತಿ ಪುರಸ್ಕಾರಗಳು, ಬಿರುದು–ಬಾವಲಿಗಳು ಅಲ್ಲೇ ಇವೆ. ಆದರೆ ಅದನ್ನು ಪಡೆದ ಜೀವಂತ ವ್ಯಕ್ತಿ ಮಾತ್ರ ಕಾಣದಾಗಿದೆ.

ಗಂಗೂ ಬಾಯಿಯವರಿಗೆ, ಗಂಗಾಲಹರಿಯೊಂದಿಗೆ ಭಾವನಾತ್ಮಕ ಸಂಬಂಧವಿತ್ತು. ದೇಶವಿದೇಶಗಳಿಂದ ಹೆಸರಾಂತ ಗಾಯಕರು, ಕಲಾವಿದರು ಇಲ್ಲಿಗೆ ಬರುತ್ತಿದ್ದರು. – ಉಳಿಯುತ್ತಿದ್ದರು. ತಮ್ಮ ತಮ್ಮ ಸಂಗೀತ ಸಾಧನೆಯ ವಿದ್ವತ್ ಪ್ರದರ್ಶನ ನೀಡುತ್ತಿದ್ದರು. ಉಸ್ತಾದ್ ಬಿಸ್ಮಿಲ್ಲಾ ಖಾನ್, ಭೀಮಸೇನ ಜೋಷಿ, ಪಂಡಿತ ರವಿಶಂಕರ ಜೋಷಿ, ಕುಮಾರ ಗಂಧರ್ವ, ಎಂ.ಎಸ್. ಸುಬ್ಬುಲಕ್ಷ್ಮಿ – ಹೀಗೆ ಒಬ್ಬರೇ, ಇಬ್ಬರೇ, ಇಲ್ಲಿಗೆ ಭೇಟಿ ನೀಡಿದ ಸಂಗೀತ ದಿಗ್ಗಜರೇ ಇರಲಿಲ್ಲವೆಂದು ಹೇಳಬಹುದು.

ಇಂದು ಈ ಜಾಗದಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತ ವಸ್ತು ಸಂಗ್ರಹಾಲಯ ರೂಪುಗೊಂಡಿದೆ. ಇದು ಇಡೀ ಭಾರತದಲ್ಲಿಯೇ ಮೊದಲ ಖಾಸಗಿ ಸಂಗೀತ ವಸ್ತು ಸಂಗ್ರಹಾಲಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಅಷ್ಟೇ ಅಲ್ಲ ರಾಷ್ಟ್ರದಲ್ಲಿಯೇ ಎರಡನೇ ದೊಡ್ಡ ವಸ್ತು ಸಂಗ್ರಹಾಲಯವೆನಿಸಿಕೊಂಡಿದೆ.

ಇಲ್ಲಿ ಅಪರೂಪದ ಸಂಗೀತ ಪರಿಕರಗಳನ್ನು ಸಂಗ್ರಹಿಸಿಡಲಾಗಿದೆ. ಹಿಂದೂಸ್ತಾನಿ ಸಂಗೀತ ಕ್ಷೇತ್ರದ ವಿದ್ವನ್ಮಣಿಗಳು, ಪ್ರಶಸ್ತಿ ಫಲಕಗಳು, ಸ್ಮರಣ ಫಲಕಗಳು ಇವೇ ಮೊದಲಾದವುಗಳ ಸಂಗ್ರಹಣೆಯನ್ನು ಮಾಡಲಾಗಿದೆ.

ಗಂಗೂಬಾಯಿಯವರಿಗೆ ಸಂದಿರುವ ರಾಷ್ಟ್ರೀಯ ಪುರಸ್ಕಾರಗಳು, ಸನ್ಮಾನ ಪತ್ರಗಳು, ನೆನಪಿನ ಕಾಣಿಕೆಗಳು ಶಾಸ್ತ್ರೀಯ ಸಂಗೀತ ಹಾಗೂ ಜನಪದ ಸಂಗೀತದ ವಾದ್ಯಗಳನ್ನು ವ್ಯವಸ್ಥಿತವಾಗಿ, ಅಂದವಾಗಿ ಜೋಡಿಸಿಡಲಾಗಿದೆ.

ಮತ್ತೊಂದು ವಿಶೇಷತೆ ಎಂದರೆ, ಮಹಾನ್ ಸಂಗೀತ ಕಲಾವಿದರ ಸಾಧನೆಗಳ ದಾಖಲೆಗಳನ್ನು, ಅವರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಅಷ್ಟೇ ಅಲ್ಲ, ಗಂಗೂಬಾಯಿಯವರು ತಮ್ಮ ಜೀವಿತಾವಧಿಯಲ್ಲಿ ಬಳಸುತ್ತಿದ್ದ ತಂಬೂರಿಯೂ ಇಲ್ಲಿ ತನ್ನ ಸ್ಥಾನವನ್ನು ಪಡೆದಿದೆ.

ಗಂಗೂಬಾಯಿಯವರ ಗುರು ಸವಾಯಿ ಗಂಧರ್ವ, ಮತ್ತು ಅವರ ಮಗ ಕುಮಾರ ಗಂಧರ್ವ ಹಾಗೂ ಡಾ. ಭೀಮಸೇನ ಜೋಶಿ, ಡಾ. ಮಲ್ಲಿಕಾರ್ಜುನ ಮನ್ಸೂರ, ಡಾ.ಬಸವರಾಜ ರಾಜಗುರು. ಮುಂತಾದ ಕರ್ನಾಟಕದ ಹಿಂದೂಸ್ತಾನಿ ಸಂಗೀತ ಶ್ರೇಷ್ಠರು ಬಳಸಿದ ಸಂಗೀತ ಸಲಕರಣೆಗಳನ್ನು ಗಂಗಾಲಹರಿಯಲ್ಲಿ ಜೋಡಿಸಿಡಲಾಗಿದೆ.

ಇಲ್ಲಿಗೆ ಭೇಟಿ ನೀಡಿರುವ ಅನೇಕ ಸಂಗೀತ ಪ್ರೇಮಿಗಳು ತಮ್ಮ ಅತೀವ ಹರ್ಷವನ್ನು ವ್ಯಕ್ತ ಪಡಿಸಿದ್ದಾರೆ.

ನನ್ನ ಬದುಕಿನ ಹಾಡು – ಆತ್ಮಕತೆ

ಗಂಗೂಬಾಯಿಯವರು ತಮ್ಮ ಜೀವನದ ಉದ್ದಕ್ಕೂ ಸಂಗೀತವನ್ನು ಪ್ರೀತಿಸುತ್ತಿದ್ದರು. ಕನ್ನಡದ ನೆಲವನ್ನು ಪ್ರೀತಿಸುತ್ತಿದ್ದರು. ಕರ್ನಾಟಕದ ಹಿಂದೂಸ್ಥಾನಿ ಸಂಗೀತಗಾರರು, ಕನ್ನಡ ನಾಡಿಗಿಂತಲೂ, ರಾಜ್ಯದ ಹೊರಗೆ ನೆಲೆಸಿ ಪ್ರಸಿದ್ಧಿಗೊಂಡಿದ್ದೇ ಹೆಚ್ಚು. ಆದರೆ ಗಂಗೂಬಾಯಿ ಕನ್ನಡ ನೆಲದಲ್ಲಿಯೇ ನೆಲೆಯೂರಿದರು. – ಇಲ್ಲಿಯೇ ಪ್ರಸಿದ್ಧರಾದರು. ಇಲ್ಲಿಂದಲೇ ದೇಶವಿದೇಶಗಳಲ್ಲಿ ಕೀರ್ತಿ ಸಂಪಾದಿಸಿದರು. ತಮ್ಮ ಮರಣಾ ನಂತರ ಕನ್ನಡದ ಮಣ್ಣಿನಲ್ಲಿಯೇ ಲೀನವಾದರು. ಪಂಚಭೂತಗಳಲ್ಲಿ ಲೀನವಾದರು.

ತಮ್ಮ ಸಾವಿನಲ್ಲಿಯೂ ಮಾನವೀಯತೆ ಮೆರೆದರು. ನೇತ್ರದಾನ ಮಾಡುವ ಮೂಲಕ ಇಬ್ಬರು ದೃಷ್ಟಿಹೀನರಿಗೆ ಲೋಕವನ್ನು ನೋಡುವ ಅಪೂರ್ವ ಅವಕಾಶವನ್ನು ಮಾಡಿಕೊಟ್ಟು ಧನ್ಯವಾದರು.

ನನ್ನ ಬದುಕಿನ ಹಾಡು ಗಂಗೂಬಾಯಿಯವರ ಆತ್ಮಕತೆ. (ಅದನ್ನು ಇಂಗ್ಲೀಷಗೆ Song of my life ಎಂದು ಅನುವಾದವಾಗಿದೆ) ಅವರ ಬದುಕು ಲೋಕದಿಂದ ಮರೆಯಾಗಿರಬಹುದು. ಆದರೆ ಅವರು ಹಾಡಿದ ಹಾಡು ಸದಾ ಸಂಗೀತ ಪ್ರೇಮಿಗಳಲ್ಲಿ ಸದಾ ಅನುರಣಿಸುತ್ತಿರುತ್ತದೆ.

ಓನಲ್ಮೆ ಕಾಮಧೇನು...

ತಾಯೇ, ನಿನ್ನ ಗುಣಗಾನವ ಹೇಗೆ ಮಾಡಲಿ?
ಜಗದ ಯುಗದ ಚಿರಂತನ ಝರಿ ನಿನ್ನ ದನಿಯಲ್ಲಿ!
ಅಭಿರುಚಿಗೆ ಮತ್ತೊಂದು ಹೆಸರು ನೀನು
ಸಂಗೀತ ಕ್ಷಿತಿಜ ಕಂಡ ಓನಲ್ಮೆ ಕಾಮಧೇನು
ಸೃಜನಶೀಲೆ, ಸಂಸ್ಕೃತಿ ಪ್ರಿಯೆ, ಸಂಪ್ರದಾಯಿನಿ
ಶಾಸ್ತ್ರೀಯ ಶೈಲಿ ಮಾಧುರ್ಯಾದ ಸಿರಿ ಸಂವರ್ಧಿನಿ.
ಕಳಶವಿಟ್ಟೆ, ಕಾಣ್ಕೆ ಕೊಟ್ಟೆ, ಓ! ಹಿಂದೂಸ್ತಾನಿ
ಸ್ವೋಪಜ್ಞತೆ ಧಾರೆಯೆರೆದ ಅಮೃತವರ್ಷಿಣಿ!
ಎನಿತು ಬಣ್ಣಿಸೆ, ಅನಿತೂ ಪ್ರತಿಭೆ ನಿನ್ನಯ ದನಿ
ಮಾರ್ದನಿಸಿದೆ ಅನುಕ್ಷಣವೂ ನಿನ್ನ ಮಧುರವಾಹಿನಿ

ಡಾ. ದೊಡ್ಡ ರಂಗೇಗೌಡ

(21.7.2009ರಂದು ಗಂಗೂಬಾಯಿಯವರಿಗೆ ವಿಧಾನ ಪರಿಷತ್ತಿನಲ್ಲಿ ಕವಿತೆ ಮೂಲಕ ಸಲ್ಲಿಸಿದ ನುಡಿ ನಮನ.)

ಗಂಗೂಬಾಯಿ–ಒಂದು ಸಂಗೀತ ರೂಪಕ

– ಡಾ. ವಿಜಯಾ ಸುಬ್ಬರಾಜ್

ಗಂಗೂಬಾಯಿ ಹಾನಗಲ್ ಇನ್ನಿಲ್ಲ ಎನ್ನುವ ಕಲ್ಪನೆಯೇ ಮನಸ್ಸನ್ನು ಅಸ್ವಸ್ಥಗೊಳಿಸುತ್ತದೆ. ಇನ್ನಿಲ್ಲವೆನ್ನುವ ಮಾತೂ ಅರ್ಥಹೀನ. ಸಂಗೀತದಾಗಸದ ಧ್ರುವತಾರೆಯಾಗಿರುವವರಿಗೆ ಸಾವೆಂಬುದು ಇಲ್ಲವೇ ಇಲ್ಲ. ಭೌತಿಕ ಶರೀರದ ಸಂಕೋಲೆಗಳಿಂದ ಮುಕ್ತಗೊಂಡ ಆ ದಿವ್ಯ ಚೇತನ ಈ ದೇಶದ ಅಣು ಅಣುವಿನಲ್ಲೂ ತನ್ನ ಸಂಗೀತವನ್ನು ಅನುರಣಿಸುತ್ತಿದೆ. ವಾಸ್ತವವಾಗಿ ಸಾವೆಂಬುದೇ ಸುಳ್ಳು. ಬದುಕಿನ ಪಯಣದಲ್ಲಿ ಭೂಮಿಯೊಂದು ತಂಗುದಾಣ. ಇದ್ದಷ್ಟು ದಿನವಿದ್ದು ಮುಂದಿನ ಪಯಣಕ್ಕೆ ಸಜ್ಜಾಗುವುದೇ ಸಾವು!!

ಪ್ರಶಸ್ತಿಗಳು, ಬಿರುದುಗಳು, ಸನ್ಮಾನಗಳು, ಸಂಗೀತ ಜಗತ್ತಿನ ಸಾಹಸಗಳು, ಮೂಡಿಸಿದ ಅಳಿಸಲಾಗದ ಹೆಜ್ಜೆ ಗುರುತುಗಳು, ಗಳಿಸಿದ ಕೋಟಿ ಕೋಟಿ ಹೃದಯಗಳ ಅಭಿಮಾನದ ಸಿರಿ ಸಂಪತ್ತು, ಗಂಗೂಬಾಯಿ ಅವರನ್ನು ಒಂದು ಪವಾಡ, ಒಂದು ರೂಪಕ, ಈ ಶತಮಾನದ ಒಂದು ವಿಸ್ಮಯ ಎಂದು ಭಾವಿಸುವಂತೆ ಮಾಡಿದೆ. ಪಡೆದ ಬಿರುದುಗಳು ಮುಗಿದು ಹೋಗಿ ಹೊಸ ಹೊಸ ಬಿರುದುಗಳ ಅನ್ವೇಷಣೆಗೆ ಹಚ್ಚಿದರೋ ಎನಿಸುತ್ತದೆ. ಸಂಗೀತ ಶಿರೋಮಣಿ ಸಂಗೀತ ಸರಸ್ವತಿ, ಸಂಗೀತ ಸಾಮ್ರಾಜ್ಞಿ, ನಾದ ಬ್ರಹ್ಮಿಣಿ, ಸ್ವರ ಚಿಂತಾಮಣಿ, – ಹೀಗೇ ಬಿರುದುಗಳ ಸರಮಾಲೆ ಸಾಗುತ್ತ ಹೇಳುವವರನ್ನು ದಣಿಸುತ್ತದೆಯೇ ಹೊರತಾಗಿ ಪಡೆದವರಿಗೆ ಇವುಗಳೂ ಸಾಲದೆನಿಸುತ್ತದೆ. ಅನನ್ಯವಾದ ಸಂಗೀತ ಪ್ರತಿಭೆಯುಳ್ಳ ಗಂಗೂಬಾಯಿಯವರನ್ನು ಸಂಕ್ಷೇಪವಾಗಿ ಸಂಗೀತಕ್ಕೊಂದು ರೂಪಕವಾಗಿದ್ದಾರೆನ್ನುವುದೇ ಸೂಕ್ತವಾಗುತ್ತದೆ. ತೊಂಬತ್ತೇಳು ವರ್ಷಗಳ ತುಂಬು ಬದುಕನ್ನು ಅರ್ಥಪೂರ್ಣವಾಗಿ ಬದುಕಿದರು. ತಮ್ಮ ಸಂಗೀತವಿದ್ವತ್ತು. ವ್ಯಕ್ತಿತ್ವಗಳ ಮೂಲಕ ರಾಜ್ಯ, ರಾಷ್ಟ್ರ ಗಡಿಗಳಾಚೆಗೂ ಚಾಚಿಕೊಂಡು ರಾಷ್ಟ್ರದ ಕೀರ್ತಿ ಪತಾಕೆಯಾಗಿ ನೆಲೆ ನಿಂತರು. ಹಿಂದೂಸ್ತಾನಿ ಕಿರಾಣಾಘರಾಣೆಯನ್ನು ಪ್ರತಿನಿಧಿಸುವ ಗಂಗೂಬಾಯಿಯವರ ಸಂಗೀತ

ಸಾಧನೆಯ ಅನನ್ಯತೆ ಮಾತಿಗೆ ಮೀರಿದ್ದು. ಈ ಸಂಪ್ರದಾಯದ ಪ್ರಮುಖರಾದ ಏಳು ಮಂದಿ ವಿದುಷಿಯರಲ್ಲಿ ಗಂಗೂಬಾಯಿಯವರದು ಎರಡನೇ ಸ್ಥಾನ. ಕೇಶುಬಾಯಿ ಕೇಡಕರ್, ರೋಷನ್‌ಸಾರಾಬೇಗಂ, ರಸೂಲ್‌ಬಾಯಿ, ಮೂಗುಬಾಯಿ ಕುರ್ಡೀಕರ್, ಹೀರಾಬಾಯಿ ಬರೋಡೆಕರ್, ಬೇಗಂ ಅಖ್ತರ್ ಮುಂತಾದ ವಿಶ್ವ ವಿಖ್ಯಾತರ ಸಾಲಿನಲ್ಲಿ ನಿಲ್ಲುವುದು ಸಾಮಾನ್ಯವಲ್ಲ.

ಗಂಗೂಬಾಯಿಯವರ ಸಂಗೀತ ಪ್ರತಿಭೆ ಹುಟ್ಟಿನಿಂದಲೇ ಇದ್ದಿರಬಹುದಾದರೂ ಸಾಧನೆಯ ಸಾಣೆಯಿಂದ ಪ್ರಖರತೆಯನ್ನು ಪಡೆಯಿತು. ನಾದ, ಲಯ, ಸ್ವರಗಳು ಪಲುಕುಗಳು ಸಾಧನೆಯ ಮೂಲಕವೇ ಹಿಡಿತದಲ್ಲಿರಿಸಿಕೊಂಡು ತಮ್ಮ ಮನೋಧರ್ಮಕ್ಕನುಗುಣವಾಗಿ ಅವುಗಳನ್ನು ಕುಣಿಸಿದರು.

'ಗಂಗಾ-ಲಹರಿ ಎಂಬ ಗಂಗೋತ್ರಿಯಿಂದ ಹೊಮ್ಮಿದ ಈ ಗಾನ ಗಂಗೆ, ಹತ್ತು ಹಲವು ಕವಲುಗಳಲ್ಲಿ ಹರಿದು ಸಂಗೀತ ಪ್ರೇಮಿಗಳ, ಸಂಗೀತ ಆರಾಧಕರ ತಪ್ತಮನಗಳನ್ನು ತಣಿಸಿದರು. ನಾದ ಸವಿಯನ್ನು ಉಣಿಸಿದರು. ವಿಶ್ವವನ್ನೇ ತಲೆದೂಗಿಸುವ ಸಂಗೀತದ ಮೋಡಿಗಾರ್ತಿ ಗಂಗೂಬಾಯಿಯವರು ಸಾಧನೆಯ ಶಿಖರವನ್ನು ತಲುಪಲು ಬದುಕಿನ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ಯಶಸ್ಸು, ಕೀರ್ತಿಗಳು ಸುಲಭದಲ್ಲಿ ಸಾಧ್ಯವಾಗುವುದಿಲ್ಲ. ಹೆಜ್ಜೆ ಹೆಜ್ಜೆಗೂ ಅಡ್ಡಿ ಅತಂಕಗಳು ಅನೇಕ ರೂಪಗಳಲ್ಲಿ ಎದುರಾಗುತ್ತವೆ. ಅದರೂ ಸಾಧನೆಯ ಗುರಿ ಮುಟ್ಟಲೇಬೇಕೆಂಬ ಛಲವಾದಿಗಳಿಗೆ ಸಾಹಸಿಗಳಿಗೆ, ಸವಾಲುಗಳು ಸಮಸ್ಯೆಗಳೆನಿಸುವುದಿಲ್ಲ. ಗಂಗೂಬಾಯಿಯವರೂ ಇದಕ್ಕೆ ಹೊರತಲ್ಲ. ಹಿಂದುಳಿದ ಜಾತಿ. ಕುಟುಂಬದ ಬಡತನ. ಅವರ ಅದಮ್ಯ ಅಕಾಂಕ್ಷೆಯನ್ನು ದಮಿಸಲಿಲ್ಲ. ಜನ್ಮ ಕೊಟ್ಟ ತಾಯಿಯ ಸಂಗೀತ ಪ್ರೀತಿ, ಸಂಗೀತ ಪ್ರತಿಭೆಗಳು ಇವರಿಗೆ ಹಸ್ತಾಂತರವಾಯಿತು. 1913ರ ಮಾರ್ಚ್ 5 ರಂದು ಜನಿಸಿದ ಗಂಗೂಬಾಯಿ ಬಹುಶಃ ಹುಟ್ಟಿನಿಂದಲೇ ಸಂಗೀತವನ್ನು ವಾರಿಸೊತ್ತಿಗೆಯಾಗಿ ಪಡೆದರೆನಿಸುತ್ತದೆ. ಜೊತೆಗೆ ಬಾಲ್ಯದಲ್ಲಿಯೇ ವ್ಯಕ್ತಗೊಂಡ ಸಂಗೀತಾಸಕ್ತಿ, ತಾಯಿ ಅಂಬಾಬಾಯಿಯವರ ಗಮನಕ್ಕೆ ಬಂದು ಅವರಿಂದಲೇ ಸಂಗೀತದೀಕ್ಷೆ ದೊರೆಯಿತು. ಕರ್ನಾಟಕ ಸಂಗೀತ ವಿದುಷಿಯಾಗಿದ್ದ ಅವರು ಮಗಳಿಗೆ ಹಿಂದುಸ್ಥಾನಿ ಸಂಗೀತ ಶಿಕ್ಷಣ. ಕೊಡಿಸಲು ಮುಂದಾದರು. ಅಷ್ಟೆ ಅಲ್ಲದೆ ಯಾವುದೇ ಸಂಘರ್ಷಗಳಿಗೆ ದಾರಿಯಾಗಬಾರದೆಂದೆಣಿಸಿ, ತಾವು ಸಂಗೀತ ಸಾಧನೆಯನ್ನು ನಿಲ್ಲಿಸಿದರು. ಗಂಗೂಬಾಯಿಯವರ ಮನದಲ್ಲಿ ತಾಯಿಯ ಈ ತ್ಯಾಗದ ನೆನಪು ನಿರಂತರ ನೆಲೆಗೊಂಡಿತ್ತು.

ಸಹಜ ಸಂಗೀತ ಪ್ರತಿಭೆಯಿದ್ದರೂ ಗುರುಗಳ ಮಾರ್ಗದರ್ಶನ, ಅವರ ಅನುಗ್ರಹಗಳ ಅನಿವಾರ್ಯತೆಯರಿತು ಕುಂದಗೋಳದಲ್ಲಿದ್ದ ಸವಾಯಿ ಗಂಧರ್ವರಲ್ಲಿ ಸಂಗಿತ ಶಿಕ್ಷಣ ಪಡೆಯಲು ಮುಂದಾದರು. ಪ್ರತಿದಿನ ಧಾರವಾಡದ ಶುಕ್ರವಾರ ಪೇಟೆಯಿಂದ ಬೆಳಿಗ್ಗೆ ರೈಲು ಹಿಡಿದು ಪಯಣಿಸಿ, ಸಂಗೀತ ಪಾಠ ಮುಗಿಸಿ ರಾತ್ರಿ 10.30ಕ್ಕೆ ಹಿಂತಿರುಗುವ ವಾಡಿಕೆ. ಆಧುನಿಕ ಸೌಲ್ಯಭ್ಯಗಳಿಲ್ಲದ, ಹೆಣ್ಣು ಮಕ್ಕಳಿಗೆ ಪ್ರೋತ್ಸಾಹವಿಲ್ಲದ ದಿನಗಳಲ್ಲಿ ಗಂಗೂಬಾಯಿಯವರು ಶ್ರದ್ಧೆ ಮತ್ತು ಛಲದಿಂದ ನಿರಂತರ ಸಂಗೀತಾಭ್ಯಾಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಶಾಲೆಯ ಪಠ್ಯಗಳಲ್ಲಿನ ಆಸಕ್ತಿಗಿಂತ ಸಂಗೀತದ ಸ್ವರಾಲಾಪಗಳಲ್ಲಿ ತಲ್ಲೀನತೆ ಅತ್ಯಧಿಕವಾಗಿತ್ತು. ಆದ್ದರಿಂದಲೇ ತಾಯಿಯಿಂದಲೂ ಇವರ ಈ ಆಸಕ್ತಿಗೆ ಸಂಪೂರ್ಣ ಬೆಂಬಲ ದೊರೆಯಿತು. ಶಾಲೆ ಕಲಿಕೆಗೆ ಒತ್ತಾಯವಿರಲಿಲ್ಲವಾದ ಕಾರಣ, ತಮ್ಮೆಲ್ಲ ವೇಳೆಯನ್ನೂ ಸಂಗೀತಾಭ್ಯಾಸಕ್ಕೆ ಮೀಸಲಿರಿಸಿದ್ದರು. ಹರಯದ ವಯಸ್ಸಿನಲ್ಲಿ ಎಷ್ಟೇ ಮನಸ್ಸನ್ನು ಒಂದು ವಿಷಯದಲ್ಲಿ ಸಂಲಗ್ನ ಗೊಳಿಸಬೇಕಾದರೆ ಕೆಲವೊಮ್ಮೆ ಮತ್ಯಾವುದೋ ಆಕರ್ಷಣೆಯ ಸೆಳೆತವೂ ಅದಮ್ಯವೆನಿಸುತ್ತದೆ. ಹಾಗಾಗಿ ಗಂಗೂಬಾಯಿ ನೃತ್ಯದತ್ತ ಸೆಳೆಯಲ್ಪಟ್ಟರು. ಜೈಪುರದ ಶಾಮಲಾಲ್ ಪ್ರತಾಪ್‌ಲಾಲ್‌ರ ಬಳಿ ಕಥಕ್ ನೃತ್ಯ ಕಲಿಯತೊಡಗಿದರು. ಆದರೆ ಅದೂ ಹೆಚ್ಚು ಕಾಲ ಉಳಿಯಲಿಲ್ಲ. ಸಂಗೀತ ಸಾಧನೆಗೆ ತೊಡಕಾಗಬಹುದೆಂಬ ಭೀತಿಯಿಂದ ನೃತ್ಯಕ್ಕೆ ತಿಲಾಂಜಲಿ ನೀಡಿ ಸಂಗೀತಕ್ಕೆ ಪೂರಕವಾಗುವ ಹಾರ್ಮೋನಿಯಂ ವಾದ್ಯದತ್ತ ಮನಸ್ಸು ಮಾಡಿದರು. ಸಂಗೀತ ಪ್ರೀತಿ ಅವರ ನರ ನಾಡಿಗಳಲ್ಲಿ ಬೆರೆತು ಹೋಗಿತ್ತು. ಅದನ್ನು ಸಾಧಿಸಲು ಎಂತಹ ಕಷ್ಟಗಳನ್ನೂ ಬರಮಾಡಿಕೊಳ್ಳಲು ಸಿದ್ಧರಿದ್ದರು. ಗೊಂಬೆಯಾಡುವ ವಯಸ್ಸಿನಲ್ಲಿ ಸ್ವರಗಳ ಜೊತೆ ಆಟವಾಡುತ್ತಿದ್ದರು. 8ನೇ ವಯಸ್ಸಿನಲ್ಲಿಯೇ ಗುರುಗಳ ಮುಂದೆ 'ಪೂರಿಯಾದನಶ್ರೀ'ಯನ್ನು ಒಂದೂವರೆ ಗಂಟೆ ರಿಯಾಜ್ ಮಾಡಿ ಸೈ ಎನಿಸಿಕೊಂಡವರು. 11 ನೇ ವಯಸ್ಸಿಗೇ, 1924ರಲ್ಲಿ ಐತಿಹಾಸಿಕ, ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಾರ್ಥನಾ ಗೀತೆಯನ್ನು ಹಾಡಿ ಗಾಂಧೀಜಿ ಬೆನ್ನು ತಟ್ಟಿಸಿಕೊಂಡಿದ್ದರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವಂತೆ, ಮುಂದೆ ಅವರು ಏರಲಿರುವ ಕೀರ್ತಿ ಶಿಖರದ ಮುನ್ಸೂಚನೆ ಇದಾಗಿತ್ತು. ಅಂದು ಆರಂಭವಾದ ಅವರ ಸಂಗೀತ ಯಾತ್ರೆ ನಿರಂತರವಾಗಿ, ಅವ್ಯಾಹತವಾಗಿ 80 ವರ್ಷಕ್ಕೂ ಮೀರಿ ಮುಂದೆ ಸಾಗಿತು. ಇಷ್ಟು ಸುದೀರ್ಘ ಕಾಲದ ಸಂಗೀತ ಸಾಧನೆಯಲ್ಲಿ ನಿರತ ಚೇತನ ಮತ್ತೊಂದು ಇರಲಾರದು ಎನಿಸುತ್ತದೆ.

ಹೆಣ್ಣು ಮಕ್ಕಳಿಗೆ, ಅವರಿಗೆ ಯಾವುದೇ ವಿಶೇಷ ಪ್ರತಿಭೆಯಿರಲಿ. ಸಾಧನೆಯ ಮಹತ್ವಾಕಾಂಕ್ಷೆ ಇರಲಿ. ಕುಟುಂಬ, ಸಂಸಾರ, ಮಕ್ಕಳು – ಇತ್ಯಾದಿಗಳಿಂದ ಮುಕ್ತವಾಗಿರಲು ಸಾಧ್ಯವೇ ಇಲ್ಲ. ಇವುಗಳ ಜವಾಬ್ದಾರಿಯುನ್ನು ಹೆಗಲೇರಿಸಿಕೊಂಡೇ, ಗುರಿಯ ಸಾಧನೆಯತ್ತ ಹೆಜ್ಜೆ ಹಾಕಬೇಕಾಗುವುದು. ಸಂಪ್ರದಾಯ, ಪರಂಪರೆಗಳ ಜೊತೆ ಒಪ್ಪಂದ ಮಾಡಿಕೊಂಡೇ ಮುಂದುವರೆಯಬೇಕು. ಗಂಗೂಬಾಯಿಯವರು 16ನೇ ವಯಸ್ಸಿಗೇ, ವೃತ್ತಿಯಿಂದ ವಕೀಲರಾಗಿದ್ದ ಗುರುರಾವ್ ಕೌಲಗಿ ಅವರೊಂದಿಗೆ ವಿವಾಹ ಬಂಧನಕ್ಕೆ ಒಳಗಾದರು. ಮುಂದೆ ಒಬ್ಬಳು ಹೆಣ್ಣುಮಗು, ಇಬ್ಬರು ಗಂಡುಮಕ್ಕಳ ತಾಯಿಯಾದರು ಮನೆ, ಗಂಡ–ಮಕ್ಕಳು, ಸಂಸಾರ ತಾಪತ್ರಯಗಳು – ಇದೆಲ್ಲವುಗಳು ಅವರ ಬದುಕಿನ ಅನನ್ಯಭಾಗವಾಗಿದ್ದರೂ, ಅವರ ಸಂಗೀತಕ್ಕೆ ಅಡ್ಡಿಯಾಗಲಿಲ್ಲ. ಆದರೆ 1932ರಲ್ಲಿ ಸಂಭವಿಸಿದ ಮಾತೃವಿಯೋಗ 1952ರಲ್ಲಿ ಗುರುವಿಯೋಗ 1966ರಲ್ಲಿನ ಪತಿವಿಯೋಗ, 2004ರಲ್ಲಿ ಪುತ್ರಿ ವಿಯೋಗ – ಎಷ್ಟೋ ತಮ್ಮನ್ನು ತಡೆದುಕೊಳ್ಳಲು ಪ್ರಯತ್ನಿಸಿದರೂ, ಆಘಾತಗಳ ಪರಿಣಾಮ ಸಾಕಷ್ಟು ಮಟ್ಟಿಗೆ ಜರ್ಝರಿತರನ್ನಾಗಿ ಮಾಡಿತು. ಮುಂದೆ ತಮ್ಮ ಅನಾರೋಗ್ಯದ ಸಂದರ್ಭಗಳೂ ಬಂದವಾದರೂ, ಪ್ರತಿಸಲವೂ ಫಿನಿಕ್ಸ್‌ನಂತೆ ಚೇತರಿಸಿಕೊಂಡು, ಮರುಹುಟ್ಟು ಪಡೆದು, ಹೊಸ ಚೈತನ್ಯದೊಂದಿಗೆ ಕರ್ಮನಿರತರಾಗುತ್ತಿದ್ದರು.

ಸಂಗೀತವೇ ಅವರ ಜೀವಾಳ ಅದೇ ಅವರ ಅಸ್ತಿತ್ವ; ಅದೇ ಸ್ಫೂರ್ತಿ; ಅದೇ ಅರ್ಥ; ಸ್ವಾರ್ಥ. ತಾವು ತೊಡಗಿಸಿಕೊಂಡಿದ್ದ ಕಿರಾಣಾಘರಾಣೆಯ ಸಂಗೀತ ಸಂಪ್ರದಾಯದಲ್ಲಿ ಅವರದು ಬಲವಾದ ನಿಷ್ಠೆ. ತಾವು ನೆಚ್ಚಿಕೊಂಡಿದ್ದ ಸಂಗೀತದ ರೀತಿ, ರಿವಾಜು, ರಿಯಾಜು – ಎಲ್ಲವೂ ಶಾಸ್ತ್ರಬದ್ದ ಶಾಸ್ತ್ರಶುದ್ದ. ಎಂದೂ ಅವರೂ ಶಾಸ್ತ್ರೀಯತೆಯಿಂದ ಕಿಂಚಿತ್ತೂ ಆಚೆ ಈಚೆ ಸರಿಯಲು ಒಪ್ಪುತ್ತಿರಲಿಲ್ಲ. ಅವರ ಸುತ್ತಲೂ ಅನೇಕ ಬಗೆಯ ಆಧುನಿಕ ಸಂಗೀತ ಶೈಲಿಗಳು ವಿಜೃಂಭಿಸುತ್ತಿದ್ದರೂ. ಸ್ವಲ್ಪವೂ ವಿಚಲಿತರಾಗದೆ. ಶಾಸ್ತ್ರ ಶುದ್ಧತೆಯನ್ನು ಕಾಪಾಡಿಕೊಂಡು ಬಂದರು. ಹತ್ತಾರು ಕ್ಲಿಷ್ಟವಾದ ರಾಗಗಳನ್ನೂ ನಿರಾಯಾಸವಾಗಿ ಪಳಗಿಸಿಕೊಂಡಿದ್ದರು. ಮನೋಧರ್ಮಕ್ಕೆ ಹೊಂದಿಸಿಕೊಂಡಿದ್ದರು. ಆದರೂ ಹಾಡುವಾಗ ಮಾತ್ರ, ತಮ್ಮ ಪ್ರೀತಿಯ ರಾಗಗಳಾದ ತೋಡಿ, ಮುಲ್ತಾನಿ, ಶುದ್ಧ ಸಾರಂಗ, ಮಧುವಂತಿಯಂತಹ ಸುಂದರ. ಮೋಹಕ ಆದರೆ ಸರಳವಾದ ರಾಗಗಳನ್ನೇ ಆರಿಸಿಕೊಳ್ಳುತ್ತಿದ್ದರು. ಅವರು ಪ್ರಸ್ತುತ ಪಡಿಸುತ್ತಿದ್ದ ಛೋಟ ಖ್ಯಾಲ್. ಬಡಾಖ್ಯಾಲ್‌ಗಳನ್ನು ವಿಸ್ತರಿಸುತ್ತ ಹಾಡುತ್ತಿದ್ದ ರೀತಿ ಅನನ್ಯ; ಹಾಗೆಯೇ ಹಾಡುವಾಗಿನ ಅವರ ಭಂಗಿಯೂ ಅನನ್ಯ; ವಿಶಿಷ್ಟ. ಎಡಗೈಯನ್ನು ಎಡಕಿವಿ.

ಕೆನ್ನೆಮೇಲೆ ಇರಿಸಿ, ಬಲಗೈಯನ್ನು ಮೇಲೆತ್ತಿ ಕಣ್ಣು ಮುಚ್ಚಿಕೊಂಡು ಬಾಯಿತೆರೆದು ಆಲಾಪ್ ಮಾಡುವುದನ್ನು ನೋಡುವುದೇ ಒಂದು ಅಲೌಕಿಕ ಅನುಭೂತಿ. ಯಾವುದೇ ರಾಗವನ್ನಾದರೂ ಲೀಲಾಜಾಲವಾಗಿ ಹಾಡುತ್ತಿದ್ದರು. ಸ್ವರವಿಸ್ತಾರದ ಕಲೆ ಅವರಿಗೆ ಕರಗತವಾಗಿತ್ತು. ತನ್ಮಯತೆಯೊಂದಿಗೆ ಹಾಡುವ ಅವರ ಹಾಡನ್ನು ಕೇಳಲೂ ತನ್ಮಯ ಮನಸ್ಥಿತಿಯ ಅಗತ್ಯವಿತ್ತು. ಅಂತಹ ಒಂದು ಸ್ಥಿತಿಯನ್ನು ಆವಿರ್ಭೂತಗೊಳಿಸಿಕೊಂಡು ಕೇಳುವವರಿಗೆ ಗಂಧರ್ವಗಾನವೇ ಕೇಳುತ್ತಿರುವಂತೆನಿಸುತ್ತಿದ್ದುದು ಸಹಜವೂ ಸ್ವಾಭಾವಿಕವೂ ಆಗಿತ್ತು.

ಈ ಮೊದಲೇ ಹೇಳಿದಂತೆ ಅವರು ಶಾಸ್ತ್ರೀಯ ಸಂಗೀತ ಸಂಪ್ರದಾಯದ ಕಟ್ಟಾ ಪೂಜಾರಿಯಾಗಿದ್ದುದರಿಂದ ಕಮರ್ಷಿಯಲ್ ಸಂಗೀತ, ಲಘು ಅಥವಾ ಸುಗಮಸಂಗೀತದಿಂದ ಬಹಳ ದೂರವಿದ್ದರಾದರೂ ಸುಗಮ ಸಂಗೀತ ಕಲಾವಿದರನ್ನು, ಭಕ್ತಿಗೀತಕಾರರನ್ನು ಎಂದೂ ದ್ವೇಷಿಸಲಿಲ್ಲ. ಅವರ ಸಂಗೀತ ಪ್ರತಿಭೆಗೆ ಮುಕ್ತ ಮನಸ್ಸಿನ ಮೆಚ್ಚುಗೆಯನ್ನು ಸೂಚಿಸುತ್ತಿದ್ದರು. ಒಮ್ಮೆ ಯಾರೋ ಭಕ್ತಿ ಸಂಗೀತವನ್ನೇಕೆ ಹಾಡುವುದಿಲ್ಲವೆಂದು ಪ್ರಶ್ನಿಸಿದ್ದಕ್ಕೆ, " ನನ್ನ ಹಾಡಿನಲ್ಲಿಯೇ ಭಕ್ತಿ ಇದೆ" - ಎಂದು ಚುಟುಕು ಉತ್ತರ ನೀಡಿದ್ದರೂ, ಅದರಲ್ಲಿ ಧ್ವನಿಪೂರ್ಣತೆಯಿತ್ತು.

ನಲವತ್ತನೇ ವಯಸ್ಸಿನಲ್ಲಿ ಆದ ಟಾನ್ಸಿಲ್ ಆಪರೇಷನ್‌ನಿಂದಾಗಿ, ಕಂಠ ಮಾಧುರ್ಯವನ್ನು ಕಳೆದುಕೊಂಡರೂ ಹತಾಶರಾಗಲಿಲ್ಲ. ಗಡಸು ಧ್ವನಿಯಲ್ಲಿ ಹಾಡಿದರೂ, ಜನ ಮುಗಿಬಿದ್ದು ಕೇಳುತ್ತಿದ್ದುದು, ಅವರ ಹಾಡಿನ ಶೈಲಿಗೆ ಕಂಚುಕಂಠದ ಮೂಲಕ ಮಾರ್ದನಿಸುವ ಸ್ವರಸಂಚಾರಕ್ಕೆ, ಆಲಾಪ್, ಖಯಾಲ್‌ಗಳ ವಿಭಿನ್ನ, ವಿಶಿಷ್ಟ ರೀತಿಯ ಪ್ರಸ್ತುತಿಗೆ! ದರ್ಬಾರಿ, ಕಾನಡಾ ರಾಗಗಳಿಗೆ ಹೆಸರಾಗಿದ್ದ ಬಸವರಾಜ ರಾಜಗುರು, ಮಲ್ಲಿಕಾರ್ಜುನ್ ಮನ್ಸೂರ್, ಭೀಮಸೇನ ಜೋಶಿ, ಕುಮಾರ ಗಂಧರ್ವರ ಜೊತೆಗೆ ಗಂಗೂಬಾಯಿ ಅವರನ್ನೂ ಸ್ಮರಿಸಿಕೊಳ್ಳಲಾಗುತ್ತದೆ. ಅವರ ಹಾಡಿನಲ್ಲಿದ್ದ ಗತ್ತು, ಗಾಂಭೀರ್ಯಗಳು ಗಾತ್ರದ ಗಡಸುತನವನ್ನು ಸಂಪೂರ್ಣವಾಗಿ ಮರೆಸಿಬಿಡುತ್ತಿತ್ತು. ಅವರ ತನ್ಮಯತೆ, ಲೀನತೆಗಳು ಬೆರಗು ಹುಟ್ಟಿಸುವಂತಿರುತ್ತಿತ್ತು, ಇಂತಹ ಮನಃ ಸ್ಥಿತಿಯೇ ಜೀವನದ ಸಂಕಷ್ಟಗಳಿಂದ ವಿಚಲಿತರಾಗದಿರಲು ಸಹಕರಿಸಿತು. ಅವರೇ ಒಮ್ಮೆ ತಮ್ಮ ಅನುಭವವನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ, ಒಮ್ಮೆ ತಾನ್ಪುರ ಹಿಡಿದು ಕೂತರೆ ಬೇರೆಲ್ಲವೂ ಮರೆತುಹೋಗುತ್ತಿತ್ತು' - ಎಂದಿದ್ದ ಮಾತೇ ಸಂಗೀತದ ಬಗೆಗಿದ್ದ ಅವರ ಅನನ್ಯತೆಯನ್ನು ಬಿಂಬಿಸುತ್ತದೆ.

ಅವರ ಆಕಾರ ಪುಟ್ಟದಾದರೂ, ಸಂಗೀತ ಸಾಧನೆ ಹಿಮಾಲಯದೆತ್ತರದ್ದು. ಯಾರಿಗಾದರೂ ಆ ಅಕೃತಿ ನೋಡಿದರೆ, 'ಇವರೇನು ಹಾಡಿಯಾರು?'– ಎಂಬ ಅನುಮಾನ ಬರುವುದು ಸಹಜ. ಹಾಗೆಯೇ ಇವರ ಬದುಕಿನಲ್ಲಿ ಅಂತಹ ಒಂದು ಪ್ರಸಂಗ ಎದುರಾಗಿತ್ತು. ಆದರೆ ಆ ಪ್ರಸಂಗ ಇವರ ಬದುಕಿಗೇ ಒಂದು ಮಹತ್ವದ ತಿರುವನ್ನು ತಂದು ಕೊಟ್ಟಿತು. 1938ರಲ್ಲಿ ಕೊಲ್ಕತ್ತಾನಗರದಲ್ಲಿ ಅಖಿಲ ಭಾರತ ಸಂಗೀತ ಸಮ್ಮೇಳನ ನಡೆದಿತ್ತು. ಭಾರತದ ಪ್ರಸಿದ್ಧ ಗಾಯಕ ಗಾಯಕಿಯರಿಂದಲೇ ತುಂಬಿದ್ದ ಕಾರ್ಯಕ್ರಮ ಅದಾಗಿದ್ದುದರಿಂದ ಅದಕ್ಕೊಂದು ವಿಶಿಷ್ಟತೆಯೂ ಲಭಿಸಿತ್ತು. ಆ ಕಾಲಕ್ಕೆ ಪ್ರಸಿದ್ಧ ಗಾಯಕಿ ಎನಿಸಿಕೊಂಡಿದ್ದ ವತ್ಸಲಾ ಕುಮಠೇಕರರ ಹಾಡುಗಾರಿಕೆಯೂ ಇತ್ತು. ಅವರ ಹಾಡುಗಾರಿಕೆ ಸಭಿಕರನ್ನು ಮಂತ್ರಮುಗ್ದಗೊಳಿಸಿ ಬಿಟ್ಟಿತ್ತು. ಎಲ್ಲರು ಆ ಸಂಗೀತದ ಸವಿಯ ಆಸ್ವಾದನೆಯಲ್ಲಿ ಮೈ ಮರೆತಿದ್ದರು. ಅಂತಹ ಕ್ಷಣಗಳಲ್ಲಿ ಮುಂದೆ ಹಾಡಬೇಕಾಗಿದ್ದವರು ಇಪ್ಪತ್ತೈದರ ತಾರುಣ್ಯದಲ್ಲಿದ್ದ ಗಂಗೂಬಾಯಿಯವರದು! ಅವರು ಹಾಡಲು ಮುಂದಾದರು. ಬರುತ್ತಿದ್ದಂತೆಯೇ ಆ ಪುಟ್ಟ ಆಕೃತಿಯನ್ನು ನೋಡಿದ ಸಂಘಟಕರಿಗೆ ಭಯ, ಅನುಮಾನ! – ಈಕೆ ಏನು ಹಾಡಬಲ್ಲರು? – ಎಂಬ ಸಂದೇಹ. ಆದರೆ ಕಾರ್ಯಕ್ರಮಕ್ಕೆ ಕರೆದಾಗಿದೆ. ಬೇಡವೆನ್ನಲು ಸಾಧ್ಯವಿಲ್ಲ. ಆದ್ದರಿಂದ ಒಂದು ಮಧ್ಯದ ದಾರಿ ಹುಡುಕಿ, ಗಂಗೂಬಾಯಿಯವರಿಗೆ, ಕೇವಲ ಹತ್ತು ನಿಮಿಷ ಹಾಡುವಂತೆ ನಿರ್ದೇಶಿಸಿದರು. ಸರಿ, ಗಂಗೂಬಾಯಿ ಪ್ರತಿಮಾತಿಲ್ಲದೆ ವೇದಿಕೆ ಹತ್ತಿ, ಹಾಡಲು ಆರಂಭಿಸಿದ್ದೇ, ಸಭೆ ಮಂತ್ರ ಮುಗ್ಧವಾಯಿತು. ಕಾಲದ ಮಿತಿ ಮರೆಯಾಯಿತು. ಅವರ ಹಾಡುಗಾರಿಕೆಯ ಪ್ರಶಂಸೆ ದಿಕ್ಕು ದಿಕ್ಕಿನಲ್ಲಿ ಅನುರಣಿಸಿತು. ಅಲ್ಲಿಂದ ಮುಂದೆ ಅವರಿಗೆ ಸರಿಸಾಟಿಯಿಲ್ಲದಂತಹ ಸಂಗೀತದ ಪಯಣ ಸಾಗುತ್ತಲೇ ಹೋಯಿತು. ದೇಶಾದ್ಯಂತ ಅವರ ಕಛೇರಿಗಳು ನಡೆದವು. ದೇಶದ ಗಡಿಗಳನ್ನೂ ದಾಟಿ ಅವರ ಸಂಗೀತದ ಸವಿ ಮೋಡಿ ಮಾಡಿತು.

ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ದೊರೆತ ಪ್ರಥಮ ವೇದಿಕೆ ಅವರ ಬಾಲ ಪ್ರತಿಭೆಗೆ ಸಾಕ್ಷಿಯಾದರೆ, ಈ ಸಂಗೀತ ಸಮ್ಮೇಳನ ಅವರ ಸಂಗೀತದ ಪ್ರಿದ್ವತ್ಪ್ರತಿಭೆಗೆ ಸಾಕ್ಷಿಯಾಯಿತು. ಹೀಗೆ ಆರಂಭವಾದ ಅವರ ಸಂಗೀತ ಸಭೆಗಳಿಗೆ ಲೆಕ್ಕವೇ ಇಲ್ಲವಾಯಿತು.

ಏಷಿಯಾ ಉಪಖಂಡದಲ್ಲಿ ಗಂಗೂಬಾಯಿ ಕಛೇರಿ ನೀಡದ ನಗರವೇ ಇಲ್ಲ ಎನ್ನುವುದು ಎಲ್ಲ ಸಂಗೀತಾಭಿಮಾನಿಗಳ ಅನುಭವಕ್ಕೆ ಬಂದಿರುವ ಸತ್ಯ.

ತಮ್ಮ ಸಂಗೀತ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ ಪ್ರದೇಶಗಳು. ವ್ಯಕ್ತಿಗಳು ಎಂದೂ ಅವರ ನೆನಪಿನಿಂದ ಮರೆಯಾಗಲಿಲ್ಲ. ಸಂಗೀತದ ಮೊದಲ ಪಾಠ ಹೇಳಿಕೊಟ್ಟ ಹುಲಗೂರರು ತಮ್ಮನ್ನು ಕಿರಾನಾಘರಾಣದ ಪ್ರತಿನಿಧಿಯಾನ್ನಾಗಿ ರೂಪಿಸಿದ ಗುರು ಕುಂದಗೋಳದ ಸವಾಯಿ ಗಂಧರ್ವರು, ಮೊದಲ ವೇದಿಕೆ ಕಲ್ಪಿಸಿದ ಬೆಳಗಾವಿ – ಇವೆಲ್ಲವೂ ಅವರ ಮಾತುಗಳಲ್ಲಿ, ನೆನಪುಗಳಲ್ಲಿ ಮಿಸುಕಾಡುತ್ತವೆ. ಬೆಳಗಾವಿಯನ್ನಂತೂ ಪದೇ ಪದೇ ಸ್ಮರಿಸಿಕೊಳ್ಳುತ್ತಾರೆ. ಆಗಾಗ ಭೇಟಿ ನೀಡುತ್ತಾರೆ. ಹಿಂದಿನ ದಿನಗಳನ್ನು ಮೆಲುಕು ಹಾಕುತ್ತಾರೆ.

ಸಂಗೀತಗಂಗೆ, ಸಂಗೀತ ಶಾರದೆ, ಸಂಗೀತ ಸಾಮ್ರಾಜ್ಞೆಗೆ ಸಂಗೀತವೇ ಸಮಸ್ತವೂ ಆಗಿರುವುದು ವಾಸ್ತವವಾದರು, ಇದರಾಚೆಗೂ ಚಾಚಿಕೊಂಡಿರುವ ಮತ್ತೊಂದು ಮುಖವಿದೆ. ಸ್ನೇಹ, ಪ್ರೀತಿ ವಿಶ್ವಾಸ, ವಾತ್ಸಲ್ಯ, ವಿನಯ, ನಿಗರ್ವಿತನ, ಮಾನವೀಯತೆಗಳು ಅವರ ವ್ಯಕ್ತಿತ್ವದ ಅಂತರ್ಗತ ಗುಣಗಳು ನೊಂದವರಿಗೆ ಬೆಂದವರಿಗೆ ಓಯಸಿಸ್. ಅವರ ಸ್ನೇಹ, ಸಾಂಗತ್ಯ, ಒಡನಾಟಗಳನ್ನು ಬಯಸಿದವರಿಗೆ ಅಕ್ಕನಾಗಿ, ಅಮ್ಮನಾಗಿ, ಗೆಳತಿಯಾಗಿ, ಗುರುವಾಗಿ– ಹಲವು ಮುಖಗಳಲ್ಲಿ, ಅವರವರ ದರುಶನಕೆ, ಅವರವರ ಭಾವಕ್ಕೆ ತಕ್ಕಂತೆ ಒಲಿಯುತ್ತಿದ್ದರು.

ವಿಶ್ವ ಮನ್ನಣೆಯ ಸಂಗೀತ ಕಲಾವಿದೆ, ಸಂಗೀತ ವಿದುಷಿಯಾಗಿರುವುದರ ಜೊತೆಗೆ, ಜೀವನದಲ್ಲಿ ಕೆಲವು ಶ್ರದ್ಧೆ, ನಂಬಿಕೆಗಳನ್ನೂ, ಸಂಪ್ರದಾಯಗಳನ್ನೂ ರೂಢಿಸಿಕೊಂಡಿದ್ದರು. ಭಾರತೀಯ ಧಾರ್ಮಿಕ, ಸಾಂಸ್ಕೃತಿಕ ನಂಬಿಕೆಗಳನ್ನು ಬಿಟ್ಟುಕೊಟ್ಟುವರಲ್ಲ. ಸಂಗೀತ ಬದುಕಿಗೆ ನೆಮ್ಮದಿ, ಶಾಂತಿಗಳನ್ನು ತಂದುಕೊಡುವಂತೆ, ದೈವ, ಧರ್ಮಗಳೂ ಬದುಕಿಗೆ ಸಹನೀಯತೆಯನ್ನು, ಸಮಾಧಾನಗಳನ್ನೂ ತಂದುಕೊಡುತ್ತವೆ ಎನ್ನುವ ಭಾವನೆ ಅವರದಾಗಿತ್ತು. ಹಿಂದೂ ಸಂಸ್ಕೃತಿಯ ಅವಿಭಾಜ್ಯ ಅಂಶಗಳಾದ ಹಬ್ಬ ಹರಿದಿನ ದೇವರು. ಅತಿಥಿ ಸತ್ಕಾರ – ಇವೆಲ್ಲವುಗಳಲ್ಲಿಯೂ ಅವರ ಶ್ರದ್ಧೆ ಇತ್ತು. ಅವರು ಮೈಲಾರಲಿಂಗನನ್ನು ಆರಾಧಿಸುತ್ತಿದ್ದರು. ತಮ್ಮ ಮೂಲಸ್ಥಳವಾದ ಹಾನಗಲ್ ಬಳಿಯಿರುವ ಗುಡ್ಡದ ಮೈಲಾರಲಿಂಗ ಮನೆದೇವರಾಗಿದ್ದ ಕಾರಣ, ಅಲ್ಲಿಗೆ ಆಗಾಗ ಹೋಗಿ ಪೂಜೆ, ಹರಕೆ ಸಲ್ಲಿಸಿ ಬರುತ್ತಿದ್ದರು. ಜೊತೆಗೆ ಸವದತ್ತಿ ಎಲ್ಲಮ್ಮನ್ನನ್ನೂ ನಂಬಿದ್ದರು. ಮಕ್ಕಳ ಅನಾರೋಗ್ಯ, ಇಲ್ಲವೆ ಕಷ್ಟ ಕಾರ್ಪಣ್ಯಗಳ ಸಂದರ್ಭದಲ್ಲಿ ಮುಡಿಪು, ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು ಎಷ್ಟೋ ಆಧುನಿಕವಾಗಿದ್ದರೂ ಇಂದಿಗೂ ಇಂತಹ ಮುಡಿಪು ಕಾಣಿಕೆಗಳಲ್ಲಿನ

ನಂಬಿಕೆಯಂತೂ ಮರೆಯಾಗಿಲ್ಲ, ಅಂಥಾದ್ದರಲ್ಲಿ ಗಂಗೂಬಾಯಿಯವರು, ಮುಡಿಪು ಕಾಣಿಕೆಗಳಿಂದ ಪರಿಹಾರ ಸಿಗುವ ಭರವಸೆಯನ್ನಿರಿಸಿಕೊಂಡದ್ದು ಆಶ್ಚರ್ಯದ ಸಂಗತಿಯೇನಲ್ಲ.

ದೇವರನ್ನು ನಂಬಿದಂತೆ, ಅತಿಥಿ, ಅಭ್ಯಾಗತರನ್ನು ದೇವರೆಂದೇ ನಂಬಿದ್ದರು. ಅಲ್ಲದೆ ನಿರಂತರವಾಗಿ ಅತಿಥಿ ಸತ್ಕಾರವನ್ನು ಮಾಡಲೇಬೇಕಾದ ಅಗತ್ಯವೂ ಸೃಷ್ಟಿಯಾಗಿತ್ತು. ಸಂಗೀತಗಂಗೆ, ಗಂಗೂಬಾಯಿಯರ ಪವಿತ್ರ ದರ್ಶನಕ್ಕಾಗಿ ಪ್ರತಿನಿತ್ಯವೂ ಯಾರದರೂ ಬರುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಸ್ನೇಹಿತರು ಬಂಧುಗಳು, ಕಲಾವಿದರು, ಶಿಷ್ಯರು – ಹೀಗೆ ಅನೇಕ ವರ್ಗದ ಜನ ಗಂಗಜ್ಜಿ ಎನ್ನುತ್ತಲೋ, ಗಂಗಕ್ಕ ಎನ್ನುತ್ತಲೋ ಬರುವವರನ್ನು ಪ್ರೀತಿಯಿಂದ ಬರಮಾಡಿಕೊಂಡು ಅವರ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು. ದೊಡ್ಡವರು, ಚಿಕ್ಕವರು ಎನ್ನುವ ಯಾವುದೇ ಬೇದಭಾವವಿಲ್ಲದೆ ಅವರೊಡನೆ ಮನಬಿಚ್ಚಿ ಮಾತನಾಡುತ್ತಿದ್ದರು. ಪರಿಚಿತರಾಗಿದ್ದರೆ ಅವರ ಜೊತೆಗಿನ ಸಂಬಂಧಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಅವರ ಮಾತಿನಲ್ಲಿ ಮುಕ್ತತೆ, ಮುಗ್ದತೆಗಳೆರಡೂ ಬೆರೆತಿರುತ್ತಿದ್ದವು. ಸರಳವಾದ ಉಡುಗೆ, ಕಾವ್ಯಮಯವಾದ ಧಾರವಾಡದ ಕನ್ನಡ ಮಾತು! ಕುಳಿತು ಕೇಳುವವರಿಗೆ ರಸದೌತಣದ ಅನುಭೂತಿ. ದೇಶದ ಪ್ರಸಿದ್ದ ಗಾಯಕರು ಕೂಡಾ ಒಮ್ಮೊಮ್ಮೆ ಗಂಗೂಬಾಯಿ ಅವರನ್ನು ಭೇಟಿಯಾಗಲು ಗಂಗಾ ಲಹರಿಗೆ ಬರುತ್ತಿದ್ದರು. ಭೀಮಸೇನ ಜೋಶಿಯವರಂತೂ ಅವರ ಸಂಗೀತ ಸಹಪಾಠಿ. ತಮಗೆ ಸರಿಸಾಟಿಯಗಿ ಬೆಳೆದ ಸಂಗೀತ ದಿಗ್ಗಜ ಭೀಮಸೇನ ಜೋಶಿ ಅವರನ್ನು ಖಾಸಾ ತಮ್ಮನಂತೆಯೇ ಭಾವಿಸಿದ್ದರು. ಅವರ ಸಾಮರ್ಥ್ಯ, ಸಾಧನೆಗಳಿಗೆ ಹಿರಿಹಿರಿ ಹಿಗ್ಗಿದ್ದುಂಟು, ಪ್ರೀತಿಯ ತಮ್ಮನಿಗೆ ತಮ್ಮ ಕೈಯ ಜೋಳದ ರೊಟ್ಟಿ, ಪಲ್ಯಗಳನ್ನು ಉಣಿಸಿ ಸಂಭ್ರಮಿಸುತ್ತಿದ್ದರು. ಜೋಶಿಯವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳನ್ನು ಕಂಡು ಹೆಮ್ಮೆಯಿಂದ ಬೀಗುತ್ತಿದ್ದರು. ಅಭಿಮಾನದಿಂದ ಹೊಗಳುತ್ತಿದ್ದರು. ಅವರ ಜೊತೆಗಿನ ಸ್ನೇಹ. ಬಾಂಧವ್ಯಗಳ ಬಗ್ಗೆ ನೆನಪಿಸಿಕೊಂಡು ವಿವರಿಸಿದ ಒಂದು ಪ್ರಸಂಗ ಹೀಗಿತ್ತು; 1932ನೇ ಇಸ್ವಿ ಕುಂದಗೋಳದಲ್ಲಿ ನಮ್ಮ ಗುರು ಸವಾಯಿ ಗಂಧರ್ವರು ಸಂಗೀತ ಕಲಿಸ್ತಿದ್ರು, ಭೀಮೂ ಅವ್ರ ಮನ್ಯಾಗ ಇದ್ದುಕೊಂಡೇ ಗುರುಗಳ ಸೇವಾ ಮಾಡ್ತಾ ಸಂಗೀತ ಕಲೀತಿದ್ದ, ಅದ್ಕೂ ಮೊದ್ಲೇ ನಾನೂ ಸಂಗೀತಾಭ್ಯಾಸ ಶುರು ಮಾಡಿದ್ದೆ. ಆಗ ಹುಬ್ಬಳ್ಳ್ಯಾನಿಂದ ಕುಂದಗೋಳಕ್ಕೆ ಸಂಜೆ ಐದಕ್ಕ ಗಾಡಿ ಇರುತ್ತಿತ್ತು. ಅದರಾಗ ಹೋಗತ್ತಿದ್ದೆ. ರಾತ್ರಿ ಹನ್ನೊಂದಕ್ಕೆ ಹೊಳ್ಳಿ ಹುಬ್ಲೀಗ್ ಬರೋಟ್ರೇನ್ ಇತ್ತು. ಸಂಗೀತಾಭ್ಯಾಸ ಮುಗ್ಸಿ ಅದರಾಗ ಬರುತ್ತಿದ್ದ. ಆಗೆಲ್ಲ

ಕರೆಂಟ್, ಬಸ್ ಇದ್ದಿಲ್ಲ. ರಾತ್ರಿ ಭೀಮೂ ಕಂದೀಲು ಹಿಡಿದು ನನ್ನ ಜೋಡಿ ಕುಂದಗೋಳ ರೈಲ್ವೆ ಸ್ಟೇಷನ್‌ಗೆ ಬರುತಿದ್ದ. ದಾರ್‍ಯಾಗ ಸಂಗೀತದ್ದೇ ಮಾತು. ಗುರುಗಳು ಹೇಳಿಕೊಟ್ಟ ಪಾಠದ್ದೇ ಚರ್ಚೆ. ಶ್ರದ್ಧೆಯೇ ನನ್ನ ತಮ್ಮನ್ನ ಈ ಮಟ್ಟಕ್ಕೆ ಬೆಳಸಿತು. ಅಂತ ನನಗೆ ಹೆಮ್ಮೆ ಅನಿಸ್ತದ" - ಎನ್ನುವವರು ಗಂಗೂಬಾಯಿಯಂತಹವರು ಮಾತ್ರವೇ. ಸಹ ಕಲಾವಿದರ ಕೀರ್ತಿ, ಪ್ರಶಸ್ತಿಗಳಿಗೆ ಅಸೂಯೆ ಪಡುವಂಥವರೇ ತುಂಬಿರುವಾಗ, ಹೆಮ್ಮೆಯ ಭಾವವನ್ನು ವ್ಯಕ್ತ ಪಡಿಸಲು ಎಷ್ಟು ಮಂದಿಗೆ ಸಾಧ್ಯವಾದೀತು!

ಗಂಗೂಬಾಯಿಯವರ ಗುರುಭಕ್ತಿ ಅಪಾರವೂ ಅನನ್ಯವೂ ಆದುದು. ಹುಬ್ಬಳ್ಳಿಯಲ್ಲಿನ ತಮ್ಮ ಮನೆ 'ಗಂಗಾ-ಲಹರಿ'ಯಲ್ಲಿ ಒಂದು ಕೋಣೆ ತಾಲೀಮಿನ ಕೋಣೆಯಾಗಿತ್ತು ಗುರುಗಳು ಉಳಿದುಕೊಳ್ಳುತ್ತಿದ್ದರು. ತಾಲೀಮು ನಡೆಸುತ್ತಿದ್ದರು. ಶಿಷ್ಯರು ಹಾಡುವುದನ್ನು ಕೇಳಿ ಗುರುಗಳು ಸಂತೋಷ ಪಡುತ್ತಿದ್ದರು. ಎನ್ನುವ ಕಾರಣಕ್ಕಾಗಿ, ಮನೆ ಆಧುನೀಕರಣಕ್ಕೆ ಒಳಗಾದರೂ ಆ ಕೋಣೆಯನ್ನು ಮಾತ್ರ ಹಿಂದೆ ಇದ್ದ ರೀತಿಯಲ್ಲಿಯೇ ಉಳಿಸಿಕೊಂಡರು ಅದು ಗುರುವಿನ ಸ್ಮಾರಕ ಎಂದು ನಂಬಿದ್ದರು. ಅದರ ಬಗ್ಗೆ ಒಂದು ಬಗೆಯ ತಾದತ್ಮ್ಯತೆಯನ್ನು ಬೆಳೆಸಿಕೊಂಡಿದ್ದರು. ಈ ಕೋಣೆಗೆ ಐತಿಹಾಸಿಕ ಮಹತ್ವವೂ ಲಭಿಸುವಂತೆ ಮಾಡಿದರು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಇತಿಹಾಸ ಸೃಷ್ಟಿಯಾಗಿರುವುದರ ಜೊತೆಗೆ, ದೇಶವಿದೇಶಗಳಿಂದ ಬರುವ ಹೆಸರಾಂತ ಗಾಯಕರೂ ಇಲ್ಲಿಯೇ ತಂಗುತ್ತಿದ್ದರು. ಅನೇಕ ವೇಳೆ, ಸಂಗೀತ ಕಲಾವಿದರಿಗೆ ತಮ್ಮ ಸಂಗೀತ ಪ್ರತಿಭೆಯ ಪ್ರದರ್ಶನಕ್ಕೆ ವೇದಿಕೆಯೂ ಆಗುತ್ತಿತ್ತು. ಉಸ್ತಾದ್ ಬಿಸ್ಮಿಲ್ಲಾಖಾನ್, ಎಂ.ಎಸ್. ಸುಬ್ಬಲಕ್ಷ್ಮಿ, ಭೀಮಸೇನ್ ಜೋಶಿ, ಅಲ್ಲಾರಖಾ, ಪಂಡಿತ್ ರವಿಶಂಕರ್ ಕುಮಾರ ಗಂಧರ್ವ ಮೊದಲಾದವರು ಇಲ್ಲಿ ನಾಲ್ಕಾರು ದಿನ ಉಳಿದುಕೊಂಡು, ತಾವು ಕಲಿತದ್ದನ್ನು ಗಂಗೂಬಾಯಿ ಎದುರು ಹಾಡಿ ತೋರಿಸುತ್ತಿದ್ದರು. ಇಲ್ಲವೆ ಅವರಿಂದ ಹೊಸ ಹೊಸ ಚೀಜುಗಳನ್ನು ಅಭ್ಯಾಸ ಮಾಡುತ್ತಿದ್ದರು. ಹಾಗಾಗಿ ಇದೊಂದು ಸಂಗೀತ ಕಛೇರಿಗೆ, ಇಲ್ಲವೇ ಸಂಗೀತ ಚರ್ಚೆಗೆ ವೇದಿಕೆಯಾಗಿ ಪರಿಣಮಿಸಿತ್ತು. ಎಲ್ಲಕ್ಕಿಂತ ಮುಖ್ಯವಾದ ವಿಷಯವೆಂದರೆ, ಸವಾಯಿ ಗಂಧರ್ವರು ಅನಾರೋಗ್ಯದಿಂದ ಬಳಲಿದ್ದಾಗ, 3 ವರ್ಷಕಾಲ ಈ ಕೋಣೆಯಲ್ಲಿದ್ದುಕೊಂಡು ಉಪಚಾರ ಪಡೆದಿದ್ದರು. ಈ ಎಲ್ಲಾ ನೆನಪುಗಳಿಂದಾಗಿಯೇ, ಗಂಗೂಬಾಯಿ ಈ ಕೋಣೆಯನ್ನು ರೂಪಾಂತರಿಸಲು ಒಪ್ಪಿರಲಿಲ್ಲ. ಈ ಕೋಣೆಯ ಜೊತೆಗೆ ಅವರದು ಅವಿನಾಭಾವ ಸಂಬಂಧ;

ಭಾವನಾತ್ಮಕ ಸಂಬಂಧ ತಮ್ಮ ದಿನದ ಹೆಚ್ಚು ಹೊತ್ತನ್ನು ಇಲ್ಲಿಯೇ ಕಳೆಯುತ್ತಿದ್ದರು. ಗುರುವಿನ ಚೇತನದ ಅಸ್ತಿತ್ವವನ್ನು ಅನುಭವಿಸುತ್ತಿದ್ದರು. ಬಹುಶಃ ಆ ಕಾರಣಕ್ಕಾಗಿಯೇ ಅವರ ಪಾರ್ಥಿವ ಶರೀರವನ್ನು ಅಲ್ಲಿಯೇ ಇರಿಸಲಾಗಿತ್ತು.

ಗುರುವಿಲ್ಲದಿದ್ದರೇನು, ಗುರುವಿನ ನೆನಪು ಶಾಶ್ವತವಾಗಿ ಉಳಿಯಬೇಕೆಂದೇ ಹಂಬಲಿಸುತ್ತಿದ್ದರು, ಪಂ. ಸವಾಯಿ ಗಂಧರ್ವರ ಪುಣ್ಯತಿಥಿ ನಿಮಿತ್ತ ಕುಂದಗೋಳದಲ್ಲಿ ಪ್ರತಿವರ್ಷ ಸರ್ಕಾರ ಆಯೋಜಿಸುವ ಸಂಗೀತೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅಲ್ಲದೆ ತಾವೂ ಕೂಡಾ ಸ್ವತಃ ಹಾಡಿ ಗುರುವಿಗೆ ಸ್ವರಾಂಜಲಿ ಅರ್ಪಿಸುತ್ತಿದ್ದರು.

ಪಂ. ಸವಾಯಿ ಗಂಧರ್ವರ ಬಗೆಗಿದ್ದಂತೆಯೇ, ಪಂ.ಪಂಚಾಕ್ಷರಿಗವಾಯಿ, ಪಂ. ಪುಟ್ಟರಾಜ ಗವಾಯಿಗಳ ಬಗ್ಗೆ ಭಕ್ತಿ, ಗೌರವಗಳನ್ನು ಇರಿಸಿಕೊಂಡಿದ್ದರು. ಗದುಗಿಗೆ ಭೇಟಿ ನೀಡಿದಾಗಲೆಲ್ಲ. ಪಂಚಾಕ್ಷರಿ ಗವಾಯಿಗಳ ಗದ್ದುಗೆಗೆ ಗೌರವ ಸಲ್ಲಿಸುತ್ತಿದ್ದರು. ಅವರ ಪುಣ್ಯ ಸ್ಮರಣೆಯ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. ಪುಟ್ಟರಾಜ ಗವಾಯಿಗಳ ಸಂಗೀತ ವಿದ್ವತ್ತು, ಗಾಯನಕ್ಕೆ ತಲೆದೂಗಿದ್ದರು. ಅವರ ವೀರೇಶ್ವರ ಪುಣ್ಯಾಶ್ರಮದಲ್ಲಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದರು. ಕೆಲವೊಮ್ಮೆ ಅಲ್ಲಿನ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಯಾಗಿಯೂ ಪಾಲ್ಗೊಂಡಿದ್ದರು.

ಗುರುಗಳ ಹೆಜ್ಜೆ ಜಾಡಿನಲ್ಲಿ ನಡೆದ ಗಂಗೂ ಬಾಯಿ, ಇಷ್ಟೆಲ್ಲಾ ವಿಶ್ವವಿಖ್ಯಾತಿಯನ್ನು ಪಡೆದಿದ್ದರೂ, ಅಪಾರ ಸಂಖ್ಯೆಯ ಶಿಷ್ಯರನ್ನು ಹೊಂದಿರಲಿಲ್ಲ. ಸಂಖ್ಯೆ ಮುಖ್ಯವಾಗಬಾರದು. ಯೋಗ್ಯತೆ ಮುಖ್ಯವೆಂದು ಭಾವಿಸಿದ್ದ ಅವರಿಗೆ ಅಪರೂಪದ ಶಿಷ್ಯ ಪರಂಪರೆಯೊಂದು ಸೃಷ್ಟಿಯಾಯಿತು. ತಮ್ಮ ಪುತ್ರಿ ಕೃಷ್ಣಾ ಹಾನಗಲ್ ಪ್ರಥಮ ಶಿಷ್ಯೆಯಾದಳು. ನಂತರ ಉಳಿದ ಮಕ್ಕಳು, ಮೊಮ್ಮಕ್ಕಳು ಅಲ್ಲದೆ ಬೇರೆ ಬೇರೆ ಪ್ರತಿಭಾವಂತರು ಶಿಷ್ಯರಾಗಿ ಬಂದು ಸೇರಿಕೊಂಡರು ಇವರ ಬಳಿ ಸಂಗೀತ ಶಿಕ್ಷಣ ಪಡೆದವರೆಲ್ಲರೂ ದೇಶ-ವಿದೇಶಗಳಲ್ಲಿ ವಿಖ್ಯಾತರಾಗಿದ್ದಾರೆ. ರಾಷ್ಟ್ರದ ಬೇರೆ-ಬೇರೆ ರಾಜ್ಯಗಳಲ್ಲಿಯೂ ಇವರಿಂದ ಮಾರ್ಗದರ್ಶನ ಪಡೆದ, ಕಲಿತ ಸಂಗೀತ ಕಲಾವಿದರು. ಗಂಗೂಬಾಯಿಯವರ ಕೀರ್ತಿಯನ್ನು ಎತ್ತಿ ತೋರಿದ್ದಾರೆ.

ಮಾತಿಗೆ ನಿಲುಕದ ಈ ಅನನ್ಯ ವಿದುಷಿಯ ಸಾಧನೆಗಳನ್ನೂ ವಿವರಿಸುವುದು ಅಸಾಧ್ಯವೆನಿಸುತ್ತದೆ. ಅವರ ಒಂದೊಂದು ಸಾಧನೆಯೂ ಒಂದೊಂದು ಮೈಲಿಗಲ್ಲು, 11ನೇ ವಯಸ್ಸಿಗೇ ರಾಜಕೀಯ ಧುರೀಣರೆದುರಿಗೆ ಹಾಡಿ ಸೈ

ಎನಿಸಿಕೊಂಡರು. 12ನೇ ವಯಸ್ಸಿನಲ್ಲಿಯೇ ಹಿಂದೂಸ್ತಾನಿ ಸಂಗೀತದಖ್ಯಾತ ಗಾಯಕ ಕರೀಂಖಾನರ ಮುಂದೆ ತಮ್ಮ ಗಾಯನ ಪ್ರತಿಭೆಯನ್ನು ತೋರಿದ್ದರು. 20ನೇ ವಯಸ್ಸಿನಲ್ಲಿ ಮುಂಬಯಿಯಲ್ಲಿ ಜೊಚ್ಚಲ ಆಕಾಶವಾಣಿ ಕಾರ್ಯ ಕ್ರಮ ನೀಡಿದ್ದರು. 1952ರಲ್ಲಿ ನೆಹರೂ ಸಮ್ಮುಖದಲ್ಲಿ ಕಛೇರಿ ನಡೆಸಿದ್ದರು.

ಹಿಂದೂಸ್ತಾನಿ ಶಾಸ್ತ್ರಿಯ ಸಂಗಿತವನ್ನು ಹಾಡುವುದಷ್ಟೇ ಅಲ್ಲ, ಅವರು ಚಲಿಸುವ ಸಂಗೀತ ವಿಶ್ವಕೋಶವೂ ಆಗಿದ್ದರು. ಸಂಗೀತ ಸಂಬಂಧವಾದ ಅವರ ವಿದ್ವತ್ತು ಅಸ್ವಾದ್ಯಶವಾಗಿತ್ತು. ಯಾವ ಅಕಾಡೆಮಿಕ್ ಪದವಿ ಇಲ್ಲದಿದ್ದರೂ, ಆ ವಿಷಯದಲ್ಲಿ ಹತ್ತಾರು ಡಾಕ್ಟರೇಟ್‌ಗಳಿಗೂ ಸಾಕಾಗುವಷ್ಟು ಜ್ಞಾನ ಅವರಲ್ಲಿತ್ತು. ಈ ವಿದ್ವತ್ತು ಪಾಂಡಿತ್ಯಗಳೇ ಅವರನ್ನು 1976 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಉಪನ್ಯಾಸಕಿಯನ್ನಾಗಿ ಬರಮಾಡಿಕೊಂಡಿತು. ಜೊತೆಗೆ ಆರು ವರ್ಷಗಳ ಕಾಲ ಸೆನೆಟ್ ಸದಸ್ಯತ್ವದ ಗೌರವವನ್ನು, ಕಾರ್ಯ ನಿರ್ವಹಣೆಯ ಅವಕಾಶವನ್ನೂ ಗಳಿಸಿಕೊಟ್ಟಿತು. ಅವರ ದಣಿವರಿಯದ ಸಂಗೀತ ಸೇವೆ. ಸಂಗೀತ ಸಾಧನೆಗಳಿಗೆ ಪ್ರಶಸ್ತಿ ಪುರಸ್ಕಾರಗಳು ಮಹಾಪೂರದಂತೆ ಹರಿದುಬಂದವು. ಸಾವಿರಾರು ಸಂಗೀತ ಕಾರ್ಯಕ್ರಮಗಳಿಗೆ ವಿಶ್ವದ ಎಲ್ಲೆಡೆಯಿಂದಲೂ ಆಹ್ವಾನ. ಶಾಲಾ ಕಾಲೇಜುಗಳಲ್ಲಿ ಬಿಡುವಿಲ್ಲದ ಸಂಗೀತ ಕಛೇರಿಗಳು ನಿಲ್ಲದ ಪ್ರೀತಿಯ ಬೇಟಿಕೆಗಳು.

ಈ ಪ್ರಮಾಣದಲ್ಲಿ ಪ್ರಶಸ್ತಿ ಪುರಸ್ಕಾರಗಳು. ಗೌರವ ಡಾಕ್ಟರೇಟ್‌ಗಳು ಪಡೆದವರು ಬಹುಶಃ ಇವರ ಹೊರತು ಮತ್ತೊಬ್ಬರು ಇರಲಾರರು. ಸ್ವತಂತ್ರ ಭಾರತದಲ್ಲಿ ಎಷ್ಟು ಜನ ಪ್ರಧಾನ ಮಂತ್ರಿಗಳು, ರಾಷ್ಟ್ರಪತಿಗಳು ಆಗಿ ಹೋದರೋ ಅಷ್ಟೂ ಮಂದಿಯಿಂದ ಸನ್ಮಾನಿತರಾಗಿದ್ದಾರೆ. ಪದ್ಮಭೂಷಣ, ಪದ್ಮವಿಭೂಷಣಗಳಲ್ಲದೆ, ಪ್ರತಿಷ್ಠಿತ ಪ್ರಶಸ್ತಿಗಳಾದ ಕನಕಪುರಂದರ ಪ್ರಶಸ್ತಿ, ಸಂಗೀತರತ್ನ ಪಿಟೀಲು ಚೌಡಯ್ಯ ಪ್ರಶಸ್ತಿ, ತಾನಸೇನ ಪ್ರಶಸ್ತಿ ದೀನನಾಥ ಮಂಗೇಷ್ಕರ ಪ್ರಶಸ್ತಿ ಇತ್ಯಾದಿ ಇನ್ನು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವುಗಳ ಜೊತೆಗೆ 6 ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್‌ಗಳು ದೊರೆತಿವೆ. ಗಂಗೂಬಾಯಿಯವರೇ ತಮಗೆ ದೊರೆಯುತ್ತಿರುವ ಈ ಡಾಕ್ಟರೇಟ್‌ಗಳಿಗೆ ಅಚ್ಚರಿ ಪಟ್ಟಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ "ನಂಗೆ ಡಾಕ್ಟರೇಟ್ ಕೊಡ್ತಿದ್ದೀರಲ್ಲ...... ನಾ ಓದಿದ್ದು ಬರೀ ಐದನೆಯ ಇಯತ್ತೆ" – ಎಂದು ಪ್ರತಿಕ್ರಿಯಿಸಿದ್ದರಂತೆ, ಅದು ಅವರ ವಿನಯವಂತಿಕೆಗೆ ಪ್ರತೀಕ.

ಸಂಗೀತವೇ ಆಗಲಿ ಬೇರೆಯಾವುದೇ ಕಲೆಯೇ ಆಗಲಿ, ಅದರಲ್ಲಿಯೇ ಮುಳುಗಿದವರಿಗೆ, ಅದರ ಹೊರತು ಬೇರೆ ಯಾವುದರ ಕಡೆಯೂ ಲಕ್ಷ್ಯವಿರುವುದಿಲ್ಲ. ರಾಷ್ಟ್ರೀಯ ಸಮಸ್ಯೆಗಳಿಗಾಗಲೀ ಸಾಮಾಜಿಕ

ಸಮಸ್ಯೆಗಳಿಗಾಗಲೀ ಸ್ಪಂದಿಸುವುದು ತೀರಾ ಅಪರೂಪ ಆದರೆ ಗಂಗೂಬಾಯಿ ಸದಾಕಾಲ ಸಾಮಾಜಿಕ ಎಚ್ಚರ ಹೊಂದಿದ್ದರು. ಸಮಾಜದ ಆಗುಹೋಗುಗಳಿಗೆ, ನೊಂದ ವ್ಯಕ್ತಿಗಳಿಗೆ, ಅನ್ಯಾಯಕ್ಕೆ ಒಳಗಾದವರಿಗೆ ಸ್ಪಂದಿಸುತ್ತಿದ್ದರು. ನೊಂದವರ ಪರವಾಗಿ ಹೋರಾಟಕ್ಕೆ ಇಳಿಯುತ್ತಿದ್ದರು. ಎಲ್ಲರೂ ಸುಖವಾಗಿರಬೇಕು ಎಲ್ಲವೂ ಚೆನ್ನಾಗಿರಬೇಕು ಯಾರಿಗೂ ಅನ್ಯಾಯವಾಗಬಾರದು ನಾಡು, ನುಡಿ, ಸಂಸ್ಕೃತಿ ಅಭಿವೃದ್ಧಿಯಾಗಬೇಕು. - ಇತ್ಯಾದಿ ಇತ್ಯಾದಿ ಹಂಬಲಗಳು, ಕನಸುಗಳು ಅವರದಾಗಿದ್ದವು. ಈ ಕಾರಣದಿಂದಾಗಿಯೇ ಅವರು ಪರೋಕ್ಷವಾಗಿ ಪ್ರತ್ಯಕ್ಷವಾಗಿ ಹೋರಾಟಗಳಲ್ಲಿ ತೊಡಗಿಸಿಕೊಂಡರು.

ಸ್ವಾತಂತ್ರ್ಯ ಚಳುವಳಿಯಲ್ಲಿ ನೇರವಾಗಿ ಭಾಗವಹಿಸದಿದ್ದರೂ ಹೋರಾಟಗಾರರಿಗೆ ಆಶ್ರಯ ನೀಡಿ, ಅವರ ಭೂಗತ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಮತ್ತು ಬ್ರಿಟಿಷ್ ಅಧಿಕಾರಿಗಳಿಂದ ರಕ್ಷಿಸುತ್ತಿದ್ದರು. ಹೆಸರಾಂತ ಗಾಯಕಿಯಾಗಿದ್ದುದರಿಂದ, ಮನೆಯ ತಪಾಸಣೆ ಮಾಡುತ್ತಿರಲಿಲ್ಲವಾಗಿ ದೇಶಭಕ್ತಯೋಧರು ಇಲ್ಲಿ ಸುರಕ್ಷಿತವಾಗಿರುತ್ತಿದ್ದರು.

ಕನ್ನಡದ ಅನುಷ್ಠಾನಕ್ಕಾಗಿ ನಡೆದ ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಆಗ ಅವರು ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಆದರೆ ಪ್ರತಿಭಟನೆಯ ಸಂಕೇತವಾಗಿ, ಅಧ್ಯಕ್ಷ ಪದವಿಗೆ ರಾಜಿನಾಮೆ ನೀಡಿದರು. ಪಾಟೀಲ್ ಪುಟ್ಟಪ್ಪ, ರಾಜಕುಮಾರ್, ಮೊದಲಾದವರೊಂದಿಗೆ ಚಳುವಳಿಯಲ್ಲಿ ಭಾಗವಹಿಸಿದರು.

ನಂತರ 70ರ ದಶಕದಲ್ಲಿ ಆಲ್ ಇಂಡಿಯಾ ಬ್ರಾಡ್ ಕಾಸ್ಟಿಂಗ್' ನಲ್ಲಿ ದಿನಗೂಲಿಗಳಾಗಿ ಕೆಲಸಮಾಡುತ್ತಿದ್ದ ಸುಮಾರು 600 ಮಂದಿಯ ಸೇವೆಯನ್ನು ಕಾಯಂಗೊಳಿಸುವಂತೆ ಇಂದಿರಾಗಾಂಧಿ ವಿರುದ್ಧ ಧರಣಿ ಕೂತರು. ಅವರ ಕೋಪಕ್ಕೂ ಗುರಿಯಾದರು. ಆದರೆ ಮೂರು ತಿಂಗಳಿನ ನಂತರ. ಇಂದಿರಾಗಾಂಧಿ ಅವರು ಇವರ ಬೇಡಿಕೆ ಮನ್ನಿಸಿ, ಕಾಯಂಗೊಳಿಸುವ ಆದೇಶ ನೀಡಿದರು.

ಇದೇ ರೀತಿಯಲ್ಲಿ ನೈರುತ್ಯ ರೈಲ್ವೆ ವಲಯವನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲು ನಡೆದ ಹೋರಾಟದಲ್ಲಿ, ಹುಬ್ಬಳ್ಳಿ ಧಾರವಾಡ ಅವಳಿನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕೆಂದು ಆಗ್ರಹಿಸಿ ನಡೆಸಿದ ಹೋರಾಟ, ವಿವಾದಿತ ಈದ್ಗಾ ಮೈದಾನದಲ್ಲಿ ರಾಷ್ಟ್ರ ಧ್ವಜ ಹಾರಿಸಲು ಅವಕಾಶ ನೀಡಬೇಕೆಂದು ಬೇಡಿ ನಡೆಸಿದ ಹೊರಾಟ - ಇಂತಹ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದುದ್ದೇ ಅವರ ಸಾಮಾಜಿಕ ಕಾಳಜಿಗೆ ನಿದರ್ಶನವಾಗಿದೆ.

ವೃತ್ತಿ, ಪ್ರವೃತ್ತಿ – ಎಲ್ಲವೂ ಸಂಗೀತಮಯ ಸಂಗೀತೋಪಾಸನೆ ಅವರ ಜೀವನದ ಆದರ್ಶ. ಎಲ್ಲೆಲ್ಲೂ ಸಂಗೀತದ ಮೊಳಗನ್ನು ಅಪೇಕ್ಷಿಸುತ್ತಿದ್ದರು. ಎಂತಹ ಸನ್ನಿವೇಶದಲ್ಲಿಯೂ ಹಾಡುವುದನ್ನು ಹತ್ತಿಕ್ಕಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದಲೇ ಹೋದಕಡೆಯಲ್ಲೆಲ್ಲ 'ಸಂಗೀತದ ತೊಟ್ಟಿಲು ತೂಗಿರಿ' ಎಂದು ಹೇಳುತ್ತಿದ್ದರು. ಅದೇ ಸಂದರ್ಭದಲ್ಲಿ ಅಮ್ಮನ ನೆನಪು ಒತ್ತಿ ಬರುತ್ತಿತ್ತು. "ನನ್ನವ್ವ ಅಂಬಾಬಾಯಿ ಕರ್ನಾಟಕಿ ಗಾಯಕಿ ಆದ್ರ ನನ್ನ ಹಿಂದೂಸ್ತಾನಿ ಸಂಗೀತಾಸಕ್ತಿ ನೋಡಿ ತಾನೇ ಹಾಡೋದನ್ನು ಬಿಟ್ಟು, ತನ್ನ ಸಂಗೀತದ ತೊಟ್ಟಿಲು ತೂಗೋದನ್ನ ನಿಲ್ಲಿಸಿದರೂ, ನನ್ನ ತೊಟ್ಟಿಲನ್ನು ತೂಗಿದಳು. ಸಂಗೀತದ ತೊಟ್ಟಿಲೆ ಹಾಗೆ. ಒಬ್ಬರು ಬಿಟ್ಟರೆ ಮತ್ತೊಬ್ಬರು ಕೈ ಹಚ್ಚತಾರ. ಈಗ ನನ್ನ ಮೊಮ್ಮಗಳು ಮಾಧವಿ ಛಲೋ ಹಾಡತಾಳ. ಸಂಗೀತ ಎಂದೂ ಬಡವಗೋದಿಲ್ಲ" – ಎನ್ನುವ ಮಾತುಗಳಲ್ಲಿ ಅವರಿಗರಿಯದಂತೆಯೇ ಸಂಗೀತ ಪರಂಪರೆಯ ಅವ್ಯಾಹತತೆಯನ್ನು ಸೂಚಿಸಿದ್ದಾರೆ. ಸಂಗೀತ ನಿಲ್ಲುವುದಿಲ್ಲ. ಸಾಯುವುದಿಲ್ಲ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರೆಯುತ್ತದೆ. ತಮ್ಮ ಬದುಕನ್ನೂ ಕೂಡ ಸಂಗೀತದ ಪರಿಭಾಷೆಯಲ್ಲಿ ವಿವರಿಸುತ್ತಿದ್ದರು. "ನನ್ನ ಬಯಕೇ ಜೋಗಿಯಾ, ತೋಡಿ ಮತ್ತು ಬಸಂತ ಬಹಾರ ರಾಗಗಳಂತೆ. ಒಂದುರಾಗದ ಭಾವನೆಗಳನ್ನು ನಾನು ಹಾಡುವಾಗ ಅನುಭವಿಸುತ್ತಿದ್ದೆ. ನನ್ನ ಎದೆಯಲ್ಲಿನ ನೋವು ನನ್ನ ಹಾಡಿನಲ್ಲಿರುತ್ತಿತ್ತು. ಜೊತೆಗೆ ಅದು ನನಗೆ ಮತ್ತು ಕೇಳುಗರಿಗೆ ಸಂತಸವನ್ನೂ ತಂದುಕೊಡುತ್ತಿತ್ತು. – ನೋವಿದ್ದಲ್ಲಿ ನಲಿವು ಇರುವಂತೆ – ಎಂದು ಭಾವಿಸಿದ್ದರಿಂದ, ನಿಲುವು ತಳೆದಿದ್ದರಿಂದಲೇ, ತಾವು ಅತಿಯಾಗಿ ಪ್ರೀತಿಸುತ್ತಿದ್ದ ಮತ್ತು ತಮಗೆ ಸಂಗೀತ ಸಾಥಿಯಾಗಿ ಸಹಕರಿಸಿ ಹಾಡುತ್ತಿದ್ದ ಪ್ರತಿಭಾವಂತ ಮಗಳು ಕೃಷ್ಣರ ಸಾವು ಎಂತಹ ಅಘಾತವನ್ನುಂಟು ಮಾಡಿದ್ದರೂ ಚೇತರಿಸಿಕೊಂಡು ಮುಂದುವರೆಯಲು ಸಾಧ್ಯವಾಯಿತು. ಅವರೇ ತಮ್ಮ ಅಂದಿನ ಸ್ಥಿತಿಯನ್ನು ಹೀಗೆ ಹೇಳಿಕೊಂಡಿದ್ದಾರೆ, "ದತ್ತಣ್ಣ (ದ.ರಾ.ಬೇಂದ್ರೆ) ಯಾವಾಗಲೂ ಹೇಳ್ತಿದ್ರು, ಗಂಗೂಬಾಯಿ ಹಾಡಿದ್ರ ಗಗನಕ್ಕ ಮುಟ್ತದ, ಕೃಷ್ಣಾ ಹಾಡಿದ್ರ ಹೃದಯಕ್ಕೆ ಮುಟ್ತಾದ ಮಗಳ ಹಾಡು ನನ್ನ ಹೃದಯ ತುಂಬಿತ್ತು. ಆದ್ರ ಕಿಟ್ಟಿ(ಕೃಷ್ಣಾ) ನನ್ನ ಕಣ್ಮುಂದೆ ಕಣ್ಮುಚ್ಚಿದಾಗ ನನ್ನ ಹೃದಯದ ಒಡೆದು ಹೋಯ್ತು. ಎಲ್ಲಾ ಹಾಡು ಮರತುಹೋದವ್ರ ಹಾಂಗ ಇದ್ದ ಬಿಟ್ಟೀನಿ' – ಎಂದು ಹೇಳಿದರೂ, ಕಾರ್ಯಕ್ರಮಕ್ಕೆ ಹೋಗುವುದನ್ನು ಬಿಟ್ಟಿರಲಿಲ್ಲ. ತಪ್ಪಿಣ ತಾಪತ್ರಯಗಳ ನಡುವೆಯೂ ನಿಲ್ಲುವ ಗಟ್ಟಿ ಮನಸ್ಸು. ಹೀಗಿದ್ದುದರಿಂದಲೇ ಸಂಗೀತ ಅವರನ್ನೂ ಬಿಡದೆ ಅವರ ಆತ್ಮದ ಭಾಗವಾಗಿ ಅವರೊಂದಿಗೆ ಬೆಳೆಯಿತು; ದಿಗ್ದಿಗಂತದ ಮೇರುಗಳನ್ನು ಸ್ಪರ್ಶಿಸಿತು. ಕಷ್ಟಗಳು,

ಆಘಾತಗಳು, ಅನಾರೋಗ್ಯ – ಏನೇ ಬರಲಿ, ಇರಲಿ ಅಭಿಮಾನಿಗಳ ಒತ್ತಾಯ ಅವರನ್ನು ಸುಮ್ಮನಿರಲು ಬಿಡುತ್ತಿರಲಿಲ್ಲ. ಛಲದಂತೆ ಸಂಗೀತವನ್ನು ಮುನ್ನಡೆಸಿಕೊಂಡು ಹೋದರು.

ಸಂಗೀತಗಾರರಿಗೆ ಗಾತ್ರ (ಕಂಠ)ವೇ ಪ್ರಾಣ. ಅದೇ ಅವರ ಆಸ್ತಿ. ಅದನ್ನು ಪ್ರಾಣಕ್ಕಿಂತ ಹೆಚ್ಚು ಜಾಗರೂಕತೆಯಿಂದ ಕಾಪಾಡಿಕೊಂಡು ಬರಬೇಕು. ಆದ್ದರಿಂದಲೇ ಸಂಗೀತ ಕಲಾವಿದರು ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಕಾಪಾಡಿಕೊಳ್ಳುತ್ತಾರೆ. ನೈಸರ್ಗಿಕವಾಗಿ ಮಧುರ ಕಂಠವಿದ್ದು, ವಿಧಿಯಾಟದ ಪರಿಣಾಮವಾಗಿ ತಮ್ಮ ಕೈ ಮೀರಿ ಅದಕ್ಕೇನಾದರೂ ತೊಂದರೆ ಸಂಭವಿಸಿದರೆ, ಕಲಾವಿದರ ಮಾನಸಿಕ ಸ್ಥಿತಿ ಹೇಗಿರಬಹುದೆಂಬುದು ಅವರ ಅನುಭವಕ್ಕೆ ಮಾತ್ರವೇ ಸಾಧ್ಯ! ಇಂಥದ್ದೇ ಒಂದು ದುರದೃಷ್ಟಕರ ಪ್ರಸಂಗ ಗಂಗೂಬಾಯಿಯವರಿಗೆ ಒದಗಿತು. ತಮ್ಮ ಮಧುರ, ಕೋಮಲ ಕಂಠದಿಂದ ಸಹಸ್ರಾರು ಶ್ರೋತೃಗಳನ್ನು ಭಾವಾಭಿಭೂತರನ್ನಾಗಿ ಮಾಡುತ್ತಿದ್ದ ಅವರು, ತಮ್ಮ ಗಂಟಲಲ್ಲಿ ದುರ್ಮಾಂಸ ಬೆಳೆದಿದ್ದರ ಪರಿಣಾಮವಾಗಿ ಆಪರೇಷನ್ ಅನಿವಾರ್ಯವಾಯಿತು. ಆಪರೇಷನ್ ಆಯಿತಾದರೂ ಮೊದಲಿನ ಮಧುರತೆ. ಕೋಮಲತೆಗಳು ಮರೆಯಾಗಿ ಗಂಡು ,ಗಡಸು ಧ್ವನಿ ಶಾಶ್ವತವಾಗಿ ಅವರ ಪಾಲಿಗೆ ಉಳಿಯಿತು. ಮಧುರ ಕಂಠ ಅಲ್ಲಿಂದ ಮುಂದೆ ಅವರಿಗೆ ಗತವೈಭವದ ನೆನಪಿನಂತಾಯಿತು. ಆದರೆ 'ಗಂಡು ಧ್ವನಿ'ಯಿಂದಾಗಿ ಅವರನ್ನು ಯಾರೂ ಕಡೆಗಣಿಸಲಿಲ್ಲ. ಬದಲಾಗಿ ಬಂದ ಆ 'ಧ್ವನಿ'ಯನ್ನು ಒಂದು ಸವಾಲಾಗಿ ಸ್ವೀಕರಿಸಿ. ಅದನ್ನು ತಮ್ಮ ಸಂಗೀತಕ್ಕೆ ಚೆನ್ನಾಗಿ ಪಳಗಿಸಿಕೊಂಡರು. ಕಂಠ ಮಾಧುರ್ಯಕ್ಕಾಗಿ ಜನ ಅವರನ್ನು ಮೆಚ್ಚಲಿಲ್ಲ. ಮುಗಿಲಿಗೇರಿಸಲಿಲ್ಲ. ಅವರಿಗೆ ಸಾಲುಸಾಲಾಗಿ ಬಂದ ಬಿರುದು ಪ್ರಶಸ್ತಿ, ಪುರಸ್ಕಾರಗಳು ಲಭಿಸಿದ್ದು, ಅವರ ಹಾಡಿನಲ್ಲಿದ್ದ ಶಾಸ್ತ್ರೀಯ, ಸಂಪ್ರದಾಯಬದ್ಧ, ಶಿಸ್ತಿನ ಸ್ವರಾಲಾಪ, ಸಾಂಗತ್ಯಗಳು. ಕ್ಲಿಷ್ಟಾತಿಕ್ಲಿಷ್ಟ ಬೋಲ್‌ಗಳು – ವ್ರಜಭಾಷೆಯಲ್ಲಿನ ಚೀಜುಗಳು – ಮೊದಲಾದವುಗಳನ್ನು ಹೊಂದಿಸಿಕೊಂಡು ಗತ್ತು ಗಾಂಭೀರ್ಯಗಳೊಡನೆ ಹಾಡುತ್ತಿದ್ದ ಶೈಲಿಯಿಂದ! ಆರಂಭದ ದಿನಗಳಲ್ಲಿಯೇ ಆಕಾಶವಾಣಿಗಾಗಿ ಹಾಡಿ ಸೈ ಎನಿಸಿಕೊಂಡಿದ್ದರು. ಎಚ್.ಎಂ.ವಿ ಗ್ರಾಮಾಫೋನ್ ಸಂಸ್ಥೆಯೊಂದಿಗೆ ಧ್ವನಿ ಮುದ್ರಣಕ್ಕೆ ಒಪ್ಪಂದ ಮಾಡಿಕೊಂಡು, ಕಂಠದಾನ ಮಾಡಿದ್ದರು. ಅಂಥಾದ್ದರಲ್ಲಿ ಈ 'ಗಂಡು ಧ್ವನಿ'ಯಿಂದಾಗಿ ಸ್ವಲ್ಪ ಮಟ್ಟಿಗೆ ಕಸಿವಿಸಿಗೊಂಡರೂ ಎದೆಗುಂದಲಿಲ್ಲ. ಯಾವ ರೀತಿಯಿಂದಲೂ ಅದು ತಮ್ಮ ಸಾಧನೆಗೆ, ತಮ್ಮನ್ನು ಗುರುತಿಸಿಕೊಳ್ಳಲಿಕ್ಕೆ, ಜನರ ಮೆಚ್ಚುಗೆ ಪಡೆಯಲಿಕ್ಕೆ ಅಡ್ಡಿಯಾಗಲಿಲ್ಲ. ಅಧೀರತೆಯನ್ನು ಬದಿಗಿಕ್ಕಿ,

ಮುಂದುವರೆದು 'ಗಂಡು ಧ್ವನಿ'ಯೇ ಅವರ ಅನನ್ಯತೆಗೆ ಕಾರಣವಾಯಿತು. ಎಷ್ಟೋ ಸಲ, ಆಕಾಶವಾಣಿ ಕೇಳುಗರಿಗೆ, ಗಂಗೂಬಾಯಿ ಅವರ ಹಾಡು ನಿರೀಕ್ಷಿಸುತ್ತಿದ್ದು, ಕೇಳಿದ ಮೇಲೆ ಯಾರೋ ಗಂಡಸರು ಹಾಡಿದರೆಂಬ ಭಾವನೆಗೆ ಒಳಗಾಗುತ್ತಿದ್ದರು. ಸ್ತ್ರೀ ರೂಪದಲ್ಲಿ ಅಡಗಿದ್ದ ಪುರುಷಧ್ವನಿಯೂ ಅನೇಕರಿಂದ ಅನೇಕ ರೀತಿಯಲ್ಲಿ ಹೊಗಳಿಸಿಕೊಂಡಿತು. ಬೇಂದ್ರೆ ಅವರಂತೂ ಗಂಗೂ ನಿನ್ನ ಗಂಟಲಲ್ಲಿ ಶಾಪಗ್ರಸ್ತ ಗಂಧರ್ವನಿದ್ದಾನೆ' – ಎಂದು ಬಣ್ಣಿಸಿದ್ದೇ ಅಲ್ಲದೆ, 'ಗಾನಗಂಗೆ' ಎಂಬ ಬಿರುದನ್ನೂ ನೀಡಿ ಮೆಚ್ಚಿಕೊಂಡರು ಗಂಗೂಬಾಯಿ, ಎಲ್ಲ ಬಿರುದು ಪ್ರಶಸ್ತಿಗಳಿಗಿಂತ ಬೇಂದ್ರೆ ನೀಡಿದ ಈ ಬಿರುದನ್ನು ತುಂಬ ಪ್ರೀತಿಸುತ್ತಿದ್ದರು.

ಧ್ವನಿ ಯಾವುದಾದರೇನು? ಅವರ ಹಾಡಿನ ವೈಖರಿಯನ್ನು ಅನೇಕ ಸಂಗೀತ ವಿದ್ವಾಂಸರು, ವಿಶ್ವ ಪ್ರಸಿದ್ಧ ಸಂಗೀತ ಕಲಾವಿದರು ಹಲವು ಬಗೆಯಲ್ಲಿ ಕೊಂಡಾಡಿದ್ದಾರೆ. "ಬಿಗುವಾದ ಗಮಕ, ಆಕರ್ಷಕ ಆಲಾಪ, ಹೃದ್ಯವಾದ ಮಂದ್ರ, ತಾರಕ, ಸ್ವರಶುದ್ಧಿ ಮೂರೂ ಸ್ತರಗಳಲ್ಲಿ ಸುಲಲಿತವಾಗಿ ಸಂಚರಿಸುವ ವಿಶಿಷ್ಟ ಕಂಠ ಹೊಂದಿದ್ದವರು ಡಾ॥ ಗಂಗೂಬಾಯಿ ಭಾವನಾತ್ಮಕ ತಾದಾತ್ಮ್ಯ, ವೈಯಕ್ತಿಕ ಬದ್ಧತೆ, ಅಭಿವ್ಯಕ್ತಿ ಮಾಧ್ಯಮದ ಮೇಲಣ ಪ್ರಭುತ್ವ ಇವರ ಸಂಗೀತದ ಹೆಚ್ಚುಗಾರಿಕೆ" (ಆರೂರು ಲಕ್ಷ್ಮಣ ಶೇಷ್, ಉದಯವಾಣಿ) ಎಂದು ಮುಕ್ತಕಂಠದಿಂದ ಅವರು ಸಂಗೀತವನ್ನು ಪ್ರಸ್ತುತ ಪಡಿಸುವ ವಿಧಾನವನ್ನು ಹೊಗಳಿದ್ದಕ್ಕೆ ರಾ. ಸತ್ಯನಾರಾಯಣ ಅವರು, ಅವರ ಗಂಡು ಧ್ವನಿಯ ಬಗ್ಗೆಯೂ ಧ್ವನಿ ಪೂರ್ಣವಾದ ಮಾತುಗಳನ್ನು ನುಡಿದಿದ್ದಾರೆ, "ಗಂಗೂಬಾಯಿ ಅವರ ಶಾರೀರ ಮಾತ್ರ ಗಂಡು ಎಂದಲ್ಲ; ಸಂಗೀತವೂ ಹಾಗೆಯೇ, ಹುರುಪು, ಬಿಕ್ಕಟ್ಟು, ಆತ್ಮ ಪ್ರತ್ಯಯ ಮನೋಧರ್ಮ, ಕಲ್ಪನೆಗಳಲ್ಲೂ ಅದು ಪುರುಷ ಗಾಯನವೇ, ಈ ಪುರುಷ ಗುಣ ಬಂದದ್ದು ಸ್ವಗುರು ಸವಾಯಿ ಗಂಧರ್ವರಿಂದಲೇ ಇರಬೇಕು' – ಎಂದು ಬಣ್ಣಿಸುವುದರ ಮೂಲಕ ಅವರು, ಗಂಗೂಬಾಯಿಯ ಪುರುಷ ಧ್ವನಿಯನ್ನು ಅವರಿಗೆ ದತ್ತವಾದ ಮಹತ್ತರ ಕೊಡುಗೆ ಎನ್ನುವುದನ್ನು ಸೂಚಿಸಿದ್ದಾರೆ.

ಈ ಗಂಡು ಕಂಠ ಇದ್ದುದರಿಂದಲೇ ಎಷ್ಟೋ ಮಂದಿ ಸಂಗೀತಾಭಿಮಾನಿಗಳು. ಮಾರವಾ, ಮಿಯಾಕಿ ತೋಡಿ, ಕಲಾವತಿ, ಆಭೋಗಿ ಕಾನಡಾದಂಥ ರಾಗಗಳನ್ನು ಅವರೇ ಹಾಡಬೇಕೆಂದು ಒತ್ತಾಯಿಸುತ್ತಿದ್ದರಂತೆ 'ಗಂಧರ್ವ ಗಾಯಕಿ –ಗಾನಗಂಗೆ – ಎಂದೆಲ್ಲಾ ಅಭಿಮಾನದಿಂದ ಕೊಂಡಾಡುತ್ತಿದ್ದರಂತೆ; ಇಷ್ಟೆಲ್ಲ ಎತ್ತರಕ್ಕೆ ದಿಢೀರನೆ ಏರಿದವರೆಲ್ಲ. ಸಂಗೀತ ಸಾಮ್ರಾಜ್ಯದ ಅನಭಿಷಕ್ತ ಮನುಷ್ಯರಾಗಿದ್ದು ಜೀವನ

ಜಂಜಾಟಗಳ ಜೊತೆ ಸೆಣಸಾಡಿ ಬಂದವರು. ಸಾಮಾಜಿಕ ಅವಹೇಳನದ ಕಹಿಯನ್ನೂ ಉಂಡವರು. ಸಾಂಪ್ರದಾಯಿಕ ಪರಿಸರ, ಮಡಿವಂತ ಸಾಮಾಜಿಕ ಮನಸ್ಥಿತಿ. ಪುರುಷ ಪ್ರಧಾನ ವ್ಯವಸ್ಥೆ ಇಂತಹ ಸನ್ನಿವೇಶದಲ್ಲಿ ಮಹಿಳೆಯೊಬ್ಬಳು ಸಂಗೀತಕ್ಷೇತ್ರ ಪ್ರವೇಶಿಸುವುದು ಕಲ್ಪನೆಗೂ ಮೀರಿದ್ದು. ಆದರೂ ಎದೆಗಾರಿಕೆಯಿಂದ ತಾವು ಪ್ರೀತಿಸುತ್ತಿದ್ದ ಸಂಗೀತಕ್ಕೆ ತಮ್ಮನ್ನು ತೆತ್ತುಕೊಂಡರು. ಅಹರ್ನಿಶಿ ಸಾಧನೆ ಮಾಡಿದರು 'ಗಾನೇ ವಾಲಿ' – ಎಂದು ಮೂದಲಿಸಿಕೊಂಡರೂ, ಅನೇಕ ಟೀಕೆ ಟಿಪ್ಪಣಿಗಳಿಗೆ ಗುರಿಯಾದರೂ ಛಲವಾದಿ ಗಂಗೂಬಾಯಿ ಪ್ರತಾಡನಗಳನ್ನು ಮೆಟ್ಟಿ ನಿಂತು. ಸಹನೆಯನ್ನೇ ಗುರಾಣಿಯಾಗಿಸಿಕೊಂಡು ಗಾನ–ಕೋಗಿಲೆ, ಗಾಯನ ಗಂಗೆ – ಗಾನಗಂಧರ್ವೆ – ಗಾನ ಚಿಂತಾಮಣಿ – ಎಂದೆಲ್ಲ ಬಿರುದುಗಳು ಒಲಿದು ಬರುವ ಹಂತಕ್ಕೆ ಬೆಳೆದರು. ದಕ್ಷಿಣ ಭಾರತ, ಅದರಲ್ಲೂ ಕರ್ನಾಟಕ, ಮದ್ರಾಸುಗಳು ಹಿಂದೂಸ್ತಾನಿ ಸಂಗೀತದ ಕಡೆಗೆ ಒಲಿದವುಗಳಲ್ಲ ಆದರೆ ಕನ್ನಡತಿ, ಅಚ್ಚ ಕನ್ನಡ ಮೂಲದ ಗಂಗೂ ಬಾಯಿ ತಮ್ಮ ಹಿಂದೂಸ್ತಾನಿ ಸಂಗೀತದ ಮೂಲಕ ಉತ್ತರ ಭಾರತದ ಸಂಗೀತದ ಭೂಪಟದಲ್ಲಿ ಕರ್ನಾಟಕಕ್ಕೆ ಒಂದು ಜಾಗ ಕಲ್ಪಿಸಿದರು. ದಕ್ಷಿಣಭಾರತದಲ್ಲಿ ಹಿಂದೂಸ್ತಾನಿ ಸಂಗೀತವೆಂದಾಗ ಎದ್ದು ನಿಲ್ಲುವ ಹೆಸರು ಗಂಗೂಬಾಯಿ ಅವರದು, ಸಂಗೀತ ಶೈಲಿಗಳು ಯಾವುದಾದರೇನು? ಪ್ರತಿಭೆ ಯಾವುದಕ್ಕಾದರೂ ಒಲಿಯುತ್ತದೆ ಎಂಬುದನ್ನು ತಮ್ಮ ಸಾಧನೆಯಿಂದ ನಿರೂಪಿಸಿದರು.

ಗಂಗೂಬಾಯಿ ದೇಶದ ಉದ್ದಗಲಕ್ಕೂ ಸಂಚರಿಸಿದರು ವಿದೇಶಗಳನ್ನೂ ಸುತ್ತಿ ಬಂದರು. ದೇಶದ ಹಿರಿ ತಲೆಮಾರಿನ ಸಂಗೀತಗಾರರೆಲ್ಲರ ಜೊತೆಯ ಒಡನಾಟವನ್ನು ಕಡೆತನಕ ಮುಂದುವರೆಸಿಕೊಂಡು ಬಂದಿದ್ದರು. ಹಿರಿಯರಾಗಲೀ ಕಿರಿಯರಾಗಲೀ ಅವರ ಆತ್ಮೀಯತೆ, ಪ್ರೀತಿಯ ಒಡನಾಟದಲ್ಲಿ ಯಾವುದೇ ಪ್ರತ್ಯಯಪಿರಲಿಲ್ಲ. ಮೇರುವಿಸ್ತರದ ಅವರ ಸಂಗೀತದಂತೆಯೇ ಅವರ ವ್ಯಕ್ತಿತ್ವವೂ ಕೂಡಾ. ಪ್ರಶಸ್ತಿ, ಪುರಸ್ಕಾರ, ಕೀರ್ತಿಗಳು ಎಂದೂ ಅವರ ತಲೆಗೇರಲಿಲ್ಲ. ಪ್ರಶಸ್ತಿಗಳು ಬಂದದ್ದು ಹೆಚ್ಚುಗಾರಿಕೆಯೆಂದೂ ಭಾವಿಸಲಿಲ್ಲ. ಒಂದು ಸಂದರ್ಭದಲ್ಲಿ ಅವರು– "ನನ್ನ ಗುರುಗಳು ಬದುಕಿದ್ದರೆ ಇವೆಲ್ಲವೂ ಅವರಿಗೇ ಸಲ್ಲುತ್ತಿದ್ದವು" – ಎಂದು ಹೇಳಿದ ಮಾತು ಅವರ ವಿನಯಕ್ಕೆ ಕನ್ನಡಿಯಾಗಿದೆ.

ಯಾವುದೇ ಕಾರ್ಯಕ್ರಮ, ಎಂತಹ ದೊಡ್ಡ ಪ್ರಮಾಣದ್ದೇ ಆಗಿರಲಿ, ಅವರು ಸರಳವಾದ ಉಡುಪಿನಲ್ಲಿ ತೀರಾ ಸಾಮಾನ್ಯರಂತೆ ಕಾಣಿಸಿಕೊಳ್ಳುತ್ತಿದ್ದರು. ಇದರಿಂದಾಗಿ ಎಷ್ಟೋ ಸಲ, ಪ್ರವೇಶ ದ್ವಾರದಲ್ಲಿ ತಡೆದು ನಿಲ್ಲಬೇಕಾದ

ಪೇಚಾಟ ಎದುರಾಗುತ್ತಿತ್ತು. ಒಮ್ಮೆ ಬಡೋದಾದಲ್ಲಿ, ತಮ್ಮ ಕಛೇರಿ ಏರ್ಪಾಟಾಗಿತ್ತು. ಅವರನ್ನು ಎದುರುಗೊಳ್ಳಲು ಬಂದವರಿಗೆ ಗಂಗೂಬಾಯಿ ಯಾರೆಂದೇ ಗುರುತಿಸಲಾಗದೆ, ಇವರಿಗೆ ಬದಲಾಗಿ ಬೇರೆ ಯಾರಿಗೋ ಹೂವಿನ ಹಾರ ಹಾಕಿ ಬಿಟ್ಟರಂತೆ! ನಂತರ ತಿಳಿದು ಕ್ಷಮೆಯಾಚಿಸಿದಾಗ, ನಕ್ಕು ಸುಮ್ಮನಾದರಂತೆ! ಮತ್ತೊಂದು ಸಲ ಇದೇ ರೀತಿ, ಗೇಟನಲ್ಲಿ ಇವರನ್ನು ತಡೆದು ನಿಲ್ಲಿಸಿದಾಗ ಸಂಘಟಕರು ಬಂದು ಕ್ಷಮೆ ಕೋರಿ ಒಳಗೆ ಕರೆದೊಯ್ದುರಂತೆ ಇಂತಹ ಪ್ರಸಂಗಗಳು ಅವರ ಸರಳತೆಯಿಂದಾಗಿ ಹತ್ತಾರುಸಲ ಎದುರಾಗುತ್ತಿದ್ದುದು ಸ್ವಾಭಾವಿಕವೇ.

ಅವರು ಸ್ನೇಹಿತರುಗಳಲ್ಲಾಗಲಿ, ಕಛೇರಿಗಳಲ್ಲಾಗಲೀ ಔಪಚಾರಿಕತೆಯನ್ನು ನಿರೀಕ್ಷಿಸುತ್ತಿರಲಿಲ್ಲ. ಎಲ್ಲಿಯೂ ಪರಕೀಯತೆಯ ಭಾವ ಕಾಡಿದ್ದಿಲ್ಲ. ಔಪಚಾರಿಕತೆಯನ್ನು ನಿರೀಕ್ಷಿಸಿದ್ದಿಲ್ಲ. ಅವರಿಗೆ ಸ್ಫೂರ್ತಿ ಬಂತೆಂದರೆ ಯಾವುದೇ ಪೂರ್ವ ಸಿದ್ಧತೆಯಿಲ್ಲದೆಯೇ ದನಿ ತೆಗೆದು ಹಾಡಲು ಶುರು ಮಾಡಿ ಸಭಿಕರನ್ನು ಆಶ್ಚರ್ಯ ಚಕಿತರನ್ನಾಗಿಸುತ್ತಿದ್ದರಂತೆ.

ಒಮ್ಮೆ 2006ರಲ್ಲಿ ಡಿಸೆಂಬರ್ ಬೆಂಗಳೂರಿನಲ್ಲಿ ಪ್ರಸಿದ್ಧ ಬಾನ್ಸುರಿವಾದಕರಾದ ಪಂಡಿತ್ ಹರಿಪ್ರಸಾದ್ ಚೌರಾಸಿಯಾ ಅವರ ಕಾರ್ಯಕ್ರಮ ಏರ್ಪಾಡಾಗಿತ್ತು. ಗಂಗೂಬಾಯಿ ಹುಬ್ಬಳಿಯಿಂದ ಚೌರಾಸಿಯಾರ ಬಾನ್ಸುರಿ ಕೇಳಲೆಂದೇ ಬೆಂಗಳೂರಿಗೆ ಬಂದಿದ್ದರು. ಚೌರಾಸಿಯಾ, ಅವರು ಬಂದದ್ದನ್ನು ಗಮನಿಸಿ, ಗೌರವದಿಂದ ಎದ್ದು ಬಂದು ವೇದಿಕೆಗೆ ಕರೆದು ಹಾಡಬೇಕೆಂದು ಕೇಳಿಕೊಂಡರು. ಕೂಡಲೇ ಗಂಗೂಬಾಯಿ ಹಿಂದು ಮುಂದು ನೋಡದೆ ಗಾಲಿ ಕುರ್ಚಿಯ ಮೇಲೆ ಕುಳಿತೇ, ಯಾವ ಪೂರ್ವ ಸಿದ್ಧತೆಯೂ ಇಲ್ಲದಿದ್ದರೂ ಅವರ ಕೊಳಲಿಗೆ ಕಂಠ ಸೇರಿಸಿ ಆಜಾ ಬಜಾಯೇ – ಎಂಬ ಗೀತೆಯನ್ನು ಹಾಡಿಯೇ ಬಿಟ್ಟರಂತೆ!!

ಈ ರೀತಿಯಲ್ಲಿ ಅವರು ಅನೇಕ ಡ್ಯೂಯೆಟ್ (ಜುಗಲ ಬಂದಿ) ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಗಳ ಜೊತೆಗಂತೂ ಈ ಬಗೆಯಲ್ಲಿ ಸಾಕಷ್ಟು ಕಾಲ ಹಾಡಿದ್ದಾರೆ. ಒಂದು ರೀತಿಯಲ್ಲಿ ಕೃಷ್ಣಾ ಸಾಯುವವರೆಗೂ ಗಂಗೂಬಾಯಿಗೆ ಸಾಥ್ ನೀಡಿ ಹಾಡಿದ್ದಾರೆ. ತಾಯಿ ಮಗಳ ಜೊತೆಯಾದ ಹಾಡುಗಾರಿಕೆಯ ಅನುಭವವೇ ರೋಮಾಂಚಕಾರಿ ಎನ್ನುವುದು ಅನೇಕರ ಅಭಿಪ್ರಾಯ. ಇದೇ ಕಾರಣಕ್ಕೆ 'ಗಂಗೂ ಹಾಡಿದರೆ ಮುಗಿಲು ಮುಟ್ಟದಾ, ಕೃಷ್ಣಾ ಹಾಡಿದರೆ ಹೃದಯ ಮುಟ್ಟದಾ' – ಎನ್ನುವ ಉಕ್ತಿ ಪ್ರಚಲಿತವಾಯಿತಂತೆ

ಗಂಗೂಬಾಯಿ ಸಂಗೀತವನ್ನು ತೊಟ್ಟಿಲಿಗೆ ಹೋಲಿಸುತ್ತಿದ್ದ ರೀತಿಯೇ ಮೋಹಕ, ಯಾರೋ ಒಮ್ಮೆ ಅವರನ್ನು, "ಕೇವಲ ಶಾಸ್ತ್ರೀಯ ಪದ್ಧತಿಗೇ ಹಚ್ಚಿಕೊಂಡ ನಿಮ್ಮಂಥವರಿಗೆ ಬೆಲೆ ಇದೆಯೇ ಈ ಪ್ರಪಂಚದಲ್ಲಿ" – ಎಂದು ಪ್ರಶ್ನಿಸಿದರಂತೆ ಅದಕ್ಕೆ ಅವರು– "ಹೌದ್ರೀ, ಕೆಲವರು ನಿಮ್ಮ ಸಂಗೀತ ಇರಲೊಲ್ಲದು ಅಂತಾರೆ. ಸಂಗೂ ಹಾಂಗೆ ಅನ್ನಿಸ್ತದ ಇದೊಂದು ರೀತಿ ಗಾಳಿ ಇದ್ದಾಂಗ ಹಿಂಗೆ ಬರ್ತಾದೆ ಹಂಗೆ ಹೋಗ್ತದೆ. ನಿಮಗೆ ಗೊತ್ತೆನ್ರಿ ಸಂಗೀತ ಅನ್ನೋದು ತೊಟ್ಟಿಲಿದ್ದಾಂಗೆ ಹಿಂದೆ ತಳ್ತೀವಿ, ಹಂಗೆ ಎಳ್ಕೋತೇವೆ. ಅದನ್ನುತೂಗೋ ಕೈಯಿ ಪ್ರತಿಕಾಲಘಟ್ಟದಲ್ಲಿ ಬರ್ತಾವೆ ಅದಕ್ಕೆ ಸಾವಿಲ್ಲ' – ಎಂದು ಉತ್ತರಿಸಿ ಬಾಯಿ ಮುಚ್ಚಿಸಿದ್ದರು.

ತಮ್ಮ ಸುದೀರ್ಘ ಬದುಕಿನಲ್ಲಿ ಅವರು ನೆಚ್ಚಿಕೊಂಡಿದ್ದುದು ಸಂಗೀತವೊಂದೇ. ಸಂಗೀತಗಾರರೆನಿಸಿಕೊಳ್ಳಬೇಕಾದರೆ ಶಿಸ್ತು, ಸಂಯಮ, ಸಂಗೀತ ಮೂರು ಅಗತ್ಯ. ಜೊತೆಗೆ ಸಾಧನೆ, ಸಾಧನೆಯ ಮೂಲಕ ಸಂಗೀತ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿಕೊಂಡರೆ, ವಿಶ್ವವನ್ನೇ ಸುತ್ತಿಬರಬಹುದು. ಇದಕ್ಕೆ ತಾನೇ ನಿದರ್ಶನ ಎಂದು ಹೇಳುತ್ತಿದ್ದರು.

ಗಂಗೂಬಾಯಿಯನ್ನು ಕೊಂಡಾಡದ ನಾಲಿಗೆಗಳಿಲ್ಲ. ಪ್ರತಿಯೊಬ್ಬರೂ, ಸಾಹಿತಿಗಳಾಗಿರಬಹುದು. ಸಂಗೀತ ಕಲಾವಿದರಾಗಿರಬಹುದು, ಬಂಧು ಮಿತ್ರರಾಗಿರಬಹುದು, ಶಿಷ್ಯರಾಗಿರಬಹುದು, ಅಭಿಮಾನಿಗಳಾಗಿರಬಹುದು – ತಮ್ಮ ತಮ್ಮ ಗ್ರಹಿಕೆಗೆ ತಕ್ಕ ಬಗೆಯಲ್ಲಿ ಅವರ ಗುಣ. ಸ್ವಭಾವ, ವ್ಯಕ್ತಿತ್ವ ವಿದ್ವತ್ತುಗಳನ್ನು ಕೊಂಡಾಡಿ ಬಣ್ಣಿಸುತ್ತಾರೆ. ಒಬ್ಬರಿಗೆ ಅವರು ಸಂಗೀತ ಲೋಕದ ವಜ್ರ, ಮತ್ತೊಬ್ಬರಿಗೆ ಜೀವಂತ ದೇವತೆ; ಮಗದೊಬ್ಬರಿಗೆ ಗಂಗೂಬಾಯಿ ಪವಿತ್ರ ಗಂಗಾ ನದಿಯ ಪ್ರತೀಕ. ಗಡಿಗಳಲ್ಲಿ ಸೀಮಿತವಾಗದ ಸಂಗೀತದ ದೈತ್ಯ ಪ್ರತಿಭೆ. ದಕ್ಷಿಣಕ್ಕೆ ಸಂಬಂಧ ಪಟ್ಟಂತೆ ಗಂಗೂಬಾಯಿ ಎಂದರೆ ಕಿರಾಣಾ ಘರಾಣಾ ಸಂಗೀತ ಪರಂಪರೆ, ಮತ್ತು ಆ ಪರಂಪರೆಯೇ ಗಂಗೂಬಾಯಿ! ಇಂತಹ ಅನನ್ಯ ಅವಿಚ್ಛಿನ್ನ ಬೆಸುಗೆಯೆ, ಗಂಗೂಬಾಯಿ ಮತ್ತು ಸಂಗೀತ ಪರಂಪರೆ! ಆಕೆ ದೊಡ್ಡ ಗಾಯಕಿಯೂ ಹೌದು; ದೊಡ್ಡ ವ್ಯಕ್ತಿಯೂ ಹೌದು. ಪ್ರೀತಿ, ವಾತ್ಸಲ್ಯಗಳ ಚಿಲುಮೆ; ಉತ್ಸಾಹದ ಬುಗ್ಗೆ ಅವರ ವ್ಯಕ್ತಿತ್ವ, ಗಾಯನಗಳಲ್ಲಿ ಒಂದು ಬಗೆಯ ಅವ್ಯಕ್ತ ಸೆಳೆತವಿದೆ. ತಮ್ಮ ಕಂಠ ಶ್ರೀಮಂತಿಕೆಯಿಂದ ವಿಶ್ವವನ್ನೇ ಗೆದ್ದ ಗಂಗೂಬಾಯಿ. ಎಂಬತ್ತು ವರುಷಕ್ಕೂ ಮೀರಿ ಸಂಗೀತ ಸಾಮ್ರಾಜ್ಯವನ್ನಾಳಿದ ಮಹಾ ಸಾಮ್ರಾಜ್ಞೆ, ಜುಲೈ 21, ಮಂಗಳವಾರ, 2009, ಅಸಂಖ್ಯ ಅಭಿಮಾನಿಗಳ ಮನದಲ್ಲಿ, ತಾವು ವಾಸಿಸುತ್ತಿದ್ದ ಮನೆಯಲ್ಲಿ ಶೂನ್ಯ ತುಂಬಿ ಚಿರನಿದ್ರೆಗೆ ಸಂದರು. ದೇಶಕ್ಕೆ ದೇಶವೇ ಕಂಬನಿಯಿಕ್ಕಿತು. ಎಷ್ಟೇ ದೊಡ್ಡವರಾದರೂ

ಸಾವು, ನಿಷ್ಕರುಣಿ ಅವರ ಕರೆಗೆ ಓಗೊಟ್ಟು ಹೊರಡಲೇ ಬೇಕು. ಅದು ನಿಯಮ. ಅನಾರೋಗ್ಯದಿಂದ ನರಳಿದ ಗಂಗೂಬಾಯಿಯ ಚೇತನ ಪಾರ್ಥಿವ ಶರೀರವನ್ನು ತೊರೆದು ಸಂಕೋಲೆ ಮುಕ್ತ ಸಂಭ್ರಮದಲ್ಲಿ, ಸೂಕ್ಷ್ಮ ರೂಪದಲ್ಲಿ ಎಲ್ಲೆಲ್ಲೂ ವಿಹರಿಸುತ್ತಿದೆ.

ಸಾವು ಅನಿವಾರ್ಯವೆಂದು ಒಪ್ಪಿಕೊಂಡರೂ, ಅವರು ಇಲ್ಲವೆಂದಾದದ್ದು, ಸಂಗೀತ ಜಗತ್ತಿಗೆ ಅಪಾರನಷ್ಟವೆನ್ನುವುದು ನಮ್ಮೆಲ್ಲರ ನಂಬಿಕೆ. ಅವರನ್ನು ಮತ್ತೆ ಬದುಕಿಸಿಕೊಳ್ಳಲಾಗದಿದ್ದರೂ, ಅವರ ನೆನಪುಗಳನ್ನು ಚಿರಂತನಗೊಳಿಸುವ ಪ್ರಯತ್ನದಲ್ಲಿ ಮುಂದಾಗಬೇಕಿದೆ. ಅವರ ಹೆಸರಿನಲ್ಲಿ ವಿಶ್ವ ವಿದ್ಯಾಲಯಗಳು, ಸಂಗೀತ ಶಾಲೆಗಳು, ಪ್ರಶಸ್ತಿ, ಪುರಸ್ಕಾರಗಳು, – ಆರಂಭಗೊಂಡರೆ, ನಮ್ಮೆಲ್ಲರ ಭಕ್ತಿ, ಶ್ರದ್ಧೆಗಳು ಸಾರ್ಥಕವಾಗಬಲ್ಲವು

ರಾಷ್ಟ್ರದ ಗಣ್ಯ ವ್ಯಕ್ತಿಗಳು, ರಾಜಕಾರಣಿಗಳು ಸಾಹಿತಿ ಕಲಾವಿದರು ತಮ್ಮ ತಮ್ಮ ರೀತಿಯಿಂದ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಅವರ ಕುಟುಂಬದವರೂ ಕೂಡಾ ಸಂಗೀತ ಗಂಗೆಯ ನೆನಪಿನಲ್ಲಿ ಶಾಶ್ವತ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

ಮರಣೋತ್ತರ "ಭಾರತ ರತ್ನವೂ" ಸಂದರೆ, ನಮ್ಮೆಲ್ಲರ ಪ್ರೀತಿ, ಅಭಿಮಾನಗಳ ಪ್ರಾಮಾಣಿಕ ಶ್ರದ್ಧಾಂಜಲಿಯಾಗುತ್ತದೆ.

ನಿನ್ನ ನೆನಪಿಗೆ

ಏನ ಹೇಳಲೇ ತಾಯೆ
ಹ್ಯಾಂಗೆ ಬಣ್ಣಿಸಲೇ?
ದನಿ ಬಿಚ್ಚಿದರೆ ಧುಮ್ಮಿಕ್ಕಿ
ನಲಿಯುವುವು ಸ್ವರ, ರಾಗ
ಸುರಸುಂದರಿಯರು
ಗಂಡು ಕಂಠದಲಿ
ಸೆರೆಗೊಂಡು ಕುಳಿತಿರುವ
ಆಲಾಪಗಳು ಚಡಪಡಿಸಿ
ಬೇಡುತಿವೆ ಬಿಡುಗಡೆಯ
ನೀನಹೆಯೆ ತಾಯಿ
ಪರಮ ಪಾವನ ಗಂಗೆ
ಹರಿದು ಬಿಡು ನಮ್ಮೆಲ್ಲರದೆ
ಕದಗಳನು ಬಿಡಿಸಿ ನುಗ್ಗಿ
ಕೊಳೆತು ನಾರುವ
ಭಾವ ಚಿತ್ತದ ಕೊಳೆಯು
ಕರಗಿ ಹೊಮ್ಮಲೊಂದೇ ಸಮನೆ
ಗಾನಗಂದ; ಮಧುರ ಬಂಧ
ನೀನೊಂದು ಮಧುರ ವೀಣೆ
ನರನಾಡಿ ತಂತಿಗಳು
ತಣ್ಣನೆಯ ಗಾಳಿ
ಸ್ಪರ್ಶವಾದರು ಸಾಕು
ನೂರು ದಿಕ್ಕುಗಳಲ್ಲಿ
ಚಿಮ್ಮುವುದು ಸಂಗೀತ ಕಾರಂಜಿ
ಅರ್ಥ ಸ್ವಾರ್ಥವ ತೊರೆದು
ತುಂಬು ಬದುಕಿನ ಹಡಗು
ಸಾಗಿತ್ತು ಸಂಗೀತ ಸಾಗರಗಳ
ದಡಮುಟ್ಟಿ ದೇಶ ದೇಶಗಳಾಚೆ.
ಗಟ್ಟಿಯೆದೆ ಗಂಗವ್ವ ಗದ್ದರಿಸಿ,
ನಿನ್ನ ಕರೆಯ ಬಂದ ಕಾಲವನು
ಅಟ್ಟಿ ಕಳಿಸದೆ, ಕೂಡಿ ಹೋದೆಯೇಕೆ
ನಳನಳಿಸಿದ ನಾಡನ್ನು ನಮ್ಮನ್ನು
ಬರಡು ಮಾಡಿದೆಯೇಕೆ?

ಪತ್ರಿಕಾ ನಮನಗಳು

1 ಸ್ವರಗಂಗೆ

ಸಿರಿಕಂಠದ ಮೂಲಕ ಸಂಗೀತ ಸಾಮ್ರಾಜ್ಞೆಯಾಗಿ ಮೆರೆದ ಗಂಗೂಬಾಯಿ ಹಾನಗಲ್ಲ ಅವರದು ಮೇರು ಸದೃಶ ವ್ಯಕ್ತಿತ್ವ. ಗಂಗಾಮಾಯಿ ಇನ್ನಿಲ್ಲವಾದರೂ ಅವರ ಗಾಯನದ ಇಂಪು – ಸೊಂಪು ಎಲ್ಲವೂ ಶಾಶ್ವತ.

ಹಿಂದೂಸ್ಥಾನಿ ಸಂಗೀತ ನಕ್ಷತ್ರ, ಕಿರಾಣಾ ಘರಾಣೆಯ ಒಡತಿ, ಸ್ವರಗಂಗೆ ಗಂಗೂಬಾಯಿ ಇನ್ನಿಲ್ಲ. ತಮ್ಮ ಗಾನದ ಮೂಲಕ ಏಳು ದಶಕಗಳಷ್ಟು ಕಾಲ ಸಂಗೀತ ಸಾಮ್ರಾಜ್ಞೆಯಾಗಿ ಮೆರೆದ ಗಂಗವ್ವ ಹುಬ್ಬಳ್ಳಿಯವರೆನ್ನುವದೇ ಒಂದು ಹೆಮ್ಮೆ. ಸಂಗೀತದ ಮೂಲಕವೇ ಹುಬ್ಬಳ್ಳಿಯ ಹೆಸರನ್ನು ಉತ್ತುಂಗಕ್ಕೇರಿಸಿದ ಸಾಧನೆ ಇವರದು. ದೇಶಾದ್ಯಂತ ಮಾತ್ರವಲ್ಲ, ವಿದೇಶಗಳಲ್ಲೂ ಛಾಪು ಮೂಡಿಸಿದ್ದ ಗಂಗೂಬಾಯಿಯವರನ್ನು ಅರಿಸಿ ಬಂದಿದ್ದ ಪ್ರಶಸ್ತಿಗಳು ಅಪಾರ.

ತಮ್ಮ ಸಾಧನೆಗಾಗಿ ತಾನ್‌ಸೇನ್ ಅಲ್ಲದೆ, ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳನ್ನು ಸಹ ಪಡೆದಿದ್ದ ಗಂಗೂಬಾಯಿಯವರಿಗೆ ದೇಶದ ಬೇರೆ ಬೇರೆ ಆರು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ್ದವೆಂದರೆ, ನಾದ ಲೋಕದ ಅವರ ಪ್ರತಿಭೆಯ ಕಿರುಪರಿಚಯ ಆದೀತು. ಸಾಹಿತ್ಯ. ಸಾಂಸ್ಕೃತಿಕ ಲೋಕದ ತವರು ಮನೆ ಧಾರವಾಡದಲ್ಲಿ 1913ರಲ್ಲಿ ಜನಿಸಿದ ಗಂಗೂಬಾಯಿ, ತಾರುಣ್ಯಕ್ಕೆ ಬರುತ್ತಿದ್ದಂತೆ ಹುಬ್ಬಳ್ಳಿಗೆ ಬಂದು ನೆಲೆಸಿದರು. ಇವರಿಗೆ ಜನನಿಯೇ ಮೊದಲ ಗುರು. ತಾಯಿ ಅಂಬಾಬಾಯಿಯವರಿಂದ ಕರ್ನಾಟಕಿ ಸಂಗೀತ ವಿದ್ಯೆಯಲ್ಲಿ ಮೊದಲ ಶಿಕ್ಷಣ ಪಡೆದ ಇವರು ನಂತರ ಹಿಂದೂಸ್ಥಾನಿ ಸಂಗೀತ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು.

ದತ್ತೋಪಂತ ದೇಸಾಯಿ, ಕೃಷ್ಣಾಚಾರ್ಯ ಅವರಲ್ಲಿ ಹಿಂದೂಸ್ಥಾನಿ ಸಂಗೀತದ ಆರಂಭಿಕ ಶಿಕ್ಷಣವನ್ನು ಪಡೆದರು. ಪ್ರಸಿದ್ಧ ಗವಾಯಿ, ಸವಾಯಿ ಗಂಧರ್ವರೆಂದೇ ಪ್ರಸಿದ್ಧರಾದ ರಾಮಭಾವು ಕುಂದಗೋಳಕರವರಲ್ಲಿ ಸತತವಾಗಿ ಅಭ್ಯಸಿಸಿದ ಇವರು ಕಿರಾಣಾ ಘರಾಣೆಯ ಗಾಯಕಿಯಾಗಿ ಹೊರಹೊಮ್ಮಿದರು. ಆಕಾಶವಾಣಿಯಲ್ಲಿ ಇವರ ಮೊದಲ ಗಾಯನ ಪ್ರಸಾರವಾದಾಗ ಇದು ಹೆಣ್ಣು ಧ್ವನಿ ಅಲ್ಲ ಎಂಬ ಭಾವನೆಯೇ ಮಡುಗಟ್ಟಿತ್ತು. ನಂತರ ಇದೇ ಧ್ವನಿ ಅವರಿಗೆ

ಪುರುಷ ಪ್ರಧಾನ ಸಮಾಜ ಹಾಗೂ ಸಂಗೀತ ಕ್ಷೇತ್ರದಲ್ಲಿ ಪುರುಷ ಪ್ರಾಬಲ್ಯದ ಎದುರು ಸೆಣಸಲು ನೆರವಾಯಿತು. ನಂತರ ಗಂಗವ್ವ ಹಿಂತಿರುಗಿ ನೋಡುವ ಪ್ರಮೇಯವೇ ಬರಲಿಲ್ಲ.

ಗಂಗೂಬಾಯಿ ಕೇವಲ ಕರ್ನಾಟಕಕ್ಕೆ ಮನೆ ಮಾತಾಗಲಿಲ್ಲ. ನಾಡಿಗಿಂತ ಹೆಚ್ಚಾಗಿ ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯಪ್ರದೇಶಗಳಲ್ಲಿ ತಮ್ಮ ಗಾನ ಲಹರಿಯಿಂದ ಸಂಗೀತಾಸಕ್ತರ ಮನಗೆದ್ದರು. ಸಂಗೀತ ಕ್ಷೇತ್ರದಲ್ಲಿನ ಸತತ ಸಾಧನೆ, ಸಮರ್ಪಣಾ ಮನೋಭಾವವೇ ಅವರನ್ನು ಈ ದಿಸೆಯಲ್ಲಿ ಉತ್ತುಂಗಕ್ಕೇರಿಸಲು ಸಹಾಯಕವಾಯಿತು.

(ಸಂಯುಕ್ತ ಕರ್ನಾಟಕ 22 ಜುಲೈ)

2. ಅಮರಗಂಗೆ

ಸಂಗೀತ ಸಾಮ್ರಾಜ್ಞೆ ಡಾ. ಗಂಗೂಬಾಯಿ ಹಾನಗಲ್ ಇನ್ನಿಲ್ಲ. ಅವರು ಹೆಮ್ಮೆಯ ಕನ್ನಡತಿ, ದೇಶದ ಶ್ರೇಷ್ಠ ಗಾಯಕಿ, ಕಿರಾಣಾ ಘರಾಣಾವನ್ನು ಪ್ರಪಂಚದಾದ್ಯಂತ ಪಸರಿಸಿದ ಗಾಯನ ಗಂಗೆ. 'ಇಂಥವರಿಗೆ ಸಾವು ಬರಲೇಬಾರದು' ಎಂದು ನಾಡಿಗೆ ನಾಡೇ ಆಶಿಸುವಂಥ ಸಾರ್ಥಕ ಬದುಕು ಅವರದು. ಸಂಗೀತವೆಂದರೆ ಸಿಡಿದೇಳುವ, ಹೆಣ್ಣುಮಕ್ಕಳು ಮನೆಯಾಚೆ ಹೋಗುವುದನ್ನೇ ಆಕ್ಷೇಪಿಸುವ ಸಮಾಜವಿದ್ದ ಕಾಲದಲ್ಲಿ ಸಂಗೀತ ಸರಸ್ವತಿಗೆ ಒಲಿದವರು ಡಾ. ಗಂಗೂಬಾಯಿ ಗುರುರಾಜ್ ಕೌಲಗಿ ಹಾನಗಲ್. ಆ ನಿಟ್ಟಿನಲ್ಲಿ ದಕ್ಷಿಣ ಭಾರತದ ಧೀರ ಮಹಿಳೆ ಅವರೆಂದರೆ ತಪ್ಪಲ್ಲ. ಸಂಗೀತಕ್ಕಾಗಿ ಸದಾ ಮಿಡಿದ, ದುಡಿದ ಜೀವ ಅದು. ನಾದದ ಬೆನ್ನು ಹತ್ತಿ ಸಾಗುವಾಗ ಸಮಾಜದ ಸಂಕೋಲೆಗಳು ಅವರನ್ನು ಬಾಧಿಸಲಿಲ್ಲ. ಹೊಟ್ಟೆಯ ಚಿಂತೆ ಇದ್ದರೂ ಅವರ ಗುರಿಗೆ ಧಕ್ಕೆ ಆಗಲಿಲ್ಲ. ಸಂಗೀತದ ಎತ್ತರಕ್ಕೆ ಸಾಗುವ ಹಾದಿಯಲ್ಲಿ ಯಾವ ಕಷ್ಟ ಕೋಟಲೆಗಳೂ ಅವರನ್ನು ಬಾಧಿಸಲಿಲ್ಲ. 'ನಾನು ಸಂಗೀತಕ್ಕಾಗಿ ಹುಟ್ಟಿ ಬಂದವಳು' ಅನ್ನುವುದು ಅವರಾಡುವ ಬರೀ ಮಾತಾಗಿರಲಿಲ್ಲ. ಸಂಗೀತವನ್ನೇ ಅವರು ಉಸಿರಾಡಿದರು. ಅದನ್ನೇ ಹಾಸಿ ಹೊದ್ದವರು.

ಸುಮಾರು 80 ವರ್ಷಗಳ ಸಂಗೀತ ಅನುಭವದ ಮೊತ್ತ ಅವರಾಗಿದ್ದರು. ನಾಡಿನ ಹಿಂದೂಸ್ಥಾನೀ ಸಂಗೀತದ ಜೀವಂತ ವಿಶ್ವ ಕೋಶದ ಒಂದಷ್ಟು ಪುಟಗಳು ಈಗ ಗಂಗೂಬಾಯಿ ಅವರ ಜೊತೆಗೆ ಮರೆಯಾಗಿವೆ. ಅವರ ನಿಧನದಿಂದ ನಾಡು ಒಂದು ಸಮೃದ್ಧ ಸಂಗೀತ ಅನುಭವವನ್ನೇ ಕಳೆದುಕೊಂಡಿದೆ. ಪದ್ಮವಿಭೂಷಣ, ತಾನ್‌ಸೇನ್ ಸಮ್ಮಾನ್ ಸೇರಿದಂತೆ ಲೆಕ್ಕಕ್ಕೆ ನಿಲುಕದಷ್ಟು ಪ್ರಶಸ್ತಿ, ಗೌರವಗಳು ಅವರನ್ನು ಅರಸಿ ಬಂದರೂ 'ಭಾರತರತ್ನ' ಸಿಗಲಿಲ್ಲ ಎಂಬ ಕೊರಗು ಅವರ ಅಭಿಮಾನಿಗಳನ್ನು ಕಾಡುತ್ತಲೇ ಇದೆ. ಗಂಗೂಬಾಯಿ ಆ ಗೌರವಕ್ಕೆ ಯಾವ ದೃಷ್ಟಿಯಿಂದ ನೋಡಿದರೂ ಅರ್ಹರೇ ಆಗಿದ್ದರು. ಆದರೆ ಗಂಗೂಬಾಯಿ ಮಾತ್ರ ಎಂದೂ ಪ್ರಶಸ್ತಿ, ಗೌರವಕ್ಕೆ ಹಾತೊರೆದವರಲ್ಲ. ಪ್ರಶಸ್ತಿಗಳು ಬಂದಾಗ ಬೀಗಿದವರೂ ಅಲ್ಲ. ಸಂಗೀತದ ಔನ್ನತ್ಯ ತಲುಪಿದ ಮೇಲೆಯೂ ಅವರು ಅದೇ ಗಂಗಜ್ಜಿ. ಪುಟ್ಟ ಮಗುವಿನ ಹಾಡನ್ನೂ

ಆಸಕ್ತಿಯಿಂದ ಆಲಿಸುವ ಸರಳ ಜೀವಿ. ಯಾರನ್ನೇ ಆದರೂ ಅಕ್ಕರೆಯಿಂದ ಮಾತನಾಡಿಸಿ, ಅವಿಭಕ್ತ ಕುಟುಂಬದ ಹಿರಿಯಜ್ಜಿಯಂತೆ ಎಲ್ಲರನ್ನೂ ಪ್ರೀತಿಯಿಂದ ಕಾಣುವ ವಿಶಾಲ ಹೃದಯಿ. ಸಂಗೀತಕ್ಷೇತ್ರದ ಎಲ್ಲರಿಗೂ ಅವರು ಅಕ್ಕರೆಯ ಅಜ್ಜಿ ಅಥವಾ ಅಕ್ಕ. 97 ವರ್ಷಗಳ ಸಾರ್ಥಕ ಬದುಕು ಬಾಳಿದ ಅವರು ಶ್ರೇಣೀಕೃತ ಸಮಾಜದ ತಿರಸ್ಕೃತ ಕುಟುಂಬದಲ್ಲಿ ಜನಿಸಿ ಇಡೀ ಸಮಾಜದಿಂದ ಪುರಸ್ಕೃತರಾದ ಸಾಧಕಿ. ಜಾತಿ, ಮತದ ಹೊಟ್ಟು ತೂರಿದ ಪೂಜನೀಯ ಗುರು. ಆಕಾಶವಾಣಿಯಲ್ಲಿ 'ಎ' ದರ್ಜೆಯ ಕಲಾವಿದರಾಗಿ 50 ವರ್ಷ ಕಾಲ ಹಾಡಿದ ಕೀರ್ತಿ ಅವರಿಗಿದೆ. 1913ರ ಮಾರ್ಚ್ 5 ರಂದು ಜನಿಸಿದ ಗಂಗೂಬಾಯಿ ಸಂಗೀತ ಅಕಾಡೆಮಿ ಅಧ್ಯಕ್ಷೆಯಾಗಿ, ವಿಧಾನ ಪರಿಷತ್ ಸದಸ್ಯೆಯಾಗಿ ಕೆಲಸ ಮಾಡಿದ್ದಾರೆ.

'ಬರೇ ಶಾಣ್ಯಾರಾ ಇದ್ರ ಜಗತ್ತು ನಡದೀತೇನು? ನಮ್ಮಂಥ ಸರಸ್ವತಿ ಸೇವಕರು ಎಲ್ಲಿ ಹೋಗಬೇಕು? ನಮ್ಮ ನಾಡಿಗೆ ನಾಳೆ ಸಾಂಸ್ಕೃತಿಕ ವಾರಸುದಾರರು ಬೇಡ್ವಾ? ಮೊದಲು ಪಠ್ಯಾದಾಗ ಸಂಗೀತ ವಿಷಯ ಸೇರಸ್ರಿ' ಎನ್ನುತ್ತಿದ್ದ ಗಂಗೂಬಾಯಿ ಅವರ ಮಾತಿನಲ್ಲಿ ಆಡಳಿತಗಾರರಿಗೆ ಪ್ರೀತಿಯ ಗದರಿಕೆ ಇರುತ್ತಿತ್ತು. ಇಳಿ ವಯಸ್ಸಿನಲ್ಲಿಯೂ ಸಾಮಾಜಿಕ ಜೀವಂತಿಕೆ ಉಳಿಸಿಕೊಂಡ ಅವರು ಕಲಾವಿದರ ಬಗ್ಗೆ ಸದಾ ಮಾತೃ ವಾತ್ಸಲ್ಯ ತೋರಿಸಿದವರು. ಭಾರತದ ಒಂಭತ್ತು ಮಂದಿ ಪ್ರಧಾನ ಮಂತ್ರಿಗಳಿಂದ ಪ್ರಶಸ್ತಿ ಸ್ವೀಕರಿಸಿದ ಭಾಗ್ಯವಂತೆ. ಐದು ಗೌರವ ಡಾಕ್ಟರೇಟ್ ಪಡೆದ ಪುಣ್ಯಜೀವಿ. ಸಂಗೀತದ ಸಂಪ್ರದಾಯದೊಂದಿಗೆ ಅವರೆಂದೂ ರಾಜಿ ಮಾಡಿಕೊಂಡವರಲ್ಲ. ಅವರ ಗಂಭೀರ ಶಾರೀರದಷ್ಟೇ ಅವರ ಸಂಗೀತವೂ ಗಂಭೀರ. ಜನ ಬಯಸುತ್ತಾರೆಂದು ಅವರು ಬದಲಾವಣೆಗೆ ಒಳಗಾದವರಲ್ಲ. ಭಕ್ತಿ ಸಂಗೀತ ಹಾಡಿ ಎಂದರೆ, 'ಹಾಡುವುದನ್ನು ಭಕ್ತಿಯಿಂದಲೇ ಹಾಡುತ್ತೇನಲ್ಲ' ಎಂದು ಉತ್ತರಿಸಿದರೇ ಹೊರತೂ ಕಛೇರಿಗೆ ಜನ ಬರಲಿ ಎಂದು ಶಾಸ್ತ್ರೀಯ ಸಂಗೀತದ ಆಚೆ ಹೋಗಲಿಲ್ಲ. ಅವರಂಥವರು ಯುಗಕ್ಕೊಬ್ಬರು ಸಿಗಬಹುದು. ಅಂಥ ಅಪರೂಪದ ಸಂಗೀತ ಶಾರದೆ ಇನ್ನು ನೋಡಲು ಸಿಗುವುದಿಲ್ಲ. ಆದರೆ ಕೇಳಲು ಸಿಗುತ್ತಾರೆ ಎನ್ನುವುದು ಸಮಾಧಾನದ ಸಂಗತಿ.

ಗಂಗೂಬಾಯಿ ಅವರು ಹಾಡತೊಡಗಿದರೆ ಅಲ್ಲಿ ಗಡುಸಾದ ಕಂಠ ಕೇಳಿಬರುತ್ತಿತ್ತು. ಕವಿ ದ.ರಾ. ಬೇಂದ್ರೆ ಅವರು 'ಗಂಗಮ್ಮ, ನಿನ್ನ ಕಂಠದಾಗ ಶಾಪಗ್ರಸ್ಥ ಗಂಧರ್ವ ಕುಂತಾನ' ಎಂದಿದ್ದರಂತೆ. ಏಕೆಂದರೆ 'ಮಾರವಾ', 'ಮಿಯಾಕಿ ತೋಡಿ', 'ಕಲಾವತಿ', 'ಅಭೋಗಿ ಕಾನಡಾ'ದಂಥ ರಾಗಗಳೇ ತಮ್ಮನ್ನು

ಗಂಗೂಬಾಯಿ ಹಾಡಲಿ ಎಂದು ಬಯಸುವಂಥ ಗಂಧರ್ವ ಗಾಯಕಿ ಗಂಗೂಬಾಯಿ. ಆಕೆ ಸಂಗೀತದ ಇತಿಹಾಸ. ಸವಾಯಿ ಗಂಧರ್ವರ ಶಿಷ್ಯೆಯಾಗಿ ಕಾಲ್ನಡಿಗೆಯಲ್ಲಿ ಹೋಗಿ ಕಚೇರಿ ಕೊಡುವ ಕಾಲದಿಂದ ಇಂದಿನವರೆಗೆ ಸಂಗೀತದೊಂದಿಗೆ ಅವರೂ ಸಾಗಿ ಬಂದಿದ್ದಾರೆ. ಅವರ ಆತ್ಮಚರಿತ್ರೆ, 'ನನ್ನ ಬದುಕಿನ ಹಾಡು' ಕೃತಿಯಲ್ಲಿ ದಾಖಲಾಗದ ಸಂಗತಿಗಳು ಎಷ್ಟೋ ಇವೆ. ಅದನ್ನು ದಾಖಲು ಮಾಡಬೇಕಿದೆ. 'ತುಂಬು ಕುಟುಂಬದಲ್ಲಿ ಮಗುವೊಂದು ತೊಟ್ಟಿಲಲ್ಲಿ ಮಲಗಿರುತ್ತದೆ. ಆ ದಾರಿಯಲ್ಲಿ ಹೋಗುವವರೆಲ್ಲ ಪಾಪ, ಮಗು ಮಲಗಿದೆ ಎಂದು ತೊಟ್ಟಿಲು ತೂಗಿ ಹೋಗುತ್ತಾರೆ. ಹಾಗೇ ಸಂಗೀತ. ಸಂಗೀತದ ತೊಟ್ಟಿಲು ತೂಗುವವರನ್ನು ಅಂದರೆ ಸಂಗೀತದ ಒಳ್ಳೆಯ ಕೇಳುಗರನ್ನು ನಾವು ತಯಾರು ಮಾಡಬೇಕು. ಕೇಳುವವರು ಇದ್ದರೆ ಹಾಡುವವರೂ ಇರುತ್ತಾರೆ' ಎಂಬ ಗಂಗೂಬಾಯಿ ಅವರ ಮಾತು ಅಕ್ಷರಶಃ ಸತ್ಯ. ಅವರ ಆ ಆತ್ಮವಿಶ್ವಾಸ ಹುಸಿಯಾಗದಂತೆ ಮಾಡುವುದು ಅವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ.

(ಉದಯವಾಣಿ 22 ಜುಲೈ)

3. ಗಾಂಧೀಜಿ ಎದುರು ನಿಂತು ಹಾಡಿದಾಗ.....

ಡಾ. ಗಂಗೂಬಾಯಿ ಹಾನಗಲ್ ತಮ್ಮ 97 ವರ್ಷಗಳ ಸಾರ್ಥಕ ಜೀವನದಲ್ಲಿ ಪಡೆದ ಸನ್ಮಾನ, ಪ್ರಶಸ್ತಿ, ಪುರಸ್ಕಾರಗಳ ದೊಡ್ಡ ಪಟ್ಟಿಯೇ ಇದೆ. ಐವರು ರಾಷ್ಟ್ರಪತಿಗಳು, ದೇಶದ ಒಂಬತ್ತು ಮಂದಿ ಪ್ರಧಾನಮಂತ್ರಿಗಳಿಂದ ಗೌರವ ಸ್ವೀಕರಿಸಿದ ಅಪರೂಪದ ಅಜ್ಜಿ ಅವರು.

1971ರಲ್ಲಿ ರಾಷ್ಟ್ರಪತಿ ವಿ.ವಿ. ಗಿರಿಯವರು ಪದ್ಮಭೂಷಣ ನೀಡಿ ಗೌರವಿಸಿದರೆ, 2002ರಲ್ಲಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಪದ್ಮವಿಭೂಷಣ ಪ್ರದಾನ ಮಾಡಿದ್ದಾರೆ. ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು 2005ರಲ್ಲಿ ಬೆಂಗಳೂರಿನಲ್ಲಿ ಗಾಯನ ಸಮಾಜ ಸೆಂಚುರಿ ಪ್ರಶಸ್ತಿ, 2006ರಲ್ಲಿ ಬೆಂಗಳೂರಿನಲ್ಲಿ ಇಂಡಿಯನ್ ಮ್ಯೂಜಿಕ್ ಪ್ರಶಸ್ತಿ, ಅದೇ ವರ್ಷ ಮುಂಬೈನಲ್ಲಿ ಮ್ಯೂಜಿಕ್ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದರು.

ಗಾಂಧೀಜಿ ಸಮ್ಮುಖದಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಮೌಲಾನಾ ಅಬ್ದುಲ್ ಕಲಾಂ ಅಜಾದ್, ಸರೋಜಿನಿ ನಾಯ್ಡು ಅವರ ಮುಂದೆ ಗಾಯನ ಪ್ರಸ್ತುತ ಪಡಿಸಿದಾಗ ಗಂಗೂಬಾಯಿಯವರ ವಯಸ್ಸು ಕೇವಲ 11.

ಮೊರಾರ್ಜಿ ದೇಸಾಯಿ, ಚೌಧರಿ ಚರಣಸಿಂಗ್, ಇಂದಿರಾ ಗಾಂಧಿ, ರಾಜೀವ ಗಾಂಧಿ, ವಿ.ಪಿ. ಸಿಂಗ್, ಪಿ.ವಿ. ನರಸಿಂಹರಾವ್, ಎಚ್.ಡಿ. ದೇವೇಗೌಡ, ಅಟಲ್ ಬಿಹಾರಿ ವಾಜಪೇಯಿ, ಐ.ಕೆ. ಗುಜ್ರಾಲ್ ಅವರು ಪ್ರಧಾನಿಯಾಗಿದ್ದಾಗ ಗಂಗೂಬಾಯಿಯವರನ್ನು ಗೌರವಿಸಿದ್ದಾರೆ.

ಆರು ಡಾಕ್ಟರೇಟ್‌ಗಳ ಗೌರವ; 1967ರಲ್ಲಿ ಧಾರಾವಾಡದ ಕರ್ನಾಟಕ ವಿವಿ, 1986ರಲ್ಲಿ ಗುಲ್ಬರ್ಗ ವಿವಿ, 1995ರಲ್ಲಿ ಹಂಪಿ ವಿವಿಯ ನಾಡೋಜ, ಅದೇ ವರ್ಷ ಮುಂಬೈನ ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯದ ಅಧ್ಯಕ್ಷ ಶಾಮಸುಂದರ ಸಂಗಮಕರ ಅವರಿಂದ ಸಂಗೀತ ಮಹಾಮಹೋಪಾಧ್ಯಾಯ (ಡಾಕ್ಟರ್ ಆಫ್ ಮ್ಯೂಜಿಕ್) 1998ರಲ್ಲಿ ದೆಹಲಿ ವಿವಿ, 2008ರಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿಯು ಗೌರವ ಡಾಕ್ಟರೇಟ್‌ಗಳನ್ನು ನೀಡಿ ಗೌರವಿಸಿದೆ. (ಪ್ರಜಾವಾಣಿ ವಾರ್ತೆ22 ಜುಲೈ)

4. ಹಾಡು ಮುಗಿಸಿದ ಗಾನಗಂಗೆ

ಕಿರಣಾ ಘರಾನದ ಇನ್ನೊಂದುಕೊಂಡಿ ಕಳಚಿದೆ. ಹಿಂದೂಸ್ತಾನಿ ಸಂಗೀತ ಲೋಕದ ದಂತಕತೆ, ಗಾಯನ ಗಂಗೆ, ಗಂಗೂಬಾಯಿ ಹಾನಗಲ್ 'ಜೀವನದ ಹಾಡು' ಮುಗಿಸಿದ್ದಾರೆ.

ಕೆಲದಿನಗಳಿಂದ ಅಸ್ವಸ್ಥರಾಗಿದ್ದ ಗಂಗಜ್ಜಿ 22.7.09. ಮಂಗಳವಾರ ಬೆಳಗ್ಗೆ ನಿಧನರಾದರು. ಸೋಮವಾರ ರಾತ್ರಿ ಎರಡು ಬಾರಿ ಲಘು ಹೃದಯಾಘಾತದಿಂದ 97 ವರ್ಷದ ಹಿರಿಯ ಜೀವ ಚೇತರಿಸಿಕೊಂಡಿತು. ಆದರೆ, ಮಂಗಳವಾರ ಬೆಳಿಗ್ಗೆ 7–10ರ ವೇಳೆ ಸಂಭವಿಸಿದ ಹೃದಯ ಸ್ತಂಭನದಿಂದ ಅವರು ಉಳಿಯಲಿಲ್ಲ.

ಕೊನೆ ಕ್ಷಣದಲ್ಲಿ ಮಕ್ಕಳು ಮತ್ತು ಮೊಮ್ಮಕ್ಕಳು ಅವರ ಜೊತೆಗಿದ್ದರು. ಉಸಿರಾಟದ ತೊಂದರೆ ಎದುರಾಗಿದ್ದರಿಂದ ಕಳೆದ ವಾರ ಅವರನ್ನು ಇಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಗಂಗೂಬಾಯಿ ಜೀವನ ಪ್ರೇಮ ಅವರನ್ನು ಮೂಳೆ ಕ್ಯಾನ್ಸರ್ ಎಂಬ ಸಾವಿನ ದವಡೆಯಿಂದ ಪಾರು ಮಾಡಿತ್ತು. ಪ್ರಬಲ ಇಚ್ಛಾ ಶಕ್ತಿ ಅವರಲ್ಲಿತ್ತು ಎಂಬುದನ್ನು ವೈದ್ಯರೂ ಒಪ್ಪುತ್ತಾರೆ. ಹಿಂದೂಸ್ಥಾನಿ ಸಂಗೀತ ಲೋಕದ ಸಾಮ್ರಾಜ್ಞಿ ಎಂದೇ ಗುರುತಿಸಿಕೊಂಡಿದ್ದ ಗಂಗಜ್ಜಿ ಪುರುಷ ಧ್ವನಿಯಲ್ಲೇ ಸಂಗೀತಕ್ಕೆ ಹೊಸ ಛಾಪು ನೀಡಿದರು. 7 ದಶಕಗಳ ದೀರ್ಘ ಗಾಯನ ಜೀವನ ಅವರದು. ಸಾಧನೆಗಳ ನಡುವೆ ವಿನಮ್ರ ಪ್ರೀತಿಯೊಂದಿಗೆ ಸರಳ ಬದುಕು. ಜಾತಿ ಮತ್ತು ಬಡತನದ ವಿರುದ್ಧ ಸತತ ಸೆಣಸಾಟ.

ಅಂತಿಮ ಗಳಿಗೆಯಲ್ಲಿ ಅವರು ತಮ್ಮ ಕಣ್ಣುಗಳನ್ನು ದಾನ ಮಾಡಿದ್ದಾರೆ. ಹುಬ್ಬಳ್ಳಿಯ ನೃಪತುಂಗ ಬೆಟ್ಟದ ಹಿಂಭಾಗದಲ್ಲಿ ಸರ್ಕಾರ ಸ್ಥಾಪಿಸಿರುವ ಗಂಗೂಬಾಯಿ ಹಾನಗಲ್ ಸಂಗೀತ ಗುರುಕುಲ ಅಕಾಡೆಮಿ ಬಳಿ ಅವರ ಸ್ಮಾರಕವೊಂದನ್ನು ನಿರ್ಮಿಸಲು ಅವರ ಕುಟುಂಬ ಉದ್ದೇಶಿಸಿದೆ.

ಹಾನಗಲ್ ನಿಧನಕ್ಕೆ ಶೋಕ ಸೂಚಿಸಿ ಬುಧವಾರ ಧಾರವಾಡ ಜಿಲ್ಲೆಯ ಶಾಲೆ ಮತ್ತು ಸರ್ಕಾರಿ ಕಛೇರಿಗಳಿಗೆ ರಜೆ ಘೋಷಿಸಲಾಗಿದೆ. ಎರಡು ದಿನಗಳ ಶೋಕಾಚರಣೆಯನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ.

ಗಾನೇವಾಲಿಯಿಂದ ಗಾನಕೋಗಿಲೆವರೆಗೆ.....: 'ಗಾನೇವಾಲಿ' ಎಂಬ ಮೂದಲಿಕೆಯ ನಡುವೆಯೇ ಸಾಗಿಬಂದ ದುರ್ಗಮ ದಾರಿಯಲ್ಲಿ 'ಡಾ. ಗಂಗೂಬಾಯಿ ಹಾನಗಲ್ ಏರಿದ ಜಾಗತಿಕ ಎತ್ತರ ಕಣ್ಮುಂದೆ ಇದೆ. ಸಹನೆಯೇ ಅವರನ್ನು ಭಾರತೀಯ ಹಿಂದೂಸ್ತಾನಿ ಕ್ಷೇತ್ರದ ಉತ್ತುಂಗಕ್ಕೆ ತಲುಪಿಸಿದೆ. ದೇಶ ಕಂಡ ಅತ್ಯುತ್ತಮ ಗಾಯಕಿ ಕರ್ನಾಟಕದವರು ಎಂಬುದು ಕನ್ನಡಿಗರ ಹೆಮ್ಮೆಯಾದರೆ, ಹಿಂದೂಸ್ಥಾನೀ ಪರಂಪರೆಯ ಪ್ರಮುಖ ವಾಹಕಿ ಎನ್ನುವುದು ಸಂಗೀತಲೋಕದ ಹೆಮ್ಮೆ.

ನೆಚ್ಚಿಕೊಂಡಿದ್ದು ಮೂರೇ ವಿಚಾರ ; ಗಂಗೂಬಾಯಿ ಓರ್ವ ಅಸಾಧಾರಣ ಪ್ರೇಮಿ. ಸಂಗೀತ, ಕನ್ನಡದ ನೆಲ ಮತ್ತು ತಮ್ಮ ಪತಿಯನ್ನು ಅವರು ಪ್ರೀತಿಸಿದ ಪರಿ ಅವರ ಸಮರ್ಪಣಾ ಮನೋಭಾವಕ್ಕೆ ಹಿಡಿದ ಕನ್ನಡಿ.

ಮೊತ್ತ ಮೊದಲು ಅವರು ತಮ್ಮನ್ನು ಅರ್ಪಿಸಿಕೊಂಡಿದ್ದು ಸಂಗೀತಕ್ಕೆ. ಸಾಧನೆ, ಪುರಸ್ಕಾರಗಳು ಸಾಕಷ್ಟು ಸಂದರೂ ಸಮಕಾಲೀನರ ಹಂಗಿನ ಮಾತುಗಳನ್ನು ಅವರು ಸಹಿಸಿಕೊಂಡವರು. ಸವಾಯಿ ಗಂಧರ್ವರ ಶಿಷ್ಯೆಯಾಗಿ, ಪಂಡಿತ್ ಭೀಮ್‌ಸೇನ್ ಜೋಶಿಯವರ ಸಹಪಾಠಿಯಾಗಿದ್ದ ಗಂಗೂಬಾಯಿ ಸ್ವಚ್ಛ ಸಂಗೀತದ ವಾಹಕರು. ಕಿರಾಣಾ ಘರಾನದ ಆರಾಧಕಿ. ಆದರೆ ಪ್ರಶಸ್ತಿ, ಪ್ರಚಾರದ ಬೆನ್ನು ಬೀಳಲಿಲ್ಲ.

ಹಿಂದೂಸ್ತಾನಿ ಗಾಯಕರು ರಾಜ್ಯದ ಹೊರಗೆ ನೆಲೆಸಿ ಪ್ರಸಿದ್ಧಿ ಗಿಟ್ಟಿಸಿದ ಉದಾಹರಣೆಗಳೇ ಹೆಚ್ಚು. ಆದರೆ ಗಂಗೂಬಾಯಿ ನೆಚ್ಚಿದ್ದು ಕನ್ನಡದ ಗಂಡು ಭೂಮಿಯನ್ನು ವೈಯಕ್ತಿಕ ಬದುಕಿನಲ್ಲಿಯೂ ತಮ್ಮ ಜಾತಿ ಬಗ್ಗೆ ಕೀಳರಿಮೆಯ ಮುಸುಕು ಹೊದ್ದವರಲ್ಲ. ಪತಿ ಗುರುರಾವ್ ಕೌಳಗಿ ಬ್ರಾಹ್ಮಣರು. ಆದರೆ ಅವರ ಏಳಿಗೆಗಾಗಿ ತಾವು ಮಾತ್ರ 'ಹಾನಗಲ್' ಆಗಿಯೇ ಉಳಿದರು. ಗಳಿಕೆಯನ್ನೆಲ್ಲಾ ಪತಿಗಾಗಿಯೇ ವ್ಯಯಿಸಿದರೂ ಅವರ ವ್ಯಕ್ತಿತ್ವಕ್ಕೆ ತನ್ನಿಂದ ಕುಂದು ಬಾರದಂತೆ ನಿಗಾ ವಹಿಸಿದ್ದರು.

ನಾಲ್ಕೇ ರಾಗಗಳ ಮೂಲಕ ಸಂಗೀತಲೋಕದ ಪರಿಚಿತದ ಇಂಚಿಂಚನ್ನೂ ತಿಳಿ ಹೇಳಿದ ಗುರು ಸವಾಯಿ ಗಂಧರ್ವ, ಸಹಪಾಠಿ ಭೀಮಣ್ಣಾ ತನ್ನ ಸಾಧನೆಯಲ್ಲಿ ನೆರಳಾದವರು ಎಂದು ಹೇಳಿಕೊಳ್ಳುತ್ತಿದ್ದರು. ಗಂಗಜ್ಜಿ. ಗಾಯನಕ್ಕೆ ದನಿಗಿಂತ ಗುಣಮಟ್ಟ ಮತ್ತು ಶೈಲಿಯೇ ಮುಖ್ಯ ಎನ್ನುವ ಕೆಚ್ಚೆದೆಯಿಂದ ಹಾನಗಲ್ ಹಾಡುವುದನ್ನು ಮುಂದುವರೆಸಿದ್ದರು.

(ದಿ ಟೈಮ್ಸ್ ಆಫ್ ಇಂಡಿಯಾ 22 ಜುಲೈ)






FELICITA




























ಸುಂದರ ಪ್ರಕಾಶನದ ಚಿತ್ರರಂಗಕ್ಕೆ ಸಂಬಂಧಪಟ್ಟ ಮುಖ್ಯ ಪ್ರಕಟಣೆಗಳು

ಪುಸ್ತಕದ ಹೆಸರು	ಲೇಖಕರು	ಬೆಲೆ
ಚಲನಚಿತ್ರ ಲೇಖಕರು	ಟಿ.ಜಿ. ರಾಜಶೇಖರಯ್ಯ	40/-
ಕಲಾಕಂಠೀರವ ಡಾ. ರಾಜ್‌ಕುಮಾರ್	ಸಂ. ಗೌರಿ ಸುಂದರ್	500/-
ರಾಮಾಯಣ: ಜಿ.ವಿ. ಅಯ್ಯರ್ ದೃಷ್ಟಿಯಲ್ಲಿ	ಜಿ.ವಿ. ಅಯ್ಯರ್	275/-
[illegible] ಕಂಡ [illegible] ಜಿ.ವಿ. ಅಯ್ಯರ್	ಸಂ. ಎಚ್.ಜಿ. ಸೋಮಶೇಖರರಾವ್	250/-
ಕಾವೇರಿ ಮೆಟ್ಟಿಲು-ಚಲನಚಿತ್ರದ ಕಥೆ	ಡಾ.ಡಿ.ಕೆ. ಬಸವೇಗೌಡ	100/-
ಆವರಣದ ಅವಲೋಕನ	ಸಂ.ಡಾ.ಎಲ್.ಎಸ್.ಶೇಷಗಿರಿ/	180/-
ರಕ್ತಾಕ್ಷಿ	ಮೂಲ: ಕುವೆಂಪು/ ರಂಗದರ್ಶನ: ಕೆ.ಆರ್.ಸಿಂಹ ಸುಂದರ್	60/-
ನೆನಪಿನ ಅಂಗಳದಲ್ಲಿ ಡಾ. ರಾಜ್	ಸಂ. ಗೌರಿ ಸುಂದರ್	85/-
[illegible]	ಎ.ಎಸ್. ಮೂರ್ತಿ	60/-
[illegible]	ಎಚ್.ಜಿ. ಸೋಮಶೇಖರರಾವ್	120/-
ಬೊಂಬೆಯಾಟವಯ್ಯಾ	ಎಂ.ಎಸ್. ಉಮೇಶ್	105/-
ಚಿತ್ರರಂಗದ [illegible]	ಸಂ. ಗೌರಿ ಸುಂದರ್	160/-
ಗಂಧರ್ವ ಗಾಯಕ ಡಾ. ಶಿವಮೊಗ್ಗ ಸುಬ್ಬಣ್ಣ	ಸಂ. ಗೌರಿ ಸುಂದರ್	100/-
[illegible]	ಸಂ. ಗೌರಿ ಸುಂದರ್	150/-
ಹೇಗಿದ್ದ ಹೇಗಾದ ಗೊತ್ತಾ?	ಗಣೇಶ್ ಕಾಸರಗೋಡು	80/-
ಕಲಾತಪಸ್ವಿ ರಾಜೇಶ್	ನಿರೂಪಣೆ: ರಾಜೇಶ್	80/-
[illegible] ಉದಯಕುಮಾರ್	ಡಾ. ಮೋಹನ್‌ಕುಮಾರ್	75/-
ಕವಿಗೀತ ಸಂಪುಟ	ಎಸ್.ಎಸ್. ಶ್ರೀಧರಮೂರ್ತಿ	80/-
[illegible]	ಎಸ್. ಯಶವಂತಕುಮಾರ್	80/-
[illegible]	ಎಸ್. ಜಗನ್ನಾಥ ಬಹುಳೆ	75/-
[illegible]	ಬಾಬು ದಿನಕರ	90/-
ಬೆಳ್ಳಿತೆರೆಯ ಅಮೃತ ಕಳಶ ವಿ. ರವಿಚಂದ್ರನ್	ಗಣೇಶ್ ಕಾಸರಗೋಡು	80/-
ಬೇಡರ ಕಣ್ಣಪ್ಪದ [illegible]	ಎಸ್. ಜಗನ್ನಾಥ ಬಹುಳೆ	70/-
ಮಣ್ಣಿನ ಮಗನ ಮನದಾಳ	ಗೀತಪ್ರಿಯ	80/-
[illegible]	ಎಸ್.ಎಸ್.ಶ್ರೀಧರಮೂರ್ತಿ	80/-

■ ಗಗನ 7.0ಗೆ

ಸುವರ್ಣ ತಾರೆ ಡಾ.ಬಿ. ಸರೋಜಾದೇವಿ	ಮುರಳಿಕೃಷ್ಣ ಬೆಳಾಲು	80/-
ಧೀಮಂತ ನಟ ಕೆ.ಎಸ್. ಅಶ್ವತ್ಥ್	ಮಮತ/ ಪ್ರೀತಿ/ ಬಾಬು ದಿನಕರ್	80/-
ತಾರಾತೇರು	ಕೆ.ಎಸ್. ವಾಸು	80/-
ಚಿತ್ರರಂಗದ ಮಹಾಮೇಧಾವಿ	ಸಿ.ವಿ. ಶಿವಶಂಕರ್	70/-
ಹುಣಸೂರು ಕೃಷ್ಣಮೂರ್ತಿ		50/-
ಬೆಳ್ಳಿತೆರೆಯ ಬಾಂಧವ್ಯ	ಎನ್.ಎಸ್. ಶ್ರೀಧರಮೂರ್ತಿ	80/-
ಶ್ರೇಷ್ಠ ಚಿತ್ರಗಳ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್	ಎಸ್. ಜಗನ್ನಾಥ ಬಹುಳೆ	80/-
ಚಿತ್ರರಂಗ ಅಂದು-ಇಂದು	ಸಿ.ವಿ. ಶಿವಶಂಕರ್	80/-
ಡಾ.ರಾಜ್; ನೂರು ಚಿತ್ರಗಳು ನೂರು ಗೀತೆಗಳು	ಕೆ.ಎಸ್. ನೀಳಾ	100/-
ದಶದಿಕ್ಕುಗಳ ಮಹಾನ್ ತಾರೆಯರು	ಶ್ರೀಮತಿ ವಿಜಯಶ್ರೀ/ಎಂ.ಎ.ವೆಂಕಟೇಶ್	80/-
ಹತ್ತು ರತ್ನಗಳು	ಎಸ್. ಯಶವಂತಕುಮಾರ್	80/-
ಸಂಗೀತ ಲೋಕದ ಪಂಚರತ್ನಗಳು	ಎಸ್. ಯಶವಂತಕುಮಾರ್	80/-
ಕಲಾವಿದರ ಕಲಾವಿದರು	ಪಿ.ಆರ್. ಮೋಹನರಾವ್	80/-
ಅಭಿಮಾನದ ಬಾಲಣ್ಣ	ಕಿ.ಚನ್ನರಾಯಪ್ಪ ಜ.ನಾ.ಹಳ್ಳಿ	80/-
ಕನ್ನಡ ಚಿತ್ರರಂಗ-ಚಳುವಳಿ	ಎಸ್. ಆನಂದರಾಮರಾವ್	80/-
ಗುಗ್ಗು ಮಹಲ್‌ನ ಸಂಭಾವಿತ ನಟ ಗುಗ್ಗು	ಸಿ.ವಿ. ಶಿವಶಂಕರ್	80/-
ಕನ್ನಡ ಚಿತ್ರರಂಗದ ರಣಧೀರರು	ಸಂ. ಗೌರಿ ಸುಂದರ್	80/-
ಚಿರಂಜೀವಿ	ಎನ್.ಎಸ್. ಶ್ರೀಧರಮೂರ್ತಿ	80/-
ಪ್ರಜ್ಞಾವಂತ ನಟ ತಮಾಷೆ ಮಾಧವರಾವ್	ಸಂ. ಗೌರಿ ಸುಂದರ್	80/-
ಸಿನಿಮಾ ವೃತ್ತಾಂತ	ವಿನಾಯಕರವ್ ಕಲಗಾರು	80/-
ಮೈಸೂರಿನ ನಕ್ಷತ್ರಗಳು	ಎಂ.ಎ. ವೆಂಕಟೇಶ್	80/-
ಮಿನುಗಿ-ನಲುಗಿದ ಕಲ್ಪನಾ	ಡಾ. ವಿಜಯ ಸುಬ್ಬರಾಜ್	70/-
ಚಿರಂಜೀವಿ ಉದಯಶಂಕರ್	ಎನ್.ಎಸ್. ಶ್ರೀಧರಮೂರ್ತಿ	80/-

ಸುಂದರ ಪ್ರಕಾಶನದ ಸಾಹಿತ್ಯಲೋಕಕ್ಕೆ ಸಂಬಂಧಪಟ್ಟ ಮುಖ್ಯ ಪ್ರಕಟಣೆಗಳು (31.12.2008) ರವರೆಗೆ

ಪುಸ್ತಕದ ಹೆಸರು	ಲೇಖಕರು	ಬೆಲೆ
ಆಳ್ವಾರರ ಕೊಡುಗೆ	ಡಾ.ಸಿ.ಎಸ್. ಊರ್ಮಿಳಾ	120/–
ಅನಂತ ಸಾಹಿತ್ಯ	ಸಂ. ಗೌರಿ ಸುಂದರ್	250/–
ಅಸ್ಥಿಪಂಜರ ಮತ್ತು ಇತರ ಕಥೆಗಳು	ಅಮೃತಾ ಪ್ರೀತಂ/ ಭಾರತಿ ಮೋಹನ ಕೋಟಿ	80/–
ಅರೆಬೊಕ್ಕತಲೆಯವರು	ಎಚ್.ಎಸ್. ನವೀನಕುಮಾರ್	65/–
ಅವಧರಿಸು ಬಾ	ತೇಜಸ್ವಿನಿ ಅರಸ್	100/–
ಆವರಣದ ಅವಲೋಕನ	ಸಂ.ಪ್ರೊ.ಎಲ್.ಎಸ್.ಶೇಷಗಿರಿ/ ಗೌರಿ ಸುಂದರ್	180/–
ಅಯ್ದ ಅರವತ್ತು ಕವಿತೆಗಳು	ರವಿ ಉಪಾಧ್ಯ	75/–
ಭ್ರಮಣ	ಎಚ್.ಜಿ ಸೋಮಶೇಖರರಾವ್	200/–
ಬೆತ್ತಲೆ ಹರಕೆ ಮತ್ತು ವೀರಕದಂಬ	ಡಾ. ದಿವಸ್ಪತಿ ಹೆಗಡೆ	60/–
ಬಾರೋ ಬಾರೋ ಬಸವಣ್ಣ – ಕರುಣೆಗೆ ಜೈ	ಮೋ.ನಾ. ಸತ್ಯ	40/–
ಬದಕೂರಿನ ದಾರಿಯಲ್ಲಿ	ಅರ್ಜುನ ಕೋರಟಕರ	70/–
ಭವ್ಯ ಭಾರತದ ದಿವ್ಯ ರಾಷ್ಟ್ರಪತಿಗಳು	ಸಂ. ಗೌರಿ ಸುಂದರ್	100/–
ಚಾಪಲ್ಯ ಚಿಂತಾಮಣಿ	ಸಿ.ಎನ್. ಕೃಷ್ಣಮಾಚಾರ್	50/–
Columbus & other Poems	B.R. Laksman Rao	60/-
ದೇವಸ್ಥಾನಕ್ಕೆ ಪೋಲೀಸ್ ಭೇಟಿ	ಡಾ. ಡಿ.ವಿ. ಗುರುಪ್ರಸಾದ್	75/–
ದೇಸಿ Vs ಪರದೇಸಿ	ಎ.ಎಸ್. ಮೂರ್ತಿ	30/–
ಗೆಳೆಯೇ ಓ ಗೆಳೆಯೇ	ನಾ. ಡಿಸೋಜ	100/–
ಹೇಗೆ ಕಂಡೀತು	ಶೇಷಣ್ಣ – ಕಿರಣ್ ವಟಿ	80/–
ಗುಜರಾತ್ ಚುನಾವಣೆ ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ	ಜ್ಞಾನಪೀಠ ಮತ್ತು ಇತರ ಕವಿತೆಗಳು	50/–
ಕಾಲ ಮಾಯಾಜಾಲ	ಮಾರ್ಕಂಡಪುರಂ ಶ್ರೀನಿವಾಸ್	100/–
ಕಂಡೇರಿ	ಕಾ.ತ. ಚಿಕ್ಕಣ್ಣ	200/–
ಕ್ರಮಣ	ಡಾ. ಸುರೇಶ ಪಾಟೀಲ	150/–
ಕಪ್ಪಣ್ಣ ರಂಗಾವತರಣ	ಅವರಿವರು ಕಂಡಂತೆ	200/–

■ ಗಗನ ಗಂಗೆ

ಕಲಿಯೋಣ ಬನ್ನಿ	ಡಾ. ಕುಸುಮಾ ಭಟ್ಟ	30/–
ಕಬೀರ ಮತ್ತು ಸರ್ವಜ್ಞದ ವಚನಗಳು	ಎಚ್.ಎಸ್. ಪಾರ್ವತಿ	80/–
ಮುಂಬಯಿ ನಂಟು ಮತ್ತು ಕನ್ನಡ	ವ್ಯಾಸರಾಯ ಬಲ್ಲಾಳ	130/–
ಮಹಾಭಾರತದ ಉಪಕಥೆಗಳು	ಎಚ್.ಎಸ್. ಪಾರ್ವತಿ	80/–
ಮದುವೆಯ ಈ ಬಂಧ	ಸಂ. ಗೌರಿ ಸುಂದರ್	80/–
ಮೊಬೈಲ್ ಧ್ವನಿಗಳು	ಎನ್.ಎಸ್. ಶ್ರೀಧರಮೂರ್ತಿ	50/–
ಮುಗಿಲಗಲ	ಪ್ರೊ. ಕೆ.ಇ. ರಾಧಾಕೃಷ್ಣ	140/–
ನಂದ ನಂದನ	ಎಚ್.ಎಸ್. ಪಾರ್ವತಿ	100/–
ನಗುನಗುತಾ ನಲಿ	ಚಿಕ್ಕಮಗಳೂರು ರಮೇಶ್	120/–
ನ್ಯಾಯಮೂರ್ತಿ ನಿಟ್ಟೂರು	ಸಂ. ಗೌರಿ ಸುಂದರ್	250/–
ಪರೋಕ್ಷ	ಡಾ. ಶತಾವಧಾನಿ ಆರ್. ಗಣೇಶ್	120/–
ಪಾತ್ರಗಳು ದೇವರಿಲ್ಲದ ಗೋಡೆ	ದಮಯಂತಿ ನರೇಗಲ್ಲ/ ಶಿರಗಾನಹಳ್ಳಿ ಶಾಂತನಾಯ್ಕ	60/–
ಪರಮಾತ್ಮ ಇದ್ದಾನೆ	ಗುಂಡೋ ಹರಿಹರ ರಾಮಚಂದ್ರ	40/–
ಪ್ರೇಮದಂಗಳ ತಾಜ್‌ಮಹಲ್	ಸಂ. ಗೌರಿ ಸುಂದರ್	80/–
ರಾಷ್ಟ್ರಪತಿಗಳ ಜತೆ 14 ದಿನ	ವಿಶ್ವೇಶ್ವರ ಭಟ್	150/–
ರಾವಣಾಸುರನ ಕಣಸು	ಡಾ. ಜಯಂತಿ ಮನೋಹರ್	80/–
Roots & Wings - P. Srinivasa Rao	Prof. Sumatheendra Nadig	60/-
ಸಿಂಗಾರಿ	ಡಾ. ಎಚ್.ಎಸ್. ವೆಂಕಟೇಶಮೂರ್ತಿ	100/–
ಸುನೀತಾಗೆ ಮಲ್ಲಿಗೆ ಎಂದರೆ ಇಷ್ಟ	ಭಾಸ್ಕರ ಹೆಗಡೆ	100/–
ಎಸ್.ಎಲ್.ಭೈರಪ್ಪ ಕೃತಿಗಳ ವಿಮರ್ಶೆ	ಸಂ.ಡಾ. ಸುಮತೀಂದ್ರ ನಾಡಿಗ್	300/–
ಶಬ್ದಸಾಗರ – ಪ್ರೊ.ಜಿ.ವೆಂಕಟಸುಬ್ಬಯ್ಯ	ಸಂ.ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್	250
ಸಣ್ಣಕಥೆಗಳು	ಸಂ.ಎಂ.ವಿ. ಅನಂತರಾಮಯ್ಯ	30/–
ಸಖಿ ಬಾ ಸಂಚಾರಕೆ	ಡಾ. ವಿಜಯಾ ಸುಬ್ಬರಾಜ್	60/–
Soul for Sale	T.N. Sitaram/Ritwick Simha	80/-
ಸುಲಭ ಚಿಕಿತ್ಸೆ	ಪಂ. ರಾಜೀವ ತಾರಾನಾಥ	80/–
ಶಿಲೆ ಕಲೆ	ಡಾ. ಚೂಡಾಮಣಿ ನಂದಗೋಪಾಲ್	600/–
ಸುಂದರಕಾಂಡ	ಸಂ. ಎಂ.ವಿ. ಅನಂತರಾಮಯ್ಯ	100/–
ಟಿಪ್ಪು ಕನ್ನಡ ದ್ರೋಹಿಯೇ?	ಸಂ. ಗೌರಿ ಸುಂದರ್	175/–
The Earth too is Sky	Prof. H.S. Venkatesha Murthy	70/-
ವ್ಯಾಸ ಸಾಹಿತ್ಯ	ವ್ಯಾಸರಾಯ ಬಲ್ಲಾಳ –ಸಂ. ಗೌರಿ ಸುಂದರ್	200/–
ವಂಡರ್‌ಫುಲ್ ವೈಎನ್‌ಕೆ	ಸಂ. ಗೌರಿ ಸುಂದರ್	150/–
ಎದ್ದು ಬಿದ್ದ ಸದ್ದಾಂ	ಸಂ. ಗೌರಿ ಸುಂದರ್	85/–
ಗಗನ ಗಂಗೆ ಡಾ. ಗಂಗೂಬಾಯಿ ಹಾನಗಲ್	ಸಂ. ಗೌರಿ ಸುಂದರ್	80/–









ಸುಂದರ ಪ್ರಕಾಶನ

'ಚಿತ್ರಶ್ರೀ' – 43, ಕಲಾಮಂದಿರ, 5ನೇ ತಿರುವು, ಅ.ನ. ಸುಬ್ಬರಾವ್ ರಸ್ತೆ
ಹನುಮಂತನಗರ, ಬೆಂಗಳೂರು – 560 019.
080–6562 3165, 93428 64226